ಮಂಗಳವಾರ, ಡಿಸೆಂಬರ್ 26, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ರಿಸ್‌ಮಸ್ ಸಂಭ್ರಮ
ಬಾಲಿವುಡ್ ದಂಪತಿ ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ತಮ್ಮ ಮಗಳು ರಾಹಾ ಜೊತೆ ಮುಂಬೈನಲ್ಲಿ ಕಾಣಿಸಿಕೊಂಡಿದ್ದು ಹೀಗೆ...

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ

ಯುವಜನರ ಭಾಗ್ಯವಿಧಾತ...

ಯುವನಿಧಿ

ಪ್ರತಿ ತಿಂಗಳು ನಿರುದ್ಯೋಗ ಭತ್ಯೆ

₹3000 ಪದವೀಧರರಿಗೆ | **₹1500** ಡಿಪ್ಲೋಮಾ ಪದವೀಧರರಿಗೆ

ಉದ್ಯೋಗ ದೊರೆಯುವ ವರೆಗೆ ಸರ್ಕಾರ ನೀಡುವ 3000 ರೂ. ನಮ್ಮಂತಹ ಇಂಜಿನಿಯರಿಂಗ್ ಪದವೀಧರರಿಗೆ ಹೆಚ್ಚು ಅನುಕೂಲ ಮಾಡಿಕೊಡಲಿದೆ. ಈ ಸಹಾಯಧನದಿಂದ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಆಗುವ ಖರ್ಚನ್ನು ಭರಿಸಲು ನೆರವಾಗಲಿದೆ.

-ಭೂಮಿಕ ಎಸ್. ತಗಡೂರು

ಇಂಜಿನಿಯರಿಂಗ್ ಓದಿರುವ ನಾನು ಕೆಲಸದ ಹುಡುಕಾಟದಲ್ಲಿದ್ದೇನೆ. ಮುಂದಿನ ಎರಡು ವರ್ಷಗಳವರೆಗೆ ಸರ್ಕಾರ ನೀಡುವ 3000 ರೂ. ನನ್ನ ಪ್ರತಿ ತಿಂಗಳ ಖರ್ಚನ್ನು ಸರಿದೂಗಿಸಿಕೊಳ್ಳಲು ನೆರವಾಗಲಿದೆ. ಇದಕ್ಕಾಗಿ ಸರ್ಕಾರಕ್ಕೆ ಅನಂತ ಅನಂತ ಧನ್ಯವಾದಗಳು.

- ನಾಗರಾಜ್

ಪದವಿ ಹೊಂದಿರುವ ನನಗೆ ಆರ್ಥಿಕ ತೊಂದರೆಯಿಂದ ಕೆಲಸ ಮಾಡುವುದು ಅನಿವಾರ್ಯ. ಮನೆಯ ಖರ್ಚನ್ನು ನಿಭಾಯಿಸಲು ಕೆಲಸ ಹುಡುಕುತ್ತಿರುವ, ನನಗೆ ಪ್ರತಿ ತಿಂಗಳು ಸರ್ಕಾರ ನೀಡುವ 3000 ರೂ. ನನ್ನಲ್ಲಿ ಆರ್ಥಿಕ ಚೈತನ್ಯ ತುಂಬಿದೆ. ಇದಕ್ಕಾಗಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಗೆ ಧನ್ಯವಾದಗಳು.

- ಕೀರ್ತನಾ

ಯುವಜನರ ಶ್ರೇಯೋಭಿವೃದ್ಧಿ
ಸನ್ಮಾನ್ಯ ಮುಖ್ಯಮಂತ್ರಿ
ಶ್ರೀ ಸಿದ್ದರಾಮಯ್ಯ ಅವರ
ನೇತೃತ್ವದ ಸರ್ಕಾರದ ಸಂಕಲ್ಪ.
ಉದ್ಯೋಗ ದೊರೆಯುವವರೆಗೆ
ಅಥವಾ ಗರಿಷ್ಠ 2 ವರ್ಷದವರೆಗೆ
ಯುವನಿಧಿ ಯೋಜನೆಯಡಿ
ಸಹಾಯಧನ ನೀಡಿ ಯುವಕ ಯುವತಿಯರ
ಬದುಕಿನ ಆಶಾಕಿರಣವಾಗಿದೆ.

ಯುವನಿಧಿ ಯೋಜನೆ ಬಗ್ಗೆ ಮಾಹಿತಿ ನೀಡುತ್ತಿರುವ
ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್

26 ಡಿಸೆಂಬರ್ 2023 ರಿಂದ ನೋಂದಣಿ ಪ್ರಾರಂಭ

2023ರಲ್ಲಿ ಪದವಿ/ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಕನಿಷ್ಠ 6 ತಿಂಗಳವರೆಗೆ ಸರ್ಕಾರಿ/ ಖಾಸಗಿ ಉದ್ಯೋಗ ಹೊಂದಿಲ್ಲದವರು ಮತ್ತು ಕರ್ನಾಟಕದಲ್ಲಿ ವಾಸವಿರುವವರು

ಸ್ವಯಂ ಉದ್ಯೋಗ ಹೊಂದಿಲ್ಲದವರು ಮತ್ತು ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು

ನೋಂದಣಿಗೆ ಅಗತ್ಯವಿರುವ ದಾಖಲಾತಿಗಳು
ಎಸ್.ಎಸ್.ಎಲ್.ಸಿ., ಪಿಯುಸಿ, ಪದವಿ/ಡಿಪ್ಲೋಮಾ ಪ್ರಮಾಣ ಪತ್ರ

ನುಡಿದಂತೆ ನಡೆದಿದ್ದೇವೆ...

Helpline : 1800 599 9918

ನೋಂದಾಯಿಸಲು ಭೇಟಿ ನೀಡಿ
https://sevasindhugs.karnataka.gov.in

ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು.

ಸೇವಾ ಸಿಂಧು ಪೋರ್ಟಲ್‌ನಲ್ಲಿ ಮಾಸಿಕವಾಗಿ ನಿರುದ್ಯೋಗ ದೃಢೀಕರಣವು ಕಡ್ಡಾಯ. ತಪ್ಪು ಮಾಹಿತಿ ನೀಡಿದ್ದಲ್ಲಿ ದಂಡ ವಿಧಿಸಲಾಗುವುದು.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಪ್ರಕಟಣೆ : ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ

ಉಡುಪಿ ಜಿಲ್ಲೆಯ ಮಲ್ಪೆ ಬೀಚ್‌ನಲ್ಲಿ ಕಂಡುಬಂದ ಪ್ರವಾಸಿಗರು (ಎಡಚಿತ್ರ) ಸಾಗರ ತಾಲ್ಲೂಕಿನ ಸಿಗಂದೂರು ಕ್ಷೇತ್ರಕ್ಕೆ ಸಂಪರ್ಕ ಕಲ್ಪಿಸುವ ಅಂಬಾರಗೊಡ್ಲು ಲಾಂಚ್‌ನಲ್ಲಿ ಸೋಮವಾರ ಜನದಟ್ಟಣೆ ಏರ್ಪಟ್ಟಿತ್ತು – ಪ್ರಜಾವಾಣಿ ಚಿತ್ರಗಳು

ಬಹುತೇಕ ಪ್ರವಾಸಿ ತಾಣಗಳಲ್ಲಿ ಜನ ದಟ್ಟಣೆ, ವಸತಿಗೃಹ ದರ ದುಪ್ಪಟ್ಟು • ಹೆಚ್ಚಿದ ವಹಿವಾಟು– ಕಾಡದ ಕೋವಿಡ್ ಭೀತಿ

ಸಾಲು ರಜೆ: ಪ್ರವಾಸಿ ತಾಣಗಳಲ್ಲಿ ಸಂಭ್ರಮ

ವಾರಾಂತ್ಯ ರಜೆಯೊಂದಿಗೆ ಕ್ರಿಸ್‌ಮಸ್ ರಜೆಯೂ ಸೇರಿದ್ದರಿಂದ ಸೋಮವಾರ ರಾಜ್ಯದ ಪ್ರಮುಖ ಪ್ರವಾಸಿ, ಧಾರ್ಮಿಕ ತಾಣಗಳು ಪ್ರವಾಸಿಗರಿಂದ ಕಿಕ್ಕಿರಿದಿತ್ತು. ಚಟುವಟಿಕೆಯ ತಾಣಗಳಾಗಿದ್ದವು. ವಹಿವಾಟು ಗರಿಗೆದರಿದ್ದರ ಸೂಚನೆಯಾಗಿ ಬಹುತೇಕ ಹೋಟೆಲ್, ರೆಸಾರ್ಟ್‌ಗಳು ಭರ್ತಿಯಾಗಿದ್ದವು. ದರ ದುಪ್ಪಟ್ಟಾಗಿತ್ತು. ಕೋವಿಡ್ ಭೀತಿ ಮರೆತು ಪ್ರವಾಸಿಗರು ಪ್ರವಾಸದ ಖುಷಿಗೆ ತೆರೆದುಕೊಂಡರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕಿತ್ತೂರು ಕರ್ನಾಟಕದ ವಿವಿಧ ಪ್ರವಾಸಿ ತಾಣಗಳಲ್ಲಿ ಸೋಮವಾರ ಜನದಟ್ಟಣೆ ಕಂಡುಬಂದಿತು. ಪ್ರವಾಸಿಗರ ನೆಚ್ಚಿನ ತಾಣಗಳಾದ ಹಂಪಿ, ಬಾದಾಮಿ, ವಿಜಯಪುರ, ಗೋಕರ್ಣ, ಮುರ್ಡೇಶ್ವರದ ಕಡಲತೀರಗಳು ಪ್ರವಾಸಿಗರಿಂದ ತುಂಬಿ ತುಳುಕಾಡುತ್ತಿವೆ.

ಅತಿಥಿಗೃಹಗಳ ಕೊಠಡಿಗಳು 'ದುಬಾರಿ' ಆಗಿದ್ದು, ದುಪ್ಪಟ್ಟು ದರ ಪಡೆಯಲಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ಮುರುಡೇಶ್ವರಕ್ಕೆ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಬಂದಿದ್ದರು. ಗೋವಾಕ್ಕೆ ತೆರಳುವವರೂ ಅಲ್ಲಿ ಕೊಠಡಿ ಸಿಗದೆ ಕಾರವಾರದಲ್ಲಿ ತಂಗಿದ್ದಾರೆ.

₹1 ಸಾವಿರಕ್ಕೆ ಸಿಗುತ್ತಿದ್ದ ಕೊಠಡಿಗೆ ₹3 ಸಾವಿರ, ₹2 ಸಾವಿರಕ್ಕೆ ದೊರೆಯುತ್ತಿದ್ದ ಕೊಠಡಿಗೆ ಈಗ ₹6 ಸಾವಿರ, ₹3 ಸಾವಿರದ ಕೊಠಡಿಗೆ ₹8 ಸಾವಿರ ನಿಗದಿಸಲಾಗಿದೆ. ತಿಂಡಿ, ತಿನಿಸುಗಳ ದರಗಳೂ ಹೆಚ್ಚಿವೆ.

ಹಂಪಿಯಲ್ಲಿ ದಟ್ಟಣೆ: ಹಂಪಿ, ಹೊಸಪೇಟೆಯಲ್ಲಿ ಲಾಡ್ಜ್‌ಗಳೆಲ್ಲ ಭರ್ತಿಯಾಗಿದ್ದಲ್ಲದೆ, ದರ ದುಪ್ಪಟ್ಟಾಗಿದೆ. ಪ್ರವಾಸಿಗರು, ಶೈಕ್ಷಣಿಕ ಪ್ರವಾಸದ ಮಕ್ಕಳು, ಹನುಮ ಮಾಲಾಧಾರಿಗಳಿಂದ ಹಂಪಿಯಲ್ಲಿ ದಟ್ಟಣೆ ತೀವ್ರವಾಗಿದೆ. ಭಾನುವಾರ ಹಂಪಿಗೆ 80 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿದರು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧಿಕಾರಿಗಳು ತಿಳಿಸಿದರು.

ಹೊಸಪೇಟೆಯಲ್ಲಿ ಸಾಮಾನ್ಯ ಬಜೆಟ್‌ನ ಲಾಡ್ಜ್‌ಗಳಲ್ಲಿ 1,400ರಷ್ಟು ಕೊಠಡಿಗಳಿದ್ದು, ಬಹುತೇಕ ಬುಕ್ ಆಗಿವೆ. ಹವಾನಿಯಂತ್ರಣ ರಹಿತ ಕೊಠಡಿಗಳ ದರ ಸಾಮಾನ್ಯ ದಿನಗಳಲ್ಲಿ ₹1,200ರಿಂದ 1,500 ಇದ್ದರೆ, ಈ ವಾರ ಅವುಗಳ ದರ ದುಪ್ಪಟ್ಟಾಗಿದೆ. ಹವಾನಿಯಂತ್ರಣ ಸಹಿತ ಕೊಠಡಿಗಳ ದರ ಸಾಮಾನ್ಯ ದಿನಗಳಲ್ಲಿ ₹1,800 ರಿಂದ ₹2,000 ಇದ್ದು, ಈ ವಾರ ದುಪ್ಪಟ್ಟಾಗಿದೆ.

ವಾಹನ ಸಂಚಾರ ಅಸ್ತವ್ಯಸ್ತ: ಪ್ರವಾಸಿಗರಿಂದ ಸೋಮವಾರ ಗದಗ-ಬಾಗಲಕೋಟೆ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ವಾಹನ ದಟ್ಟಣೆ ಕಂಡು ಬಂತು. ಪ್ರವಾಸಿಗರ ವಾಹನಗಳಿಂದ ಬಾಗಲಕೋಟೆಯ ಬಾದಾಮಿಯ ಮುಖ್ಯರಸ್ತೆ ವೀರಪುಲಿಕೇಶಿ ವೃತ್ತ ಮತ್ತು ಅಂಬೇಡ್ಕರ್ ವೃತ್ತದಲ್ಲಿ ಒಂದು ಕಿಲೊಮೀಟರ್‌ವರೆಗೆ ವಾಹನಗಳು ಗಂಟೆಗಟ್ಟಲೇ ಸಂಚಾರ ಸ್ಥಗಿತವಾಗಿದ್ದವು.

ಬಾದಾಮಿ ಗುಹಾಂತರ ದೇವಾಲಯ ದೃಶ್ಯ (ಎಡಚಿತ್ರ) ಮೈಸೂರಿನ ಅಂಬಾ ವಿಲಾಸ ಅರಮನೆಯಲ್ಲಿ ಭಾರಿ ಸಂಖ್ಯೆಯ ಪ್ರವಾಸಿಗರು ಕಂಡುಬಂದರು

'ಹಂಪಿ ಬೈ ನೈಟ್' ಆಕರ್ಷಣೆ

ಹಂಪಿಯ ವಿರೂಪಾಕ್ಷ ದೇವಸ್ಥಾನದ ರಥಬೀದಿಯಲ್ಲಿ ಪ್ರತಿದಿನ ರಾತ್ರಿ 7ರಿಂದ 8.15ರವರೆಗೆ 'ಹಂಪಿ ಬೈ ನೈಟ್' ಎಂಬ ಧ್ವನಿ, ಬೆಳಕಿನ ಪ್ರದರ್ಶನ ನಡೆಯುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಹಂಪಿಯ ಇತಿಹಾಸ, ಸಂಸ್ಕೃತಿ ಪರಿಚಯಿಸುವುದೇ 'ಹಂಪಿ ಬೈ ನೈಟ್' ಕಾರ್ಯಕ್ರಮದ ಉದ್ದೇಶ. ಹಂಪಿಗೆ ಹೆಚ್ಚು ಜನರು ಬರಲು ಇದು ಕೂಡ ಪ್ರಮುಖ ಕಾರಣವಾಗಿದೆ.

ಶಿವಮೊಗ್ಗ: ದಾಖಲೆ ಪ್ರವಾಸಿಗರು

ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ-ಸಿಂಹ ಧಾಮ ಹಾಗೂ ಸಕ್ರೆಬೈಲು ಆನೆ ಶಿಬಿರಕ್ಕೆ ಪ್ರವಾಸಿಗರು ಭಾರೀ ಸಂಖ್ಯೆಯಲ್ಲಿ ಲಗ್ಗೆ ಇಟ್ಟರು. ಎರಡೂ ಕಡೆ ಒಂದೇ ದಿನ ದಾಖಲೆಯ ಆದಾಯ ಸಂಗ್ರಹವಾಗಿದೆ.

'ಹುಲಿ-ಸಿಂಹ ಧಾಮಕ್ಕೆ ಭಾನುವಾರ 4,200 ಮಂದಿ ಭೇಟಿ ನೀಡಿದ್ದು, ₹7.02 ಲಕ್ಷ ಆದಾಯ ಸಂಗ್ರಹವಾಗಿದೆ. ಮೃಗಾಲಯದ 35 ವರ್ಷಗಳ ಇತಿಹಾಸದಲ್ಲಿ ಒಂದೇ ದಿನ ಸಂಗ್ರಹವಾದ ಅತಿ ಹೆಚ್ಚಿನ ಆದಾಯ ಇದಾಗಿದೆ. ಈ ವರ್ಷದ ಜನವರಿ 1ರಂದು ₹ 6.43 ಲಕ್ಷ ಆದಾಯ ಸಂಗ್ರಹವಾಗಿತ್ತು' ಎಂದು ತ್ಯಾವರೆಕೊಪ್ಪ ಹುಲಿ-ಸಿಂಹ ಧಾಮದ ಕಾರ್ಯನಿರ್ವಾಹಕ ನಿರ್ದೇಶಕ ಮುಕುಂದ ಚಂದ್ರ ಹರ್ಷ ವ್ಯಕ್ತಪಡಿಸಿದರು. ಹುಲಿ-ಸಿಂಹ ಧಾಮಕ್ಕೆ ಸೋಮವಾರ 3,872 ಮಂದಿ ಭೇಟಿ ನೀಡಿದ್ದು, ₹ 6.52 ಲಕ್ಷ ಆದಾಯ ಸಂಗ್ರಹವಾಗಿದೆ.

ಆನೆ ಬಿಡಾರಕ್ಕೂ ಲಗ್ಗೆ: ಇಲ್ಲಿನ ತುಂಗಾ ಜಲಾಶಯದ ಹಿನ್ನೀರ ದಂಡೆಯಲ್ಲಿರುವ ಸಕ್ರೆಬೈಲು ಆನೆ ಬಿಡಾರಕ್ಕೂ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದರು. ಆನೆ ಸವಾರಿ, ದೋಣಿ ವಿಹಾರ ಮಾಡಿ ಖುಷಿಪಟ್ಟರು.

'ಆನೆ ಬಿಡಾರಕ್ಕೆ ಸೋಮವಾರ 2,257 ಮಂದಿ ಭೇಟಿ ನೀಡಿದ್ದಾರೆ. ₹1.63 ಲಕ್ಷ ಆದಾಯ ಸಂಗ್ರಹವಾಗಿದೆ. ಇದೇ ಮೊದಲ ಸಲ ಶಿಬಿರದ ಆದಾಯ ₹ 1.5 ಲಕ್ಷ ದಾಟಿದ್ದು, ದಾಖಲೆಯಾಗಿದೆ' ಎಂದು ವಲಯ ಅರಣ್ಯಾಧಿಕಾರಿ ವಿನಯ್ ಪ್ರತಿಕ್ರಿಯಿಸಿದರು.

ಚಿಕ್ಕಮಗಳೂರಿಗೆ ಪ್ರವಾಸಿಗರ ಲಗ್ಗೆ ವಾಹನ ದಟ್ಟಣೆ

ಚಿಕ್ಕಮಗಳೂರು: ಪ್ರವಾಸಿಗರ ದಂಡೇ ಚಿಕ್ಕಮಗಳೂರಿಗೆ ಲಗ್ಗೆ ಇಟ್ಟಿತ್ತು. ಪ್ರವಾಸಿ ತಾಣಗಳು, ಹೋಮ್ ಸ್ಟೇ, ರೆಸಾರ್ಟ್ ಮತ್ತು ವಸತಿ ಗೃಹಗಳು ಸಂಪೂರ್ಣ ಭರ್ತಿಯಾಗಿವೆ.

ದತ್ತ ಜಯಂತಿ ನಡೆಯುತ್ತಿರುವುದರಿಂದ ಮುಳ್ಳಯ್ಯನಗಿರಿ ಸುತ್ತಮತ್ತಲ ಗಿರಿಶ್ರೇಣಿಗೆ ಪ್ರವಾಸಿಗರಿಗೆ ನಿರ್ಬಂಧವಿತ್ತು. ಕಳಸ, ಶೃಂಗೇರಿ, ಹೊರನಾಡು, ಕೆಮ್ಮಣ್ಣುಗುಂಡಿ, ಕುದುರೆಮುಖ, ಮೂಡಿಗೆರೆ ತಾಲ್ಲೂಕಿನ ರಾಣಿಝರಿ, ಎತ್ತಿನಭುಜದಲ್ಲಿ ದಟ್ಟಣೆ ಹೆಚ್ಚಿತ್ತು.

ಹೊರನಾಡು ದೇವಸ್ಥಾನ, ಶೃಂಗೇರಿ ಶಾರದಾಪೀಠದಲ್ಲಿ ಭಕ್ತರ ಸಾಲು ಕಂಡುಬಂದಿತು. ವಾಹನ ನಿಲುಗಡೆ ತಾಣದಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕುದುರೆಮುಖ ಮತ್ತು ನೇತ್ರಾವತಿ ಚಾರಣ ಕೂಡ ಸಾಹಸಪ್ರಿಯ ಪ್ರವಾಸಿಗರಿಂದ ತುಂಬಿವೆ.

ಹೋಮ್‌ಸ್ಟೇಗಳು, ರೆಸಾರ್ಟ್‌ಗಳು, ಹೋಟೆಲ್‌ಗಳಲ್ಲಿ ದುಪ್ಪಟ್ಟು ದರ ಪಾವತಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ವಸತಿ ಗೃಹಗಳಲ್ಲಿ ಸಾಮಾನ್ಯವಾಗಿ ₹2 ಸಾವಿರ ಇದ್ದ ಕೊಠಡಿ ದರ ₹3 ಸಾವಿರದಿಂದ ₹4 ಸಾವಿರ ತನಕ ನಿಗದಿಯಾಗಿದೆ.

ಹೋಟೆಲ್, ಹೋಮ್ ಸ್ಟೇ ಭರ್ತಿ: ಬಹುತೇಕ ಹೋಟೆಲ್‌ಮ, ಹೋಮ್ ಸ್ಟೇಗಳಲ್ಲಿ ಭರ್ತಿಯಾಗಿವೆ. ಕೆಲವೆಡೆ ಬಾಡಿಗೆ ದರ ಎರಡು-ಮೂರು ಪಟ್ಟು ಹೆಚ್ಚಿದೆ. ಬಹುತೇಕ ದೇವಸ್ಥಾನಗಳ ಯಾತ್ರಿನಿವಾಸ ಹಾಗೂ ವಸತಿಗೃಹಗಳಲ್ಲಿ ಬಾಡಿಗೆ ಕೊಠಡಿಗಳು ಭರ್ತಿಯಾಗಿವೆ.

ಪ್ರವಾಸ ಅರ್ಧದಲ್ಲೇ ಮೊಟಕು: ಲಾಡ್ಜ್‌ಗಳ ಕೊಠಡಿಯ ದುಬಾರಿ ದರ ಕೇಳಿ ಪ್ರವಾಸಿಗರು ಕಂಗಾಲಾಗಿದ್ದಾರೆ. ಐದಾರು ದಿನ ಪ್ರವಾಸದ ಯೋಜನೆ ಹಾಕಿಕೊಂಡಿದ್ದವರೂ ಪ್ರವಾಸವನ್ನು ಅರ್ಧದಲ್ಲೇ ಮೊಟಕುಗೊಳಿಸಿ ಮರಳುತ್ತಿದ್ದಾರೆ.

ಮಂಗಳೂರು-ಬೆಂಗಳೂರು ಹೆದ್ದಾರಿಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಕಾರುಗಳು ಸಾಲುಗಟ್ಟಿ ಸಾಗಿದವು.

ಗರಿಗೆದರಿದ ಪ್ರವಾಸೋದ್ಯಮ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಜಿಲ್ಲೆಗಳ ಪ್ರವಾಸಿ ತಾಣಗಳಲ್ಲಿ ಜನರ ದಂಡು ಕಂಡುಬರುತ್ತಿದ್ದು, ಪ್ರವಾಸೋದ್ಯಮ ಗರಿಗೆದರಿದೆ. ಹೋಟೆಲ್, ಲಾಡ್ಜ್ ಹಾಗೂ ರೆಸಾರ್ಟ್‌ಗಳಲ್ಲಿನ ಕೊಠಡಿಗಳು ಬಹುತೇಕ ಭರ್ತಿಯಾಗಿದ್ದವು.

ಮೈಸೂರು ಅರಮನೆ, ಚಾಮರಾಜೇಂದ್ರ ಮೃಗಾಲಯ, ಚಾಮುಂಡಿ ಬೆಟ್ಟ, ದಸರಾ ವಸ್ತುಪ್ರದರ್ಶನ, ಕಾರಂಜಿ ಕೆರೆಗೆ ಹೆಚ್ಚಿನ ಜನರು ಭೇಟಿ ನೀಡಿದ್ದರು. ಸಂಜೆಯ ವೇಳಾ ವಾಹನದಟ್ಟಣೆ ಕಂಡುಬಂತು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸ ಬಂದಿದ್ದರು. ಕೇರಳ, ತಮಿಳುನಾಡು ಮೊದಲಾದ ರಾಜ್ಯದ ಪ್ರವಾಸಿಗರು ಕೂಡ ಬರುತ್ತಿದ್ದಾರೆ. ಕೋವಿಡ್ ಭೀತಿ ಪ್ರವಾಸೋದ್ಯಮ ಕ್ಷೇತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿಲ್ಲ. 'ಹೋಟೆಲ್‌ಗಳ ಕೊಠಡಿಗಳು ಹೊಸ ವರ್ಷಾಚರಣೆವರೆಗೂ ಭರ್ತಿ ಯಾಗಿವೆ' ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದರು.

ದಾಖಲೆ ಆದಾಯ: ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಬೃಂದಾವನ, ರಂಗನತಿಟ್ಟು, ಶ್ರೀರಂಗಪಟ್ಟಣದಲ್ಲಿ ಪ್ರವಾಸಿಗರ ಸಂಖ್ಯೆ ದುಪ್ಪಟ್ಟಾಗಿದೆ. ರಂಗನತಿಟ್ಟು ಪಕ್ಷಿಧಾಮಕ್ಕೆ ಭಾನುವಾರ ವಿದೇಶಿ ಪ್ರವಾಸಿಗರು ಸೇರಿ 4,885 ಮಂದಿ ಭೇಟಿ ನೀಡಿದ್ದು, ₹5.99ಲಕ್ಷ ಆದಾಯ ಬಂದಿದೆ. ಇದು ಈವರೆಗಿನ ದಾಖಲೆ ಎಂದು ಅಧಿಕಾರಿಗಳು ತಿಳಿಸಿದರು.

ಒಂದೇ ದಿನ ಲಕ್ಷ ಮಂದಿ ಭೇಟಿ: ಕೊಡಗು ಜಿಲ್ಲೆಯಲ್ಲಿ ಹೋಂಸ್ಟೇಗಳು, ರೆಸಾರ್ಟ್‌ಗಳು ಹಾಗೂ ಹೋಟೆಲ್‌ಗಳ ಕೊಠಡಿಗಳು ಶನಿವಾರದಿಂದಲೇ ಭರ್ತಿಯಾಗಿದ್ದವು. 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೊಡಗು ಜಿಲ್ಲಾ ಹೋಟೆಲ್, ರೆಸಾರ್ಟ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ಅಧ್ಯಕ್ಷ ನಾಗೇಂದ್ರಪ್ರಸಾದ್, 'ಜಿಲ್ಲೆಯಲ್ಲಿ ಹೋಟೆಲ್, ರೆಸಾರ್ಟ್ ಹಾಗೂ ಹೋಂಸ್ಟೇಗಳಲ್ಲಿ 35ಸಾವಿರಕ್ಕೂ ಅಧಿಕ ರೂಂಗಳಿದ್ದು, ಎಲ್ಲವೂ ಭರ್ತಿಯಾಗಿವೆ. ಜಿಲ್ಲೆಯ ಪ್ರವಾಸೋದ್ಯಮ 5 ವರ್ಷದ ಹಿಂದಿನ ಸ್ಥಿತಿಗೆ ಮರಳಿದೆ ಎನಿಸುತ್ತಿದೆ' ಎಂದರು.

ಚಾಮರಾಜನಗರ ಜಿಲ್ಲೆಯಲ್ಲೂ ಪ್ರವಾಸಿಗರ ದಂಡು ಕಂಡುಬಂದಿತು. ಬಂಡೀಪುರದಲ್ಲಿ ಸಫಾರಿಗೆ ಬೇಡಿಕೆ ಹೆಚ್ಚಿದೆ. ಹಿಮವದ್ ಗೋಪಾಲ ಸ್ವಾಮಿ ಹಾಗೂ ಮಹದೇಶ್ವರ ಬೆಟ್ಟವೂ ಪ್ರವಾಸಿಗರಿಂದ ತುಂಬಿತ್ತು. ಬಿಳಿಗಿರಿರಂಗನಬೆಟ್ಟದಲ್ಲಿನ ಹೋಂಸ್ಟೇಗಳು, ಅತಿಥಿಗೃಹಗಳು, ಕೆ.ಗುಡಿಯ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಭರ್ತಿಯಾಗಿವೆ. ಜ.5ರವರೆಗೂ ಪ್ರವಾಸಿಗರು ಕಾಯ್ದಿರಿಸಿದ್ದಾರೆ.

ಮೃಗಾಲಯಕ್ಕೆ 1.01 ಲಕ್ಷ ಪ್ರವಾಸಿಗರು

ಮೈಸೂರು: ಇಲ್ಲಿನ ಚಾಮರಾಜೇಂದ್ರ ಮೃಗಾಲಯಕ್ಕೆ ಶನಿವಾರದಿಂದ ಸೋಮವಾರದವರೆಗೆ ದಾಖಲೆ ಸಂಖ್ಯೆಯಲ್ಲಿ ಅಂದರೆ 1.01 ಲಕ್ಷ ಸಂದರ್ಶಕರು ಭೇಟಿ ನೀಡಿದ್ದಾರೆ. ಹೋದ ವರ್ಷ ಇದೇ ದಿನಗಳಲ್ಲಿ ಒಟ್ಟು 77,833 ಮಂದಿ ಬಂದಿದ್ದರು. ಕ್ರಿಸ್‌ಮಸ್ ದಿನವಾದ ಸೋಮವಾರ 35,344 ವೀಕ್ಷಕರು ಭೇಟಿ ನೀಡಿದ್ದರು. ಭಾನುವಾರ (ಡಿ.24) ದಾಖಲೆಯ 40,761 ಮಂದಿ ಬಂದಿದ್ದರು. 2018ರ ಡಿ.24ರಂದು 40,675 ಸಂದರ್ಶಕರು ಭೇಟಿ ನೀಡಿದ್ದರು ಎಂದು ಮೃಗಾಲಯದ ಪ್ರಕಟಣೆ ತಿಳಿಸಿದೆ.

ಸಂದರ್ಶಕರ ಭೇಟಿ ಅಂಕಿ-ಅಂಶ		
ದಿನಾಂಕ	2022	2023
ಡಿ.23	16,682	25,860
ಡಿ.24	26,355	40,761
ಡಿ.25	34,796	35,344
ಒಟ್ಟು	77,833	1,01,965

'ನಂದಿ'ಯಲ್ಲಿ ವಸತಿಗೃಹ ಭರ್ತಿ

ಚಿಕ್ಕಬಳ್ಳಾಪುರ: ಐತಿಹಾಸಿಕ ನಂದಿಗಿರಿಧಾಮಕ್ಕೆ ವಾರಾಂತ್ಯ ಮತ್ತು ಕ್ರಿಸ್‌ಮಸ್ ರಜೆ ಹಿನ್ನೆಲೆಯಲ್ಲಿ ಅಪಾರ ಸಂಖ್ಯೆಯ ಪ್ರವಾಸಿಗರು ದಾಂಗುಡಿ ಇಟ್ಟಿದ್ದರು. ಸೋಮವಾರ ಕ್ರಿಸ್‌ಮಸ್ ರಜೆ ಇದ್ದ ಕಾರಣ ಗಿರಿಧಾಮದ ವಸತಿಗೃಹಗಳು ಭರ್ತಿಯಾಗಿದ್ದವು.

'ಗಿರಿಧಾಮದಲ್ಲಿ 39 ವಸತಿ ಗೃಹಗಳಿವೆ. ಒಂದು ವಾರದಿಂದ ಭರ್ತಿಯಾಗಿವೆ. ವಾರಾಂತ್ಯದ ಜೊತೆಗೆ ಕ್ರಿಸ್‌ಮಸ್ ಬಂದ ಕಾರಣ ನಮ್ಮ ನಿರೀಕ್ಷೆಗೂ ಮೀರಿ ಜನರು ಗಿರಿಧಾಮಕ್ಕೆ ಭೇಟಿ ನೀಡಿದ್ದಾರೆ' ಎಂದು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ನಂದಿಗಿರಿಧಾಮದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಮೀಪದ ರೆಸಾರ್ಟ್‌ಗಳಿಗೂ ಉತ್ತಮ ಬೇಡಿಕೆಯಿದೆ. ನಂದಿ ಬೆಟ್ಟಕ್ಕೆ ಸಂಪರ್ಕಿಸುವ ರಸ್ತೆಗಳಲ್ಲಿ ಬಹುತೇಕ ಪ್ರವಾಸಿಗರು ಮಾಸ್ಕ್ ಕಿಲೊ ಮೀಟರ್‌ಗಟ್ಟಲೇ ವಾಹನಗಳು ಧರಿಸಿರಲಿಲ್ಲ. ನಿಂತಿದ್ದವು. ಚಳಿಗಾಲದ ಕಾರಣ ಬೆಳಿಗ್ಗೆ 10ರವರೆಗೆ ಗಿರಿಧಾಮದಲ್ಲಿ ದಟ್ಟಮಂಜು ಆವರಿಸುತ್ತಿದೆ.

ಅನೇಕಲ್ ವರದಿ: ಸಾಲು ರಜೆಗಳ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸೋಮವಾರ ಪ್ರವಾಸಿಗರಿಂದ ತುಂಬಿತ್ತು.

ಭಾನುವಾರ ಒಂದೇ ದಿನ 20 ಸಾವಿರ ಪ್ರವಾಸಿಗರು ಭೇಟಿ ನೀಡಿದ್ದರೆ, ಸೋಮವಾರ ಅದಕ್ಕಿಂತ ಸ್ವಲ್ಪ ಕಡಿಮೆ ಸಂಖ್ಯೆಯ ಪ್ರವಾಸಿಗರು ಉದ್ಯಾನವನದಲ್ಲಿ ವಿಹಾರ ನಡೆಸಿದರು.

ಬನ್ನೇರುಘಟ್ಟ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಟಿಕೆಟ್ ಕೌಂಟರ್ ಬಳಿ ಭಾರಿ ಜನಸ್ತೋಮ ಕಂಡುಬಂತು. ಕೋವಿಡ್ ನಿಯಮ ಪಾಲಿಸುವಂತೆ ಅಧಿಕಾರಿಗಳು ಪದೇ ಪದೇ ಸೂಚನೆ ನೀಡುತ್ತಿದ್ದರು.

ಕರಾವಳಿ– ಪ್ರವಾಸಿ ತಾಣಗಳಲ್ಲಿ ಜನವೋ ಜನ

ಪ್ರಜಾವಾಣಿ ವಾರ್ತೆ

ಮಂಗಳೂರು/ಉಡುಪಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರವಾಸಿ ತಾಣಗಳಲ್ಲಿ ಸೋಮವಾರವೂ ಭಾರಿ ಜನಸಂದಣಿ ಕಂಡು ಬಂತು.

ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳದ ಮಂಜುನಾಥ ದೇವಸ್ಥಾನ, ಕಟೀಲಿನ ದುರ್ಗಾಪರಮೇಶ್ವರಿ ದೇವಸ್ಥಾನ, ಮಂಗಳೂರಿನ ಮಂಗಳಾದೇವಿ ದೇವಸ್ಥಾನ, ಕದ್ರಿ ಮಂಜುನಾಥ, ಉಡುಪಿಯ ಶ್ರೀಕೃಷ್ಣ ದೇವಸ್ಥಾನ, ಕೊಲ್ಲೂರು ಮೂಕಾಂಬಿಕೆ ದೇವಸ್ಥಾನ, ಮಂದಾರ್ತಿಯ ದುರ್ಗಾಪರಮೇಶ್ವರಿ ದೇವಸ್ಥಾನಗಳು ಭಕ್ತರಿಂದ ಗಿಜಿಗುಡುತ್ತಿದ್ದವು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸೋಮವಾರ ಭಕ್ತರ ದಟ್ಟಣೆಯಿಂದಾಗಿ ದೇವಳದ ಪ್ರವೇಶ ದ್ವಾರಗಳನ್ನು ಕೆಲ ಕಾಲ ಮುಚ್ಚಬೇಕಾಯಿತು.

ಕುಮಾರಧಾರ ನದಿಯಲ್ಲಿ ಸ್ನಾನ ಮಾಡಲು ಮುಂಜಾನೆಯೇ ಭಕ್ತರು ಕಿಕ್ಕಿರಿದು ಸೇರಿದ್ದರು. ಭಾನುವಾರ ರಾತ್ರಿ ಬಂದಿದ್ದ ಕೆಲ ಪ್ರವಾಸಿಗರು ದೇವಸ್ಥಾನದ ರಥಬೀದಿಯಲ್ಲೇ ಮಲಗಿದ್ದರು.

ಧರ್ಮಸ್ಥಳದ ದೇವಸ್ಥಾನದಲ್ಲಿ ಸೋಮವಾರ ಮುಂಜಾನೆ 5 ಗಂಟೆಯಿಂದಲೇ ಸಾಲುಗಟ್ಟಿ ನಿಂತಿದ್ದರು. ದೇವರ ದರ್ಶನಕ್ಕಾಗಿ ಭಕ್ತರು ತಾಸುಗಟ್ಟಲೆ ಕಾಯಬೇಕಾಯಿತು.

ಪಣಂಬೂರು, ತಣ್ಣೀರುಬಾವಿ, ಸೋಮೇಶ್ವರ, ಮಲ್ಪೆ, ಕಾಪು, ಪಡುಬಿದ್ರಿ, ಮರವಂತೆ ಬೀಚ್‌ಗಳಿಗೂ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದರು.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸೋಮವಾರ ಭಕ್ತರು ಸಾಲುಗಟ್ಟಿ ನಿಂತಿದ್ದರು

ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದರು. ಷಷ್ಠಿ ಜಾತ್ರೆಯ ದಿನಕ್ಕಿಂತಲೂ ಹೆಚ್ಚು ಪ್ರವಾಸಿಗರಿದ್ದರು.

ಕಲ್ಯಾಣ ಕರ್ನಾಟಕ: ಧಾರ್ಮಿಕ ಕ್ಷ

ಮಂಗಳವಾರ, ಡಿಸೆಂಬರ್ 26, 2023 | ಬೆಂಗಳೂರು | ₹ 7.00 | ಸಂಪುಟ76 | ಸಂಚಿಕೆ 356 | ಪುಟ 12

www.prajavani.net

prajavani.net prajavani prajavanj prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹೊಸ ವರ್ಷದ ಸಂಕಲ್ಪವೆಂದು ಸೀದಾ ಜಿಮ್‌ಗೆ ಹೋಗುವ ಮೊದಲು ಒಂದಿಷ್ಟು ಸಿದ್ಧರಾಗುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು.

2023 ಮರೆಯುವ ಮುನ್ನ... 7

ಮೊಟ್ಟೆ ದರ ಇನ್ನಷ್ಟು ಹೆಚ್ಚಳ? 8

ಗೆಳತಿಯನ್ನೇ ಜೀವಂತ ಸುಟ್ಟ ಲಿಂಗ ಪರಿವರ್ತಿತ ವ್ಯಕ್ತಿ! 9

ಜೆಎನ್.1: ರಾಜ್ಯದಲ್ಲಿ 34 ಪ್ರಕರಣ 5

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹64,860 (ಬೆಂಗಳೂರು) ▲	₹76,700 (ಬೆಂಗಳೂರು)

ಪೂಂಛ್: ನಾಗರಿಕರ ಸಾವು ಪ್ರಕರಣ, ಅಧಿಕಾರಿಗಳು ಕರ್ತವ್ಯದಿಂದ ಹಿಂದಕ್ಕೆ • ತನಿಖೆಗೆ ಆದೇಶ

ಜನರ ಆಕ್ರೋಶ: ಮೃದುವಾದ ಸೇನೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಛ್‌ನಲ್ಲಿನ ಸೂರನ್‌ಕೋಟ್ ಪ್ರದೇಶದ ಕಾರ್ಯಾಚರಣೆಯ ಉಸ್ತುವಾರಿ ಹೊತ್ತಿದ್ದ ತುಕಡಿಯ ಬ್ರಿಗೇಡಿಯರ್ ಸೇರಿ ಸೇನೆಯ ನಾಲ್ವರು ಅಧಿಕಾರಿಗಳನ್ನು ಕರ್ತವ್ಯದಿಂದ ಹಿಂದಕ್ಕೆ ಕರೆಸಿಕೊಳ್ಳಲಾಗಿದೆ. ಅವರನ್ನು ಸ್ಥಳಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಸೇನಾ ವಾಹನಗಳ ಮೇಲೆ ಉಗ್ರರ ದಾಳಿಯ ಬಳಿಕ ಸೇನೆಯು ವಶಕ್ಕೆ ಪಡೆದಿದ್ದ ಮೂವರು ನಾಗರಿಕರು ಮೃತಪಟ್ಟಿದ್ದರು. ಆ ಬಳಿಕ ಕಾಶ್ಮೀರ ಕಣಿವೆಯಲ್ಲಿ ಜನರ ಆಕ್ರೋಶ ಹೆಚ್ಚುತ್ತಲೇ ಇದೆ.

ಕರ್ತವ್ಯದಿಂದ ಹಿಂದಕ್ಕೆ ಕರೆಸಿಕೊಂಡವರಲ್ಲಿ ಒಬ್ಬರು ಕರ್ನಲ್ ಮತ್ತು ಒಬ್ಬರು ಲೆಫ್ಟಿನೆಂಟ್ ಕರ್ನಲ್ ಸೇರಿದ್ದಾರೆ. ಇಲ್ಲಿನ ಜನರ ವಿಶ್ವಾಸವನ್ನು ಗಳಿಸಲು ಸೇನೆಯು ಪ್ರಯತ್ನಿಸುತ್ತಿದೆ. ಅದರ ಭಾಗವಾಗಿ ಕಸ್ಟಡಿಯಲ್ಲಿನ ಸಾವು-ಪ್ರಕರಣದ ತನಿಖೆಗೂ ಆದೇಶಿಸಲಾಗಿದೆ.

ಸೇನೆಯ ಆಂತರಿಕ ತನಿಖೆಯನ್ನು ಅಖ್ನೂರ್‌ನಲ್ಲಿರುವ 16ನೇ ಕೋರ್ ತುಕಡಿಯು ನಡೆಸಲಿದೆ. ಒಂದು ವಾರದೊಳಗೆ ಈ ತನಿಖೆ ಪೂರ್ಣಗೊಳ್ಳಲಿದೆ. ತನಿಖೆಯು ನಿಷ್ಪಕ್ಷಪಾತವಾಗಿದೆ ಎಂಬುದನ್ನು ಖಾತರಿಪಡಿಸಲು ಜಮ್ಮು-ಕಾಶ್ಮೀರ ಪೊಲೀಸ್ ಇಲಾಖೆಯನ್ನೂ ಸೇರಿಸಿಕೊಳ್ಳಲಾಗುವುದು.

ಮೂವರು ನಾಗರಿಕರ ಸಾವಿಗೆ ಕಾರಣ ಯಾರು ಎಂಬುದನ್ನು ಸೇನೆಯಾಗಲಿ ಜಮ್ಮು-ಕಾಶ್ಮೀರ ಆಡಳಿತವಾಗಲಿ ಬಹಿರಂಗಪಡಿಸಿಲ್ಲ. ಆದರೆ, ತಮ್ಮ ವಶದಲ್ಲಿದ್ದ ಈ ವ್ಯಕ್ತಿಗಳನ್ನು ಯೋಧರೇ ಕೊಂದಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

5ನೇ ಪುಟ ನೋಡಿ

ಸೇನೆಯ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಸೋಮವಾರ ಭದ್ರತೆಯ ಪರಿಸ್ಥಿತಿ ಪರಿಶೀಲನೆಗಾಗಿ ಜಮ್ಮುವಿನ ಪೂಂಛ್ ವಲಯಕ್ಕೆ ಭೇಟಿ ನೀಡಿದರು ಪಿಟಿಐ ಚಿತ್ರ

ಇನ್ನೆಷ್ಟು ಭಯ ಬಿತ್ತಬೇಕಿದೆ?: ಮುಫ್ತಿ

'ಅವರು (ಸೇನೆ) ಜನರನ್ನು ಬಡಿಯುತ್ತಿದ್ದಾರೆ. ವಶಕ್ಕೆ ಪಡೆದು ಚಿತ್ರಹಿಂಸೆ ಕೊಡುತ್ತಿದ್ದಾರೆ, ಅದರ ವಿಡಿಯೊ ಮಾಡಿ ಹಂಚಿಕೊಳ್ಳುತ್ತಿದ್ದಾರೆ. ಸೇನಾ ಕಸ್ಟಡಿಯಲ್ಲಿ ಇರುವ ನಾಗರಿಕರು ವಿಡಿಯೊ ಮಾಡಿ ಹಂಚಿಕೊಳ್ಳಲು ಸಾಧ್ಯವಿಲ್ಲ. ನಾವು ಹೀಗೆಲ್ಲ ಮಾಡಬಲ್ಲೆವು ಎಂಬ ಸಂದೇಶವನ್ನು ಜನರಿಗೆ ನೀಡುವುದು ಅವರ ಉದ್ದೇಶ. ನಮ್ಮಲ್ಲಿ ಎಷ್ಟು ಭಯ ತುಂಬಿಸಲು ಅವರು ಬಯಸಿದ್ದಾರೆ' ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಪ್ರಶ್ನಿಸಿದ್ದಾರೆ.

ಪರಿಸ್ಥಿತಿ ಅವಲೋಕಿಸಿದ ಸೇನಾ ಮುಖ್ಯಸ್ಥ

- ಭೂಸೇನಾ ಮುಖ್ಯಸ್ಥ ಜ. ಮನೋಜ್ ಪಾಂಡೆ ಅವರು ಜಮ್ಮು-ಕಾಶ್ಮೀರದ ಭದ್ರತಾ ಪರಿಸ್ಥಿತಿ ಅವಲೋಕನಕ್ಕಾಗಿ ಜಮ್ಮುವಿಗೆ ಸೋಮವಾರ ಭೇಟಿ ಕೊಟ್ಟಿದ್ದಾರೆ
- ಸೇನೆಯು ನಡೆಸುವ ಕಾರ್ಯಾಚರಣೆಯು ಅತ್ಯಂತ ವೃತ್ತಿಪರವಾಗಿ ನಡೆಯ ಬೇಕು ಎಂದು ಪಾಂಡೆ ಅವರು ಕಮಾಂಡರ್‌ಗಳಿಗೆ ಸೂಚನೆ ನೀಡಿದ್ದಾರೆ
- ರಜೌರಿ ಮತ್ತು ಪೂಂಛ್ ಜಿಲ್ಲೆಗಳಲ್ಲಿ ಭಯೋತ್ಪಾದಕರನ್ನು ಪತ್ತೆ ಮಾಡುವುದಕ್ಕಾಗಿ ಸತತ 6ನೇ ದಿನವೂ ಕಾರ್ಯಾಚರಣೆ ಮುಂದುವರಿದಿದೆ. ಬಿರುಸಿನ ಕಾರ್ಯಾಚರಣೆ ನಡೆಸಿದ್ದರೂ ಉಗ್ರರ ಪತ್ತೆ ಸಾಧ್ಯವಾಗಿಲ್ಲ
- ಉತ್ತರ ಕಮಾಂಡ್‌ನ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ, ಜಮ್ಮುವಿನ ವೈಟ್ ನೈಟ್ ಕೋರ್‌ನ ಲೆಫ್ಟಿನೆಂಟ್ ಜನರಲ್ ಸಂದೀಪ್ ಚೈನ್, ಆಡಳಿತ ಮತ್ತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಈ ಜಿಲ್ಲೆಗಳಲ್ಲಿಯೇ ಮೊಕ್ಕಾಂ ಹೂಡಿದ್ದಾರೆ



ಶ್ರೀನಿವಾಸ ಪೂಜಾರಿ ಮೇಲ್ಮನೆ ವಿಪಕ್ಷ ನಾಯಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಂಟು ತಿಂಗಳಿಂದ ಖಾಲಿ ಇದ್ದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ನೇಮಕ ಮಾಡಲಾಗಿದೆ. ಅವರು ಮೂರನೇ ಬಾರಿ ಈ ಹುದ್ದೆಗೇರಿದ್ದಾರೆ.

ಈ ಹಿಂದೆ, ಸಿದ್ದರಾಮಯ್ಯ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೂ ಶ್ರೀನಿವಾಸ್ ಪೂಜಾರಿ ಮೇಲ್ಮನೆ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಉಪ ನಾಯಕರನ್ನಾಗಿ ಸುನೀಲ್ ವಲ್ಯಾಪುರೆ ಮತ್ತು ಮುಖ್ಯ ಸಚೇತಕರನ್ನಾಗಿ ಎನ್.ರವಿಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

5ನೇ ಪುಟ ನೋಡಿ

ಬರ ಬೀಳಲಿ ಎಂಬುದೇ ರೈತರ ಬಯಕೆ: ಶಿವಾನಂದ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಪದೇ ಪದೇ ಬರ ಬೀಳಲಿ, ಸಾಲ ಮನ್ನಾ ಆಗುತ್ತದೆ ಎಂದು ರೈತರು ಬಯಸುತ್ತಾರೆ. ಈ ರೀತಿ ಬಯಸಬಾರದು' ಎಂದು ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದ್ದಾರೆ. ಇದರ ವಿಡಿಯೊ ತುಣುಕು ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಈ ಹೇಳಿಕೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಶಿವಾನಂದ ಪಾಟೀಲ

ಜಿಲ್ಲೆಯ ಅಥಣಿ ತಾಲ್ಲೂಕಿನ ಸುಟ್ಟಟ್ಟಿ ಗ್ರಾಮದಲ್ಲಿ ಭಾನುವಾರ ರಾತ್ರಿ ಸಹಕಾರ ಸಂಘದ ಬೆಳ್ಳಿ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಕೃಷ್ಣಾ ನದಿಯಿಂದ ಪುಕ್ಕಟೆ ನೀರು ಸಿಗುತ್ತಿದೆ. ಉಚಿತ ವಿದ್ಯುತ್ ಇದೆ. ಈವರೆಗೆ ಮುಖ್ಯಮಂತ್ರಿ ಆದವರೆಲ್ಲ ಉಚಿತವಾಗಿ ಬೀಜ-ಗೊಬ್ಬರ ನೀಡಿದ್ದಾರೆ. ಸದ್ಯ ರೈತರಿಗೆ ಇರುವುದು ಬರಗಾಲ ಬರಲಿ ಎಂಬ ಬಯಕೆ ಮಾತ್ರ' ಎಂದಿದ್ದಾರೆ.

'ರೈತರು ಬಯಸಿದರೂ, ಬಯಸದಿದ್ದರೂ ಮೂರು ವರ್ಷಕ್ಕೊಮ್ಮೆ ಬರಗಾಲ ಬಂದೇ ಬರುತ್ತದೆ. ಈ ಹಿಂದಿನ ಸರ್ಕಾರಗಳು ಸಾಲ ಮನ್ನಾ ಮಾಡಿವೆ. ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಬಡ್ಡಿ ಮನ್ನಾ ಮಾಡುವ ಹೇಳಿಕೆ ನೀಡಿದ್ದಾರೆ. ರೈತರು ಇಂಥ ನಿರೀಕ್ಷೆ ಇಟ್ಟುಕೊಳ್ಳಬಾರದು' ಎಂದಿದ್ದಾರೆ.

'ರೈತರನ್ನು ಎತ್ತಿಕಟ್ಟುತ್ತಿರುವ ಬಿಜೆಪಿ'

ವಿಜಯಪುರ: 'ಬರ ಸಂದರ್ಭದಲ್ಲಿ ಸಾಲಮನ್ನಾ ಬೇಡಿಕೆ ಸಾಮಾನ್ಯ. ಆದರೆ, ರೈತರು ಸ್ವಾವಲಂಬಿಯಾಗಿ ಬದುಕಬೇಕೆ ಹೊರತು ಸರ್ಕಾರದ ಹಣವನ್ನು ಅವಲಂಬಿಸಬಾರದು. ಸರ್ಕಾರಕ್ಕೆ ಸಾಲ ಕೊಡುವ ಮಟ್ಟಿಗೆ ಸದೃಢರಾಗಬೇಕು ಎಂದು ಹೇಳಿದ್ದೇನೆ. ಇದರಲ್ಲಿ ತಪ್ಪೇನಿದೆ' ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು.

5ನೇ ಪುಟ ನೋಡಿ

ರೈತರ ಬಗ್ಗೆ ಹಗುರವಾಗಿ ಮಾತನಾಡಿರುವ ಶಿವಾನಂದ ಪಾಟೀಲ ಅವರನ್ನು ಸಚಿವ ಸ್ಥಾನದಿಂದ ಕೂಡಲೇ ವಜಾ ಮಾಡಬೇಕು
ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಸಚಿವ ಶಿವಾನಂದ ಪಾಟೀಲ ರೈತರಿಗೆ ಅವಮಾನ ಮಾಡಿದ್ದಾರೆ. ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ರೈತರ ಕ್ಷಮೆ ಕೇಳಬೇಕು
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಶಿವಾನಂದ ಪಾಟೀಲ ಹೇಳಿಕೆ ಖಂಡನೀಯ. ಅನ್ನ ದಾತನ ಕಷ್ಟ, ಸಂಕಷ್ಟಗಳ ಬಗ್ಗೆ ಅವಹೇಳನ ಸರಿಯಲ್ಲ. ಸಚಿವರು ಎಚ್ಚರಿಕೆಯಿಂದ ಮಾತನಾಡಬೇಕು
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

'ಹಿಜಾಬ್: ಆದೇಶ ವಾಪಸ್‌ಗೆ ಯೋಚಿಸಿಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ನಿಷೇಧ ಆದೇಶವನ್ನು ವಾಪಸ್ ಪಡೆಯುವ ಕುರಿತು ಸರ್ಕಾರ ಯೋಚಿಸಿಯೇ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಹಿಜಾಬ್ ನಿಷೇಧ ಆದೇಶ ಹಿಂಪಡೆಯಲು ಸೂಚನೆ ನೀಡಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಾವು ಆ ಬಗ್ಗೆ ಯೋಚಿಸಿಯೇ ಇಲ್ಲ. ಮಾಧ್ಯಮಗಳೇ ಇದನ್ನು ದೊಡ್ಡ ವಿಷಯವನ್ನಾಗಿ ಮಾಡುತ್ತಿವೆ' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕ್ರಿಸ್‌ಮಸ್ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಕಲಬುರಗಿಯ ಸೇಂಟ್ ಮೇರಿ ಚರ್ಚ್ ಮುಂಭಾಗ ಸೋಮವಾರ ಯುವತಿಯರು ಮೇಣದ ಬತ್ತಿ ಹಚ್ಚಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ತಾಜುದ್ದೀನ ಆಜಾದ್

'ಸಂಸದರ ಅಮಾನತನ್ನು ಅಸ್ತ್ರವಾಗಿಸಿದ ಆಡಳಿತ ಪಕ್ಷ'

ಖರ್ಗೆ–ಧನಕರ್ 'ಪತ್ರ ಸಮರ' ತೀವ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಬಗ್ಗೆ ಮೋದಿ ಸರ್ಕಾರ ಹೊಂದಿರುವ ನಿರಂಕುಶ ಮತ್ತು ದುರಹಂಕಾರದ ಧೋರಣೆಯನ್ನು ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರು ಸಮರ್ಥಿಸುತ್ತಿದ್ದಾರೆ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ

ಇದರೊಂದಿಗೆ ಇಬ್ಬರ ನಡುವಣ 'ಪತ್ರ ಸಮರ' ತೀವ್ರ ಸ್ವರೂಪ ಪಡೆದುಕೊಂಡಿದೆ. ಸಂಸತ್ ಕಲಾಪಕ್ಕೆ ಅಡ್ಡಿಪಡಿಸುವುದು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ 'ರಾಜಕೀಯ ತಂತ್ರ' ಎಂದು ಧನಕರ್ ಅವರು ಟೀಕಿಸಿದ್ದರು.

ಅದಕ್ಕೆ ಭಾನುವಾರ ಎರಡು ಪುಟಗಳ ಪತ್ರದ ಮೂಲಕ ಪ್ರತ್ಯುತ್ತರ ನೀಡಿರುವ ಖರ್ಗೆ, ಆಡಳಿತ ಪಕ್ಷವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಳು ಮಾಡಲು, ಸಂಸದೀಯ ವ್ಯವಸ್ಥೆ ಮತ್ತು ಸಂವಿಧಾನದ ತತ್ವಗಳನ್ನು ನಾಶಮಾಡಲು 'ಸಂಸದರ ಅಮಾನತು ಪ್ರಕ್ರಿಯೆ'ಯನ್ನು ಸುಲಭ ಅಸ್ತ್ರವಾಗಿ ಬಳಸಿಕೊಂಡಿದೆ ಎಂದು ದೂರಿದ್ದಾರೆ.

ಸಂಸದೀಯ ವ್ಯವಸ್ಥೆಯನ್ನು ಶಿಥಿಲಗೊಳಿಸಲು ಆಡಳಿತ ಪಕ್ಷವು ಉದ್ದೇಶಪೂರ್ವಕವಾಗಿ ಈ ಕ್ರಮ ತೆಗೆದುಕೊಂಡಿದೆ. 146 ಸಂಸದರನ್ನು ಅಮಾನತು ಮಾಡುವ ಮೂಲಕ ಸರ್ಕಾರವು ಅವರ ಧ್ವನಿಯನ್ನು ಪರಿಣಾಮಕಾರಿಯಾಗಿ ಅಡಗಿಸಿದೆ ಎಂದು ಆರೋಪಿಸಿದ್ದಾರೆ.

ಡಿ. 13ರಂದು ಸಂಸತ್ತಿನಲ್ಲಿ ನಡೆದ ಭದ್ರತಾ ಲೋಪ ಘಟನೆಗೆ ಸಂಬಂಧಿಸಿದಂತೆ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿ ಸಂಸದರು ಸೂಕ್ತ ನಿಯಮಗಳಡಿಯಲ್ಲೇ ನೋಟಿಸ್ ನೀಡಿದ್ದರು ಎಂಬುದನ್ನು ಖರ್ಗೆ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

5ನೇ ಪುಟ ನೋಡಿ

'ಶೀಘ್ರದಲ್ಲೇ ಸಭಾಪತಿ ಭೇಟಿ'

ಜಗದೀಪ್ ಧನಕರ್

ಸಂಸದರ ಅಮಾನತು ಕುರಿತು ಚರ್ಚಿಸಲು ಡಿ. 25ರಂದು ತಮ್ಮನ್ನು ಭೇಟಿಯಾಗುವಂತೆ ಜಗದೀಪ್ ಧನಕರ್ ಅವರು ಖರ್ಗೆ ಅವರನ್ನು ಕೇಳಿಕೊಂಡಿದ್ದರು. ಆದರೆ ಖರ್ಗೆ ಅವರಿಗೆ ಸೋಮವಾರ, ಭೇಟಿಯಾಗಲು ಆಗಲಿಲ್ಲ. 'ದೆಹಲಿಯಿಂದ ಹೊರಗೆ ಇರುವ ಕಾರಣ ಭೇಟಿಯಾಗಲು ಆಗಲಿಲ್ಲ. ದೆಹಲಿಗೆ ವಾಪಸಾದ ಕೂಡಲೇ ಭೇಟಿಯಾಗುವೆ' ಎಂದು ಖರ್ಗೆ ಹೇಳಿದ್ದಾರೆ. 'ಆದರೆ ಸಂಸತ್ ಕಲಾಪ ನಡೆಸಲು ಸರ್ಕಾರ ಉತ್ಸುಕವಾಗಿಲ್ಲದಿದ್ದರೆ, ಚರ್ಚೆ ನಡೆಸುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದೂ ಹೇಳಿದ್ದಾರೆ.

ಸಂಸದರ ಅಮಾನತು ಮಾಡಿಸಿ ಚರ್ಚೆಯಿಲ್ಲದೆಯೇ ಮಸೂದೆಗೆ ಅಂಗೀಕಾರ ಕೊಡಿಸಿ ಕಲಾಪವನ್ನು ಸುಗಮಗೊಳಿಸಿದ್ದೇನೆ ಎಂದು ಸಭಾಪತಿ ಭಾವಿಸಿರುವುದು ನಿರಾಶಾದಾಯಕ
ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಶ್ರೀ ಎಸ್. ಬಂಗಾರಪ್ಪ ಫೌಂಡೇಷನ್ (ರಿ.)
"ಶ್ರೀ ಎಸ್. ಬಂಗಾರಪ್ಪ ಸವಿ ನೆನಪು"
ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿರವರು
ಮಾನ್ಯ ಸಭಾಪತಿಗಳು, ವಿಧಾನ ಪರಿಷತ್, ಕರ್ನಾಟಕ.
ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್‌ರವರು
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ.
ನಿಮ್ಮ ಆದರ್ಶಗಳೇ
ನಮಗೆ ದಾರಿದೀಪ
ಸನ್ಮಾನ್ಯ ಶ್ರೀ ಅರವಿಂದ ಲಿಂಬಾವಳಿರವರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ.
ಶ್ರೀಮತಿ ಗೀತಾ ಶಿವರಾಜ್‌ಕುಮಾರ್‌ರವರು
ನಮ್ಮೆಲ್ಲರ ಅಭಿಮಾನದ ನಾಯಕರು, ಮಾಜಿ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಎಸ್. ಬಂಗಾರಪ್ಪಜೀಯವರ 12ನೇ ವರ್ಷದ ಪುಣ್ಯಸ್ಮರಣೆ
ಅಂಗವಾಗಿ "ಶ್ರೀ ಎಸ್. ಬಂಗಾರಪ್ಪ ಸವಿ ನೆನಪು" ಕಾರ್ಯಕ್ರಮವನ್ನು
ಸೊರಬದ "ಬಂಗಾರಧಾಮ"ದಲ್ಲಿ ಅವರ ಅಭಿಮಾನಿಗಳು ಹಮ್ಮಿಕೊಂಡಿದ್ದು,
ಈ ಕಾರ್ಯಕ್ರಮಕ್ಕೆ ಸಾರ್ವಜನಿಕರ ಆಗಮನವನ್ನು ಬಯಸುತ್ತೇವೆ.
ಸರ್ವರಿಗೂ ಅಭಿಮಾನದ ಸ್ವಾಗತ ಕೋರುವವರು :
ಶ್ರೀ ಎಸ್. ಬಂಗಾರಪ್ಪ ವಿಚಾರ ವೇದಿಕೆ & ಎಸ್. ಬಂಗಾರಪ್ಪ ಅಭಿಮಾನಿ ಬಳಗ
ದಿನಾಂಕ : 26-12-2023, ಮಂಗಳವಾರ
ಸಮಯ : ಸಂಜೆ 4 : 00 ಗಂಟೆಗೆ
Email: bangaradhama@gmail.com,
Live on Facebook : @Bangaradhama Soraba
ತಮ್ಮ ವಿಶ್ವಾಸಿ
ಎಸ್. ಮಧುಬಂಗಾರಪ

ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನಲ್ಲಿ ಭಕ್ತರು ಮೇಣದ ಬತ್ತಿ ಹಚ್ಚಿ ಪ್ರಾರ್ಥನೆ ಸಲ್ಲಿಸಿದರು

ಚರ್ಚ್‌ಗಳಲ್ಲಿ ಶಾಂತಿದೂತ ಯೇಸುಕ್ರಿಸ್ತರ ಸ್ಮರಣೆ, ಸಾಮೂಹಿಕ ಪ್ರಾರ್ಥನೆ ಸಲ್ಲಿಕೆ

ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಚರ್ಚ್‌ಗಳಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಕ್ರೈಸ್ತರು ಚರ್ಚ್‌ಗಳಿಗೆ ಕುಟುಂಬದ ಸದಸ್ಯರೊಂದಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಹಬ್ಬದ ಶುಭಾಶಯ ಕೋರಿದರು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ಗೆ ಕ್ರೈಸ್ತ ಸಮುದಾಯದವರು ಅಲ್ಲದೇ, ವಿವಿಧ ಧರ್ಮಗಳ ಜನರೂ ಭೇಟಿ ನೀಡಿದರು. ಜನಜಾತ್ರೆಯೇ ನಿರ್ಮಾಣವಾಗಿತ್ತು. ಯೇಸುವಿನ ಜೀವನ ಬಿಂಬಿಸುವ ಗೋದಲಿ ಮುಂದೆ ನಿಂತು ಸೆಲ್ಫಿ, ಫೋಟೊ ಕ್ಲಿಕ್ಕಿಸಿಕೊಂಡರು.

ಎಲ್ಲ ಚರ್ಚ್‌ಗಳಲ್ಲಿ ಭಕ್ತರು ತುಂಬಿಹೋಗಿದ್ದು, ಹಲವು ಕಡೆಗಳಲ್ಲಿ ಚರ್ಚ್ ಹೊರಗೆಯೂ ಶಾಮಿಯಾನ ಹಾಕಿ ಆಸನಗಳ ವ್ಯವಸ್ಥೆ ಮಾಡಲಾಗಿತ್ತು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್, ಫ್ರೇಜರ್ ಟೌನ್‌ನ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್ ಚರ್ಚ್, ಬ್ರಿಗೇಡ್ ರಸ್ತೆ ಬಳಿಯ ಸೇಂಟ್ ಪ್ಯಾಟ್ರಿಕ್ಸ್ ಚರ್ಚ್, ಸೇಂಟ್ ಮಾರ್ಕ್ಸ್ ಕೆಥೆಡ್ರಲ್, ಚಾಮರಾಜಪೇಟೆಯ ಸೇಂಟ್ ಜೋಸೆಫ್ಸ್ ಚರ್ಚ್, ಸೇಂಟ್ ಜಾನ್ಸ್ ಚರ್ಚ್ ಸೇರಿದಂತೆ ಎಲ್ಲ ಚರ್ಚ್‌ಗಳಲ್ಲಿ ಬಲಿಪೂಜೆ, ವಿಶೇಷ ಪ್ರಾರ್ಥನೆ, ಶಾಂತಿ ಸಂದೇಶ ಕಾರ್ಯಕ್ರಮಗಳು ನಡೆದವು.

'ಯೇಸುಕ್ರಿಸ್ತರು ಹುಟ್ಟಿದ ದಿನ ಇಡಿ ಮಾನವಕುಲಕ್ಕೆ ಹರ್ಷದ ದಿನ. ಪಾಪಿಗಳ ಹಿತಬಯಸಿದ ಯೇಸುಕ್ರಿಸ್ತರು ಮಾನವರಲ್ಲಿನ ತಾರತಮ್ಯ ನಿವಾರಿಸಿದ್ದಾರೆ' ಎಂದು ಚರ್ಚ್‌ಗಳಲ್ಲಿ ಧರ್ಮಗುರುಗಳು ಸಂದೇಶ ನೀಡಿದರು.

ಕ್ರೈಸ್ತರ ಮನೆಗಳಲ್ಲಿ ಸಂಭ್ರಮ ಮನೆ ಮಾಡಿತ್ತು. ಕ್ರಿಸ್‌ಮಸ್ ಪ್ರಯುಕ್ತ ಸಿದ್ಧಪಡಿಸಿದ್ದ ಪಲಾರಗಳನ್ನು ಬಂಧುಗಳಿಗೆ, ಸ್ನೇಹಿತರಿಗೆ ಕೊಟ್ಟು ಶುಭ ಕೋರಿದರು. ಹಲವರನ್ನು ಮನೆಗಳಿಗೆ ಆಹ್ವಾನ ನೀಡಿ ವಿಶೇಷ ಭೋಜನ ಉಣಬಡಿಸಿದರು.

ತುಂಬಿ ತುಳುಕಿದ ಚರ್ಚ್ ಸ್ಟ್ರೀಟ್

ಮಹಾತ್ಮಗಾಂಧಿ ರಸ್ತೆಗೆ ಹೊಂದಿಕೊಂಡಿರುವ ಬ್ರಿಗೇಡ್ ರಸ್ತೆ ಮತ್ತು ಚರ್ಚ್‌ಸ್ಟ್ರೀಟ್‌ಗೆ ಯುವಜನರು ಭಾರಿ ಸಂಖ್ಯೆಯಲ್ಲಿ ಬಂದಿದ್ದರಿಂದ ಭಾರಿ ಜನದಟ್ಟಣೆ ಉಂಟಾಯಿತು.

ಬೇರೆ ಬೇರೆ ಜಿಲ್ಲೆ, ರಾಜ್ಯ, ದೇಶಗಳಿಂದ ಬಂದು ಬೆಂಗಳೂರಿನಲ್ಲಿರುವ ಜನರು ಶನಿವಾರ, ಭಾನುವಾರ ಚರ್ಚ್‌ಸ್ಟ್ರೀಟ್, ಬ್ರಿಗೇಡ್ ರಸ್ತೆಗಳಿಗೆ ಭೇಟಿ ನೀಡುತ್ತಾರೆ. ಈ ಬಾರಿ, ಕ್ರಿಸ್‌ಮಸ್ ಪ್ರಯುಕ್ತ ಸೋಮವಾರವೂ ಸಂಖ್ಯೆ ಹೆಚ್ಚಾಗಿತ್ತು.

ಚರ್ಚ್ ಸ್ಟ್ರೀಟ್‌ನಲ್ಲಿ ಸೋಮವಾರ ಯುಜನತೆ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು

ಕೇಂದ್ರ ಹೂಮಳೆ ಸುರಿಸುತ್ತಿದೆಯೆ?: ಸಿ.ಎಂ

ಬೆಂಗಳೂರು: 'ಕರ್ನಾಟಕದಲ್ಲಿ ಬರಗಾಲ ಬಂದು ಆರು ತಿಂಗಳಾದರೂ ಪರಿಹಾರ ನೀಡದ, ತೆರಿಗೆಯಲ್ಲೂ ಸರಿಯಾಗಿ ಪಾಲು ಕೊಡದ, 15ನೇ ಹಣಕಾಸು ಆಯೋಗದ ಅನುದಾನ ಹಂಚಿಕೆಯಲ್ಲಿ ವಂಚಿಸಿರುವ ಕೇಂದ್ರ ಸರ್ಕಾರ ಕನ್ನಡಿಗರ ಮೇಲೆ ಸುರಿಸುತ್ತಿರುವುದು ಹೂವಿನ ಮಳೆಯೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ

'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕನ್ನಡಿಗರ ತಲೆ ಮೇಲೆ ಕಲ್ಲು ಹಾಕುತ್ತಿದೆ' ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಟೀಕೆಗೆ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.

'₹ 18,177 ಕೋಟಿ ಬರ ಪರಿಹಾರಕ್ಕೆ ಮನವಿ ಸಲ್ಲಿಸಿದ್ದೇವೆ. ನಾನೇ ಖುದ್ದಾಗಿ ಹೋಗಿ ಪ್ರಧಾನಿ ಮತ್ತು ಗೃಹ ಸಚಿವರನ್ನು ಭೇಟಿಮಾಡಿ ರೈತರ ಕಷ್ಟಗಳನ್ನು ವಿವರಿಸಿದ್ದೇನೆ. ಕಂದಾಯ ಸಚಿವರೂ ಕೃಷಿ ಮತ್ತು ಹಣಕಾಸು ಸಚಿವರನ್ನು ಭೇಟಿ ಮಾಡಿದ್ದಾರೆ. ಈವರೆಗೆ ನಯಾ ಪೈಸೆಯನ್ನೂ ಬಿಡುಗಡೆ ಮಾಡಿಲ್ಲ. ಕನ್ನಡಿಗ ರೈತರ ಮೇಲೆ ಕಲ್ಲು ಹಾಕುತ್ತಿರುವವರು ಯಾರು' ಎಂದು ಅಶೋಕ ಅವರನ್ನು ಪ್ರಶ್ನಿಸಿದ್ದಾರೆ.

'ಕೇಂದ್ರ ಸರ್ಕಾರದ ಸಹಭಾಗಿತ್ವದ ಯೋಜನೆಗಳ ಅನುದಾನದ ಮೊತ್ತವನ್ನು ₹ 20,000 ಕೋಟಿಗಳಿಂದ ₹ 13,000 ಕೋಟಿಗಳಿಗೆ ಇಳಿಕೆ ಮಾಡಲಾಗಿದೆ. 15ನೇ ಹಣಕಾಸು ಆಯೋಗದಲ್ಲಿ ಅನುದಾನ ಹಂಚಿಕೆಯಲ್ಲಿ ಇಳಿಕೆ ಮಾಡಿದ್ದರಿಂದ ನಾಲ್ಕು ವರ್ಷಗಳಲ್ಲಿ ರಾಜ್ಯಕ್ಕೆ ₹ 45,000 ಕೋಟಿಗಳಷ್ಟು ವಂಚನೆಯಾಗಿದೆ. 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ್ದ ₹ 5,495 ಕೋಟಿ ವಿಶೇಷ ಅನುದಾನವನ್ನೂ ಕೊಟ್ಟಿಲ್ಲ. ಕನ್ನಡಿಗರ ತಲೆ ಮೇಲೆ ಕಲ್ಲು ಹಾಕಿದ್ದು ನಿಮ್ಮದೇ ಪಕ್ಷದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಾ? ನಾವಾ?' ಎಂದು ಸಿದ್ದರಾಮಯ್ಯ ಕೇಳಿದ್ದಾರೆ.

ಕರ್ನಾಟಕದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆರಂಭಿಸಬೇಕೆಂಬ ಬೇಡಿಕೆಗೆ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಬೆಂಗಳೂರು ಉಪ ನಗರ ರೈಲು ಯೋಜನೆಗೆ ₹ 18,000 ಕೋಟಿ ಅನುದಾನವನ್ನೂ ಒದಗಿಸಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕೇಂದ್ರದಿಂದ ಅನುದಾನ ಬರುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬೆದರಿಕೆ ಹಾಕಿದ್ದರು. ಚುನಾವಣೆಯಲ್ಲಿ ಬಿಜೆಪಿಗೆ ನೀಡಿದ ಪೆಟ್ಟಿಗಾಗಿ ಕನ್ನಡಿಗರ ತಲೆ ಮೇಲೆ ಕಲ್ಲು ಹಾಕಲಾಗುತ್ತಿದೆಯೆ ಎಂದು ಪ್ರಶ್ನಿಸಿದ್ದಾರೆ.

ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ)
CIN : L65110TN2014PLC097792
ನೋಂದಾಯಿತ ಕಚೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ – 600031. ದೂ: +91 44 4564 4000 ಫ್ಯಾಕ್ಸ್ ನಂ: +91 44 4564 4022.

IDFC FIRST Bank

ಸೆಕ್ಷನ್ 13 (2) ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002

ಕೆಳಕಂಡ ಸೂಚಿತ ಸಾಲಗಾರರು ಮತ್ತು ಸಹ–ಸಾಲಗಾರರಾದ ನೀವುಗಳು ನಿಮ್ಮ ಸ್ಥಿರ ಆಸ್ತಿಯನ್ನು ಅಡಮಾನ ಮಾಡಿ ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್, (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ) ನಿಂದ ಅಡಮಾನ ಮಾಡಿ ಸಾಲವನ್ನು ಪಡೆದುಕೊಂಡಿರುವಿರಿ. ಕೆಳಕಂಡಂತೆ ಸೂಚಿಸಲಾದ ಸಾಲಗಾರರು ಮತ್ತು ಸಹ–ಸಾಲಗಾರರಾದ ಹೀಗೇ ಪಡೆದುಕೊಂಡಿರುವ ಸಾಲಕ್ಕೆ ಖಾತ್ರಿ ನೀಡಿರುತ್ತೀರಿ. ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಅವರ ಸಾಲವನ್ನು ಎನ್‌ಪಿಎ ಎಂದು ವರ್ಗೀಕರಿಸಲಾಗಿದೆ. **ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್, (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ)** ಬ್ಯಾಂಕಿಗೆ ನೀವು ಸಾಲಕ್ಕಾಗಿ ನೀಡಿರುವ ಕರಾರು ಪತ್ರದಂತೆ ಭದ್ರತಾ ಆಸ್ತಿಯ ಸ್ವಾಮ್ಯ, ಹಿತಾಸಕ್ತಿ ಮತ್ತು ಆದಕ್ಕೊದಗುವ ಅನುಕೂಲಗಳ ನಿಮ್ಮ ರಿಸವಬಲ್ಸ್ ಬಗ್ಗೆ ಎಲ್ಲಾ ಹಕ್ಕುಗಳು ಇರುತ್ತವೆ. ಭದ್ರತಾ ಹಿತಾಸಕ್ತಿ ಮತ್ತು ಸ್ವಾಮ್ಯದ ಬಗ್ಗೆ ಒತ್ತಿ ಹೇಳುತ್ತದೆ. ಸದರಿ ಸಾಲ ಪಡೆಯುವಾಗ ನೀವು ಮಾಡಿಕೊಟ್ಟಿರುವ ಕರಾರು ಪತ್ರವೂ ಸಹ ಅದನ್ನೆ ಒತ್ತಿ ಹೇಳುತ್ತದೆ.

ಕ್ರ. ಸಂ.	ಸಾಲದ ಖಾತೆ ಸಂಖ್ಯೆ	ಲೋನ್ ಮಾದರಿ	ಸಾಲಗಾರರು ಮತ್ತು ಸಹ–ಸಾಲಗಾರರ ಹೆಸರು	ವಿಭಾಗ 13(2) ಸೂಚನೆ ದಿನಾಂಕ	ಸೆಕ್ಷನ್13(2)ರೀತ್ಯಾ ಪ್ರಕಾರ ಬರಬೇಕಾದ ಬಾಕಿ ಮೊತ್ತ (ರೂ.ಗಳಲ್ಲಿ)	ಆಸ್ತಿಯ ವಿವರಣೆ
1.	10121074266	ಬಿಬಿಜಿ	1. ಸಾಗರ್ ಎಂಟರ್‌ಪ್ರೈಸಸ್ 2. ವಿನೀತ್ ಕುಮಾರದ ಎ 3. ದೀಪಿಕಾ ಸಜ್ಜನ್ ರಾವ್ ಜೈನ್	16.12.2023	ರೂ.ಗಳಲ್ಲಿ 4,34,42,804.00/–	ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಹೊಂದಿರುವ ಕಮರ್ಷಿಯಲ್ ಅಪಾರ್ಟ್‌ಮೆಂಟ್ ನಂ.ಎಫ್–1, ಒಂದನೇ ಮಹಡಿ, 1270 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ, (ಮತ್ತು 19.94% ಅವಿಭಾಜಿತ ಭೂಮಿಯಲ್ಲಿ ಸರಿಸುಮಾರು 259.8 ಚದರ ಅಡಿ ಭಾಗ, ಹಕ್ಕು ಶೀರ್ಷಿಕೆ ಮತ್ತು ಆಸಕ್ತಿಯನ್ನು ಹೊಂದಿದೆ), ಕಮರ್ಷಿಯಲ್ ಕಟ್ಟಡವನ್ನು "ರಮೇಶ್ ಮಾರ್ಕೆಟ್" ಎಂದು ಕರೆಯಲಾಗಿದ್ದು, ಸ್ಥಿರಾಸ್ತಿಯ ಹಳೆ ನಂ. ಗಳು 12 & 10, ಹೊಸ ನಂ. 76, ಪಿಐಡಿ ನಂ. 28–105–76, ದಿವಾನ್ ಖಾನ್ ಲೇನ್, ಚಿಕ್ಕಪೇಟೆ, ಬಿಬಿಎಂಪಿ ವಾರ್ಡ್ ನಂ.28, (ಚಿಕ್ಕಪೇಟೆ) ಬೆಂಗಳೂರು, ಕರ್ನಾಟಕ–560053, **ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಆಸ್ತಿ ನಂ. 529/1, ಪಶ್ಚಿಮಕ್ಕೆ : ದಿವಾನ್ ಖಾನ್ ಲೇನ್, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ಖಾಸಗಿ ಆಸ್ತಿ.**

ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್, (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ)ನ ಬಾಕಿಯಾಗಿರುವ ಸಾಲವನ್ನು ವಸೂಲು ಮಾಡುವುದಕ್ಕಾಗಿ, ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ ರಡಿ ನಿಮ್ಮಲ್ಲರ ಮೇಲೆ ಡಿಮ್ಯಾಂಡ್ ನೋಟೀಸ್ ಹೊರಡಿಸಿ ಜಾರಿ ಮಾಡಿತ್ತು. ಸಾಲಗಾರರ, ಸಹ–ಸಾಲಗಾರರ, ಜಾಮೀನುದಾರರ, ಅಡಮಾನ ಮಾಡಿದ ಆಸ್ತಿಗಳ, ಪೂರ್ಣ ಮೊತ್ತವನ್ನು ಈ ನೋಟೀಸಿನಿಂದ **60 ದಿನ**ಗಳೊಳಗಾಗಿ ಪಾವತಿ ಮಾಡಬೇಕು. ಬಾಕಿ ಸಾಲಗಳ ವಿವರಗಳಿರುವ ಸರ್ಫೇಸಿ ಆಕ್ಟ್ 14, ಕಲಂ 13(4)ರಡಿಯ ಡಿಮ್ಯಾಂಡ್ ನೋಟೀಸಿನ ವಿವರಗಳನ್ನು ಈ ಮೇಲೆ ನೀಡಲಾಗಿದೆ. ದಯವಿಟ್ಟು ಈ ಪ್ರಕಟಣೆಯನ್ನು ಸದರಿ ಸಾಲಗಾರರು ಮತ್ತು ಜಾಮೀನುದಾರರ ಹಾಗೂ ಸದರಿ ಹಣಕಾಸು ಸಾಲದ ಬಗ್ಗೆ **ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್, (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ)**ಗೆ ಲಭ್ಯವಿರುವಂತಹ ಹಕ್ಕುಗಳು ಮತ್ತು ಪರಿಹಾರಗಳ ಬಗ್ಗೆ ಯಾವುದೇ ಪೂರ್ವಾಗ್ರಹವಿಲ್ಲದೇ ಪ್ರಕಟಿಸಲಾಗಿದೆ. ಸದರಿ ಕಾಯಿದೆಯ ಕಲಂ 13(13)ರಂತೆ ನೀವು ಗಮನದಲ್ಲಿಟ್ಟುಕೊಳ್ಳಬೇಕಾದುದೇನೆಂದರೆ, ನೀವು ಸಾಲಕ್ಕಾಗಿ ಅಡಮಾನ ಮಾಡಿರುವ ಭದ್ರತಾ ಆಸ್ತಿಗಳನ್ನು ನಮ್ಮ ಲಿಖಿತ ಪೂರ್ವಾನುಮತಿಯಿಲ್ಲದೇ ಮಾರಾಟ, ಭೋಗ್ಯಧಾರ ಅಥವಾ ಇತರ ರೀತಿಯಲ್ಲಿ ವರ್ಗಾವಣೆ ಮಾಡದಂತೆ ತಡೆಹಿಡಿಯಲಾಗಿದೆ / ನಿಬಂಧಿಸಲಾಗಿದೆ.

ಸಹಿ/–
ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್,
(ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ)

ದಿನಾಂಕ : 26.12.2023
ಸ್ಥಳ : ಬೆಂಗಳೂರು

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Training

NURSERY TEACHERS
TRAINING Course at JNANABHARATHI,with in Class Training 6_Months/1_year (offline/online),100% Job_Assurance. Call:6363032729

PERSONAL

Change of Name

I VYBHAV Pujari alias Vaibhav S Pujari, s/o Siddappa Pujari,R/0 #815, Kayvalya Marga,Siddhartha Nagar,Mysore, Karnataka-570011,have Changed My name To Vaibbhav Siddappa Pujari For All Future purposes. Vide affidavit Date:21-12-2023 Sworn Before Notary K Gunde Gowda Bangalore.

I, SANJIV K SHISHUPALAN S/O KADIKETRA SHISHUPALAN, RESIDENT AT NO 12, GUNJAVATHI POST, MUNDAGODU TALUK, GUNJAVATI VILLAGE, UTTARA KANNADA, KARNATAKA 581349 HAVE CHANGED MY NAME TO SANJEEV K SHISHUPALAN VIDE AFFIDAVIT DATED 20/12/2023 SWORN BEFORE NOTARY D.S. SATHYANARAYANA, BENGALURU

I,THANUSH SARAVANA, changed my name to THANUSH SHARAVANA dated: 21.12.2023. Sworn before notary H.S.Sakalesh Aradhya, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds ಪ್ರಜಾವಾಣಿ
More value, more impact
The 1st thing to do when Selling/Buying your Property
REAL ESTATE
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ದೇಶದ ಘನತೆ ಹೆಚ್ಚಿಸಿದ ಮೋದಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರೇಂದ್ರ ಮೋದಿ ಪ್ರಧಾನಿಯಾದ ನಂತರ ಅಂತರ ರಾಷ್ಟ್ರೀಯಮಟ್ಟದಲ್ಲಿ ಭಾರತೀಯರ ಘನತೆ ಹೆಚ್ಚಾಗಿದೆ. ಭ್ರಷ್ಟಾಚಾರ ಮುಕ್ತ ಆಡಳಿತ ಅವರ ಹೆಗ್ಗಳಿಕೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನಾಡಪ್ರಭು ಕೆಂಪೇಗೌಡ ಜನಪರ ವೇದಿಕೆ, ಡಾ.ಸಿ.ಎನ್.ಅಶ್ವತ್ಥ ನಾರಾಯಣ ಫೌಂಡೇಷನ್ ಸೋಮವಾರ ಹಮ್ಮಿಕೊಂಡಿದ್ದ 'ಉತ್ತಮ ಆಡಳಿತ ದಿನ' ಕಾರ್ಯಕ್ರಮ ಉದ್ಘಾಟಿಸಿದ ಅವರು ಮಾತನಾಡಿದರು.

ದೇಶದಲ್ಲಿ ಭ್ರಷ್ಟಾಚಾರರಹಿತ ಆಡಳಿತದ ಬುನಾದಿ ಹಾಕಿಕೊಟ್ಟ ಕೀರ್ತಿ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಸಲ್ಲುತ್ತದೆ. ಚತುಷ್ಪಥ ರಸ್ತೆಗಳ ಮೂಲಕ ಕ್ರಾಂತಿಯನ್ನೇ ಮಾಡಿದರು. ಸ್ವಾತಂತ್ರ್ಯ ಭಾರತದ ನಂತರದ ಅತ್ಯುತ್ತಮ ವಿದೇಶಾಂಗ ನೀತಿ ರೂಪಿಸಿದ್ದರು. 25ಕ್ಕೂ ಹೆಚ್ಚು ರಾಷ್ಟ್ರಗಳ ಜತೆಗೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ನವಭಾರತ ಕನಸಿನ ಬೀಜ ಬಿತ್ತಿದ್ದರು ಎಂದು ಸ್ಮರಿಸಿದರು.

'ಜಗತ್ತು ಭಾರತದತ್ತ ನೋಡುತ್ತಿದೆ. ದೇಶದ ಪ್ರಗತಿಗಾಗಿ ಮೋದಿ ಹಗಲಿರುಳು ದುಡಿಯುತ್ತಿದ್ದಾರೆ ಎಂದರು.

ಶಾಸಕ ಸಿ.ಎನ್.ಅಶ್ವತ್ಥನಾರಾಯಣ, ಉತ್ತಮ ಆಡಳಿತವೇ ಎಲ್ಲ ಸಮಸ್ಯೆಗಳಿಗೂ ಪರಿಹಾರ ಎಂಬ ಧ್ಯೇಯವನ್ನು ಬಿಜೆಪಿ ತೋರಿಸಿಕೊಟ್ಟಿದೆ. ವಾಜಪೇಯಿ, ನರೇಂದ್ರ ಮೋದಿ ಆಡಳಿತ ಎಲ್ಲರಿಗೂ ಮಾದರಿ ಎಂದು ಮೆಚ್ಚುಗೆ ವ್ಯಕ್

ಗುಣಮಟ್ಟದ ಶಿಕ್ಷಣ ಎಂದರೆ ಕಡಿಮೆ ವೇತನ ಕೊಡುವುದೇ: ಬಿಬಿಎಂಪಿ ಶಾಲೆಗಳ ಹೊರಗುತ್ತಿಗೆ ಶಿಕ್ಷಕರ ಪ್ರಶ್ನೆ

ಹೊರಗುತ್ತಿಗೆ ಶಿಕ್ಷಕರು ಬಾಣಲೆಯಿಂದ ಬೆಂಕಿಗೆ!

• ಗುರು ಪಿ.ಎಸ್.

ಪ್ರಜಾವಾಣಿ ವಿಶೇಷ

ಬೆಂಗಳೂರು: 'ನಾವೆಲ್ಲರೂ ಬಾಣಲೆಯಿಂದ ಬೆಂಕಿಗೆ ಬೀಳುವ ಭೀತಿಯಲ್ಲಿ ಇದ್ದೇವೆ...'

ಬಿಬಿಎಂಪಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಆತಂಕದ ಮಾತು ಇದು.

ಬಿಬಿಎಂಪಿ ಶಾಲೆಗಳಿಗೆ ಶಿಕ್ಷಕರನ್ನು ಪೂರೈಸುವ ಜವಾಬ್ದಾರಿಯನ್ನು ಶಿಕ್ಷಣ ಇಲಾಖೆಗೆ ನೀಡುವ ಸರ್ಕಾರದ ನಿರ್ಧಾರ 500ಕ್ಕೂ ಹೆಚ್ಚಿನ ಶಿಕ್ಷಕರನ್ನು ಚಿಂತೆಗೀಡುಮಾಡಿದೆ.

'ಬಿಬಿಎಂಪಿ ಪ್ರೌಢಶಾಲೆಯಲ್ಲಿ 15 ವರ್ಷಗಳಿಂದ ನಾನು ಹೊರಗುತ್ತಿಗೆ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ತಿಂಗಳಿಗೆ ಕೇವಲ ₹18,500 ವೇತನ ಬರುತ್ತಿದೆ. ಬೆಂಗಳೂರಿನಂತಹ ನಗರದಲ್ಲಿ ಇಷ್ಟು ಸಂಬಳದಲ್ಲಿ ಜೀವನ ನಡೆಸುವುದೇ ಕಷ್ಟವಾಗಿದೆ. ಆದರೆ, ಶಿಕ್ಷಕರನ್ನು ಪೂರೈಸುವ ಜವಾಬ್ದಾರಿಯನ್ನು ಶಿಕ್ಷಣ ಇಲಾಖೆಗೆ ವಹಿಸಿದರೆ, ನಾವು ಅತಿಥಿ ಶಿಕ್ಷಕರಾಗಬೇಕಾಗುತ್ತದೆ. ಆಗ, ಇದರ ಅರ್ಧದಷ್ಟೂ ವೇತನ ಕೊಡುವುದಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಶಿಕ್ಷಕರೊಬ್ಬರು ಅಳಲು ತೋಡಿಕೊಂಡರು.

'ಅನೇಕ ಶಿಕ್ಷಕರು ಹೊರಗುತ್ತಿಗೆಯಲ್ಲೇ 10–15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಪಾಲಿಕೆ ಬಿಟ್ಟು, ಇಲಾಖೆಗೆ ಹೋದರೆ ಇಷ್ಟು ವರ್ಷಗಳ ನಮ್ಮ ಹೊರಗುತ್ತಿಗೆ ಸೇವೆಯನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಸೇವಾ ಭದ್ರತೆಗಾಗಿ ಹೋರಾಡುತ್ತಿದ್ದ ನಮ್ಮನ್ನು, ಈಗಿರುವ ಕೆಲಸದಿಂದಲೂ ತೆಗೆದುಹಾಕುವ ಪ್ರಯತ್ನ ನಡೆಯುತ್ತಿದೆ' ಎಂದರು.

'ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ನಾಲ್ಕು ವರ್ಷಗಳ ಹಿಂದೆ ಪಾಲಿಕೆಯ ಸಾಮಾನ್ಯ ಸಭೆಯಲ್ಲಿಯೇ ತೀರ್ಮಾನ ಆಗಿತ್ತು. ಅದನ್ನು ಅನುಷ್ಠಾನಗೊಳಿಸುವ ವೇಳೆಗೆ ಕೋವಿಡ್ ಬಿಕ್ಕಟ್ಟು ಸೃಷ್ಟಿಯಾಯಿತು. ಅದಾದ ನಂತರ, ಪಾಲಿಕೆಯಲ್ಲಿ ಹಣ ಇಲ್ಲ ಎಂದು ಹೇಳತೊಡಗಿದರು. ಗುಣಮಟ್ಟದ ಶಿಕ್ಷಣ ಎಂದರೆ, ಹೊರಗುತ್ತಿಗೆ ಶಿಕ್ಷಕರಿಗೆ ಕಡಿಮೆ ವೇತನ ಕೊಡುವುದು ಎಂದರ್ಥವೇ ' ಎಂದು ಮತ್ತೊಬ್ಬ ಶಿಕ್ಷಕರು ಪ್ರಶ್ನಿಸಿದರು.

'ನಮ್ಮಲ್ಲಿ ಎಂಟು ಜನ ಶಿಕ್ಷಕರಿದ್ದೇವೆ. ಅದರಲ್ಲಿ ನಾನೊಬ್ಬನೇ ಕಾಯಂ ಶಿಕ್ಷಕ. ಉಳಿದ ಎಲ್ಲರೂ ಹೊರಗುತ್ತಿಗೆ ಶಿಕ್ಷಕರಾಗಿದ್ದು, ಎಲ್ಲರೂ ಉತ್ತಮವಾಗಿ ಕೆಲಸ ಮಾಡುತ್ತಾರೆ' ಎಂದು ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆಯ ಉಪಪ್ರಾಂಶುಪಾಲ ಸಲೀಂ ಅವರು ಹೇಳಿದರು.

'ಹೊರಗುತ್ತಿಗೆ ಶಿಕ್ಷಕರಿಗೆ ಇನ್ನೂ ಕಡಿಮೆ ವೇತನ ನೀಡಿದರೆ ಅದರಿಂದ ಶಿಕ್ಷಣದ ಗುಣಮಟ್ಟದ ಮೇಲೂ ಪರಿಣಾಮವಾಗಬಹುದು' ಎಂದು ಬಿಬಿಎಂಪಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಖಜಾಂಚಿ ಎನ್.ಎಸ್. ಸೋಮಶೇಖರ್ ಅವರು ಹೇಳಿದರು.

ಉತ್ತಮ ಶಿಕ್ಷಕರಿಗೆ ಆತಂಕ ಬೇಡ: ತುಷಾರ್ ಗಿರಿನಾಥ್

'ಗುಣಮಟ್ಟ ಸುಧಾರಿಸಬೇಕು ಮತ್ತು ಉತ್ತಮ ಫಲಿತಾಂಶ ಸಿಗಬೇಕು ಎಂಬ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಉತ್ತಮವಾಗಿ ಬೋಧಿಸುವ ಶಿಕ್ಷಕರಿಗೆ ಯಾವುದೇ ಆತಂಕ ಬೇಡ' ಎಂದು ಬಿಬಿಎಂಪಿ ಮುಖ್ಯಆಯುಕ್ತ ತುಷಾರ್ ಗಿರಿನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

'2024–25ರಿಂದ ಶಿಕ್ಷಕರನ್ನು ಪೂರೈಸುವ ಜವಾಬ್ದಾರಿ ಶಿಕ್ಷಣ ಇಲಾಖೆಗೆ ನೀಡಲಾಗುತ್ತಿದ್ದರೂ, ಆಯಾ ಶಾಲೆಗಳಿಗೆ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳುವುದು ಆಯಾ ಎಸ್‌ಡಿಎಂಸಿ ಕರ್ತವ್ಯ. ಎಸ್‌ಡಿಎಂಸಿಗಳಲ್ಲಿ ಪೋಷಕರೂ ಇರುವುದರಿಂದ ಉತ್ತಮ ಶಿಕ್ಷಕರನ್ನು ತೆಗೆದುಕೊಳ್ಳಬಹುದು. ಬೆಂಗಳೂರಿನಲ್ಲಿ ಈ ಶಿಕ್ಷಕರ ವೇತನ ಎಷ್ಟಿರಬೇಕು ಎಂಬುದನ್ನು ಶಿಕ್ಷಣ ಇಲಾಖೆಯೇ ತೀರ್ಮಾನಿಸುತ್ತದೆ. ಆದರೆ, ನಮ್ಮ ಮೊದಲ ಆದ್ಯತೆ ಈಗ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನೇ ತೆಗೆದುಕೊಳ್ಳುವುದಾಗಿರುತ್ತದೆ' ಎಂದರು.

'ಬೇರೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಕಾಯಂ ಶಿಕ್ಷಕರು ಬೆಂಗಳೂರಿಗೆ ಬರಬಹುದು. ಪ್ರಾರಂಭದಲ್ಲಿ ಇಂತಹ ಶೇ 10ರಿಂದ ಶೇ 15ರಷ್ಟು ಶಿಕ್ಷಕರನ್ನು ಮಾತ್ರ ಹೊರಗಡೆಯಿಂದ ತೆಗೆದುಕೊಳ್ಳಲು ಮಾತುಕತೆ ನಡೆಸಿದ್ದೇವೆ' ಎಂದೂ ಅವರು ಹೇಳಿದರು.

ಅಂಕಿ–ಅಂಶ

514 ಬಿಬಿಎಂಪಿ ಶಾಲೆಗಳಲ್ಲಿರುವ ಹೊರಗುತ್ತಿಗೆ ಶಿಕ್ಷಕರು

258 ಬಿಬಿಎಂಪಿ ಕಾಲೇಜುಗಳಲ್ಲಿರುವ ಹೊರಗುತ್ತಿಗೆ ಉಪನ್ಯಾಸಕರು

142 ಬಿಬಿಎಂಪಿ ಶಾಲೆ–ಪ್ರೌಢಶಾಲೆಗಳು

25 ಬಿಬಿಎಂಪಿ ಪಿಯು, ಪದವಿ, ಪಿಜಿ ಕಾಲೇಜುಗಳು

ಗುಣಮಟ್ಟದ ಶಿಕ್ಷಕರಿಗೆ ಆದ್ಯತೆ:ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಬಿಬಿಎಂಪಿ ಶಾಲೆಗಳಲ್ಲಿ ಬಡವರ ಮಕ್ಕಳು ಓದುತ್ತಿದ್ದಾರೆ. ಅಲ್ಲಿನ ಶಿಕ್ಷಣ ಮಟ್ಟ ಸುಧಾರಿಸುವ ಉದ್ದೇಶದಿಂದ ಗುಣಮಟ್ಟದ, ತರಬೇತಿ ಹೊಂದಿದ ಶಿಕ್ಷಕರನ್ನು ನೇಮಿಸಲು ನಿರ್ಧರಿಸಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪಾಲಿಕೆ ಶಾಲೆ, ಕಾಲೇಜುಗಳಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಉಪನ್ಯಾಸಕರು ಉಪ ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿ ಮಾಡಿ, ತಮ್ಮನ್ನು ಸೇವೆಯಲ್ಲಿ ಮುಂದುವರಿಸುವಂತೆ ಆಗ್ರಹಿಸಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್, 'ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ತಮ್ಮನ್ನು ಮುಂದುವರಿಸುವಂತೆ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರು ಮನವಿ ಮಾಡಿದ್ದಾರೆ. ಈಗ ಇರುವವರಲ್ಲಿ ಗುಣಮಟ್ಟದ, ತರಬೇತಿ ಹೊಂದಿದ ಶಿಕ್ಷಕರಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

ಸೆಕ್ಯೂರಿಟಿ ಏಜೆನ್ಸಿಗಳಿಂದ ಶಿಕ್ಷಕರನ್ನು ನೇಮಿಸಲಾಗುತ್ತಿದೆ ಎಂಬ ದೂರು ಬಂದಿದೆ. ಯಾರು? ಯಾವ ಕೆಲಸ ಮಾಡುತ್ತಾರೋ? ಅದನ್ನೇ ಮಾಡಬೇಕು. ಬಿಬಿಎಂಪಿ ಶಾಲೆಗಳಲ್ಲಿ ಗುಣಮಟ್ಟ ಕುಸಿದಿದೆ. ಈ ಕಾರಣದಿಂದ ಪಾಲಿಕೆ ಶಾಲೆಗಳನ್ನು ಶಿಕ್ಷಣ ಇಲಾಖೆ ಅಧೀನಕ್ಕೆ ವಹಿಸಲಾಗಿದೆ. ಈ ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವ ಕೆಲಸವನ್ನು ಮಾತ್ರ ಬಿಬಿಎಂಪಿ ಮಾಡಲಿದೆ ಎಂದರು.

'ಶೀಘ್ರ ನೇಮಕ'

'ನಿಗಮ, ಮಂಡಳಿ ನಾಮ ನಿರ್ದೇಶನಕ್ಕೆ ಪಕ್ಷದ ವರಿಷ್ಠರಿಗೆ ಪಟ್ಟಿ ನೀಡಲಾಗಿದೆ. ಯಾವುದೇ ಕ್ಷಣದಲ್ಲಿ ನೇಮಕಾತಿ ಆದೇಶ ಹೊರಬೀಳಬಹುದು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಪರಿಹಾರಕ್ಕಾಗಿ ರೈತರು ಬರಗಾಲವನ್ನು ಬಯಸುತ್ತಾರೆ' ಎಂಬ ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿಕೆ ಕುರಿತು ಪ್ರಶ್ನಿಸಿದಾಗ, 'ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ' ಎಂದರು.

ಜಿಮ್ ತರಬೇತುದಾರ ಸಾವು: ಆತ್ಮಹತ್ಯೆ ಶಂಕೆ

ಬೆಂಗಳೂರು: ಹರಳೂರು- ಸರ್ಜಾಪುರ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಾಲ್ಕನೇ ಮಹಡಿಯಿಂದ ಬಿದ್ದು ಗಣೇಶ್ ಪಾಂಡು (32) ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಒಡಿಶಾದ ಗಣೇಶ್ ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ವಾಸವಿದ್ದ ಅಕ್ಕನ ಮನೆಯಲ್ಲಿ ವಾಸವಿದ್ದರು. ಜಿಮ್ ತರಬೇತುದಾರರಾಗಿ ಕೆಲಸ ಮಾಡುತ್ತಿದ್ದರು' ಎಂದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಹೇಳಿದರು.

'ಭಾನುವಾರ ರಾತ್ರಿ ಚಾವಣಿ ಮೇಲೆ ಹೋಗಿದ್ದ ಗಣೇಶ್, ಅಲ್ಲಿಯೇ ಮದ್ಯ ಕುಡಿದಿದ್ದನೆಂದು ಗೊತ್ತಾಗಿದೆ. ನಂತರ, ನಾಲ್ಕನೇ ಮಹಡಿಯಿಂದ ಜಿಗಿದು ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಬಿಬಿಎಂಪಿ ಎಂಜಿನಿಯರ್ ದೇವೇಂದ್ರಪ್ಪ ಖುಲಾಸೆ

ಲಂಚ ಪ್ರಕರಣ: ಅಭಿಯೋಜನಾ ಮಂಜೂರಾತಿಯಲ್ಲಿ ಲೋಪ • ವಿಶೇಷ ನ್ಯಾಯಾಲಯ ಆದೇಶ

ಪ್ರಜಾವಾಣಿ ವಾರ್ತೆ

ದೇವೇಂದ್ರಪ್ಪ

ಬೆಂಗಳೂರು: ಆರೋಪಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡುವಲ್ಲಿನ ಲೋಪದ ಕಾರಣದಿಂದ ಬಿಬಿಎಂಪಿಯ ಬೊಮ್ಮನಹಳ್ಳಿ ವಲಯದ ನಗರ ಯೋಜನಾ ವಿಭಾಗದ ಹಿಂದಿನ ಸಹಾಯಕ ನಿರ್ದೇಶಕ ಎಸ್.ಎನ್. ದೇವೇಂದ್ರಪ್ಪ ಅವರನ್ನು ಲಂಚ ಪ್ರಕರಣದಲ್ಲಿ ಖುಲಾಸೆಗೊಳಿಸಿ ಲೋಕಾಯುಕ್ತ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಕಟ್ಟಡವೊಂದರ ಸ್ವಾಧೀನತಾ ಪ್ರಮಾಣಪತ್ರ (ಒ.ಸಿ) ನೀಡಲು ₹ 40 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ಮೊದಲ ಕಂತಿನಲ್ಲಿ ₹ 20 ಲಕ್ಷ ಪಡೆಯುತ್ತಿದ್ದಾಗ 2021 ರ ಫೆಬ್ರುವರಿ 5 ರಂದು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ದೇವೇಂದ್ರಪ್ಪ ಅವರನ್ನು ಬಂಧಿಸಿದ್ದರು. ನಂತರ ಅವರ ಮನೆಯಲ್ಲಿ ಶೋಧ ನಡೆಸಿದಾಗ ಬಿಬಿಎಂಪಿಯ 480 ಕಡತಗಳು, ಮುಖ್ಯ ಎಂಜಿನಿಯರ್‌ಗಳು ಸೇರಿದಂತೆ ಪಾಲಿಕೆಯ ವಿವಿಧ ಅಧಿಕಾರಿಗಳ ಹೆಸರಿನಲ್ಲಿದ್ದ 80 ಮೊಹರುಗಳು ಹಾಗೂ 120 ಲೀಟರ್ ದುಬಾರಿ ಬೆಲೆಯ ಮದ್ಯದ ಬಾಟಲಿಗಳು ಪತ್ತೆಯಾಗಿದ್ದವು.

ತನಿಖೆಯನ್ನು ಪೂರ್ಣಗೊಳಿಸಿದ್ದ ಎಸಿಬಿ ಪೊಲೀಸರು, ಆರೋಪಿ ಅಧಿಕಾರಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಬಿಬಿಎಂಪಿ ಆಯುಕ್ತರಿಗೆ ಪ್ರಸ್ತಾವ ಸಲ್ಲಿಸಿದ್ದರು. 2021ರ ಮಾರ್ಚ್ 17 ರಂದು ಬಿಬಿಎಂಪಿ ಆಯುಕ್ತರು ಆರೋಪಪಟ್ಟಿ ಸಲ್ಲಿಕೆಗೆ ಅಭಿಯೋಜನಾ ಮಂಜೂರಾತಿ ನೀಡಿದ್ದರು. ನಂತರ ಎಸಿಬಿ ಅಧಿಕಾರಿಗಳು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ಆರಂಭವಾಗುತ್ತಿದ್ದಂತೆಯೇ ಭ್ರಷ್ಟಾಚಾರ ಪ್ರಕರಣಗಳ ವಿಶೇಷ (ಲೋಕಾಯುಕ್ತ) ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ದೇವೇಂದ್ರಪ್ಪ, ಅಭಿಯೋಜನಾ ಮಂಜೂರಾತಿ ನೀಡಿರುವುದರಲ್ಲೇ ದೋಷವಿದೆ ಎಂದು ತಕರಾರು ಎತ್ತಿದ್ದರು.

ಅಧಿಕೃತವಾಗಿ ಸಹಾಯಕ ಎಂಜಿನಿಯರ್ ಹುದ್ದೆಯಲ್ಲಿದ್ದ ಆರೋಪಿಯು, 'ಬಿ' ಗುಂಪಿನ 'ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕ' ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. 'ಅಧಿಕಾರಿಯನ್ನು ನೇಮಿಸುವ ಮತ್ತು ಸೇವೆಯಿಂದ ತೆಗೆದುಹಾಕುವ ಅಧಿಕಾರ ಹೊಂದಿರುವವರು ಮಾತ್ರ ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರವಿದೆ. 'ಬಿ' ಗುಂಪಿನ ಅಧಿಕಾರಿಯನ್ನು ನೇಮಿಸುವ ಅಥವಾ ತೆಗೆದುಹಾಕುವ ಅಧಿಕಾರ ಬಿಬಿಎಂಪಿ ಆಯುಕ್ತರಿಗೆ ಇಲ್ಲ. ಆದ್ದರಿಂದ ಅಭಿಯೋಜನಾ ಮಂಜೂರಾತಿಯೇ ಕಾನೂನುಬಾಹಿರ' ಎಂದು ಆರೋಪಿ ಪರ ವಕೀಲರು ವಾದಿಸಿದ್ದರು.

'ಬಿ' ಗುಂಪಿನ ಅಧಿಕಾರಿಗಳನ್ನು ಸೇವೆಯಿಂದ ತೆಗೆದುಹಾಕಲು ಬಿಬಿಎಂಪಿ ಆಯುಕ್ತರಿಗೆ ಅಧಿಕಾರ ನೀಡಿ 2014ರಲ್ಲಿ ಹೊರಡಿಸಿದ್ದ ಆದೇಶದ ಪ್ರತಿಯನ್ನು ಲೋಕಾಯುಕ್ತದ ಪಬ್ಲಿಕ್ ಪ್ರಾಸಿಕ್ಯೂಟರ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರವಿದೆ ಎಂದೂ ಪ್ರತಿವಾದ ಮಂಡಿಸಿದ್ದರು.

'ಬಿ' ಗುಂಪಿನ ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವ ಅಧಿಕಾರ ಸರ್ಕಾರಕ್ಕೆ ಮಾತ್ರ ಇದೆ' ಎಂದಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎಂ. ರಾಧಾಕೃಷ್ಣ, ಪ್ರಕರಣದಿಂದ ದೇವೇಂದ್ರಪ್ಪ ಅವರನ್ನು ಬಿಡುಗಡೆಗೊಳಿಸಿ ಡಿಸೆಂಬರ್ 18 ರಂದು ಆದೇಶ ಹೊರಡಿಸಿದ್ದಾರೆ.

ಆರೋಪಪಟ್ಟಿ ಸಲ್ಲಿಸಲು ಅವಕಾಶ

ಎಸಿಬಿ ಅಧಿಕಾರಿಗಳು ಸಲ್ಲಿಸಿದ್ದ ಆರೋಪಪಟ್ಟಿಯಿಂದ ದೇವೇಂದ್ರಪ್ಪ ಅವರನ್ನು ಬಿಡುಗಡೆಗೊಳಿಸಿದ್ದರೂ, ತನಿಖಾ ಸಂಸ್ಥೆಯು ಕಾನೂನಿನ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ಪಡೆದು ಮತ್ತೆ ಆರೋಪಪಟ್ಟಿ ಸಲ್ಲಿಸಲು ನ್ಯಾಯಾಲಯ ಅವಕಾಶ ನೀಡಿದೆ.

ಮಣ್ಣು ಕುಸಿದು ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಾಣಕ್ಕಾಗಿ ತೊಡಲಾಗುತ್ತಿದ್ದ ಪಾಯದ ಮಣ್ಣು ಕುಸಿದು ಕಾರ್ಮಿಕ ರಂಜನ್‌ಕುಮಾರ್ ಅವರು ಮೃತಪಟ್ಟಿದ್ದಾರೆ.

'ಬಿಹಾರದ ರಂಜನ್‌ಕುಮಾರ್, ಕೆಲಸ ಹುಡುಕಿಕೊಂಡು ಹಲವು ತಿಂಗಳ ಹಿಂದೆ ನಗರಕ್ಕೆ ಬಂದಿದ್ದರು. ಸ್ನೇಹಿತರ ಜೊತೆ ವಾಸವಿದ್ದರು. ಮಣ್ಣಿನಡಿ ಸಿಲುಕಿದ್ದ ಇನ್ನೊಬ್ಬ ಕಾರ್ಮಿಕನನ್ನು ರಕ್ಷಿಸಲಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಯೊಬ್ಬರು ಹೇಳಿದರು.

'ಜೆಸಿಬಿ ಯಂತ್ರದಿಂದ ಪಾಯ ಅಗೆಯಲಾಗುತ್ತಿತ್ತು. ರಂಜನ್ ಹಾಗೂ ಇತರೆ ಕಾರ್ಮಿಕರು, ಪಾಯವನ್ನು ಸಮತಟ್ಟಾಗಿ ಮಾಡಿ ಮಣ್ಣು ತೆಗೆಯುತ್ತಿದ್ದರು. ಮಧ್ಯಾಹ್ನ 2.30ರ ಸುಮಾರಿಗೆ ಕೆಲಸದ ಸಂದರ್ಭದಲ್ಲಿ ಪಕ್ಕದ ಕಟ್ಟಡಕ್ಕೆ ಜೆಸಿಬಿ ಯಂತ್ರದ ಬಕೆಟ್ ತಾಗಿತ್ತು. ಇದರಿಂದಾಗಿ ಜೆಸಿಬಿ ಯಂತ್ರ ಅಲುಗಾಡಿತ್ತು. ಅದರ ಒತ್ತಡಕ್ಕೆ ಪಾಯದ ಅಕ್ಕ– ಪಕ್ಕದಲ್ಲಿದ್ದ ಮಣ್ಣು ಕುಸಿದು, ಇಬ್ಬರು ಕಾರ್ಮಿಕರ ಮೇಲೆ ಬಿದ್ದಿತ್ತು.'

'ಸಹ ಕಾರ್ಮಿಕರು ಹಾಗೂ ಸ್ಥಳೀಯರು ರಕ್ಷಣೆಗೆ ಹೋಗಿದ್ದರು. ಪಾಯದ ಮಣ್ಣು ತೆಗೆದು ಒಬ್ಬ ಕಾರ್ಮಿಕರನ್ನು ರಕ್ಷಿಸಿದ್ದರು. ರಂಜನ್‌ಕುಮಾರ್ ಮಾತ್ರ ಮಣ್ಣಿನಡಿ ಸಿಲುಕಿ ಮೃತಪಟ್ಟಿದ್ದರು' ಎಂದು ತಿಳಿಸಿದರು.

'ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿರಲಿಲ್ಲ. ನಿವೇಶನ ಮಾಲೀಕ, ಕಟ್ಟಡ ನಿರ್ಮಾಣ ಗುತ್ತಿಗೆದಾರ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಚಾರಣಕ್ಕೆ ಬಂದಿದ್ದ ಯುವಕ ನಾಪತ್ತೆ

ಮಾಗಡಿ: ತಾಲ್ಲೂಕಿನ ಸಾವನದುರ್ಗ ಬೆಟ್ಟಕ್ಕೆ ಭಾನುವಾರ ಚಾರಣಕ್ಕೆ ಬಂದಿದ್ದ ಬೆಂಗಳೂರಿನ ಉದ್ಯೋಗಿಯೊಬ್ಬರು ಕಾಣೆಯಾಗಿದ್ದಾರೆ.

ಗಗನ್

ಉತ್ತರ ಪ್ರದೇಶದ ಗಗನ್ (30) ಕಾಣೆಯಾದ ಯುವಕ. ಕಚೇರಿಗೆ ರಜೆ ಹಿನ್ನೆಲೆಯಲ್ಲಿ ಸ್ನೇಹಿತನ ಜೊತೆ ಸಾವನದುರ್ಗ ಬೆಟ್ಟಕ್ಕೆ ಚಾರಣ ಬಂದಿದ್ದ. ಮಧ್ಯಾಹ್ನ 3ಕ್ಕೆ ಸ್ನೇಹಿತನೊಂದಿಗೆ ಬೆಟ್ಟ ಏರಿದ್ದ ಯುವಕ ಇದ್ದಕ್ಕಿದ್ದಂತೆಯೇ ಸಂಪರ್ಕ ಕಡಿದುಕೊಂಡಿದ್ದಾನೆ.

ಜೊತೆಗಿದ್ದ ಸ್ನೇಹಿತ ಪೊಲಿಸರಿಗೆ ಮಾಹಿತಿ ನೀಡಿದ್ದಾನೆ. ಯುವಕನ ಶೋಧ ಕಾರ್ಯಾಚರಣೆಯಲ್ಲಿ ತೊಡಗಿರುವ ಪೊಲಿಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಡ್ರೋನ್ ಸಹ ಬಳಸಿದ್ದಾರೆ. ಸೋಮವಾರ ಕತ್ತಲೆಯಾದ ಕಾರಣ ಕಾರ್ಯಾಚರಣೆ ಸ್ಥಗಿತಗೊಂಡಿದೆ. ಇನ್ನೂ ಯುವಕನ ಸುಳಿವು ಸಿಕ್ಕಿಲ್ಲ. ಮಂಗಳವಾರ ಮುಂಜಾನೆ ಮರಳಗೊಂಡಲ ಕಡೆಯ ಕಾಲುದಾರಿಯಿಂದ ಹುಡುಕಾಟ ಆರಂಭಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಷೇಮ ಕುಶಲ

ಜಿಮ್ ಸಂಕಲ್ಪಕ್ಕೆ ಮುನ್ನ...

ಹೊಸ ವರ್ಷ ಬಂತೆಂದರೆ ವ್ಯಾಯಾಮ ಶುರುಮಾಡುವ ಸಂಕಲ್ಪ ಮಾಡುವವರು ಹೆಚ್ಚು. ಸೀದಾ ಜಿಮ್‌ಗೆ ಹೋಗುವ ಮೊದಲು ಒಂದಿಷ್ಟು ಸಿದ್ಧರಾಗುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು.

ಚಿರಂಜೀವಿ

ರಾತ್ರಿ 3.30ರ ಹೊತ್ತಿಗೆ ಮೊಬೈಲ್‌ಗೆ ಕರೆ ಬಂದೊಡನೆ ನಟ ರಣಬೀರ್ ಕಪೂರ್ ಧಿಗ್ಗನೆದ್ದು ಕೂರಬೇಕಿತ್ತು. ಪ್ರೊಟೀನ್ ಶೇಕ್ ಒಂದನ್ನು ಸೇವಿಸಿದರೆ, ಅಲ್ಲಿಂದ ಕೆಲವು ನಿಮಿಷಗಳ ನಂತರ ವರ್ಕ್‌ಔಟ್ ಶುರುಮಾಡಬೇಕೆನ್ನುವುದು ಅವರ ವ್ಯಾಯಾಮದ ಟೈಮ್ ಟೇಬಲ್‌ನ ಭಾಗವಾಗಿತ್ತು. 'ಸಂಜು' ಹಿಂದಿ ಸಿನಿಮಾಕ್ಕಾಗಿ ದೇಹಾಕಾರದಲ್ಲಿ ಅವರು ಮಾಡಿಕೊಂಡಿದ್ದ ಮಾರ್ಪಾಟಿಗೆ ಅನಿವಾರ್ಯವೆನಿಸಿದ್ದ ವ್ಯಾಯಾಮ ಅದು. ಅದು ಬಹುಸಂಖ್ಯಾತರಿಗೆ ಅಸಹಜ ಎನ್ನಿಸುವ ರೀತಿಯಲ್ಲಿ ಇತ್ತು. ಬೆಳಗಿನ ಜಾವಕ್ಕೂ ಮೊದಲು ಎದ್ದು, ಯಾರು ತಾನೆ ಪ್ರೊಟೀನ್ ಶೇಕ್ ಕುಡಿಯುತ್ತಾರೆ ಎಂದು ಬಹುತೇಕರು ಕೇಳಬಹುದು. ಆದರೆ, ಫಿಟ್‌ನೆಸ್ ತರಬೇತಿ ನೀಡುವ ಪರಿಣತರಿಗೆ ಯಾವ ದೇಹಾಕಾರವನ್ನು ಆರೋಗ್ಯಕರ ರೀತಿಯಲ್ಲಿ ಹೇಗೆ ರೂಪಿಸಬೇಕು ಎನ್ನುವುದು ಚೆನ್ನಾಗಿ ಗೊತ್ತಿರುತ್ತದೆ.

ಹೊಸ ವರ್ಷದ ಬೆಳಕಿಗೆ ಇದಿರಾಗಿ ನಿಲ್ಲುತ್ತಿರುವ ಅನೇಕ ಯುವಕ-ಯುವತಿಯರು ವ್ಯಾಯಾಮ-ಡಯೆಟ್‌ನ ಸಂಕಲ್ಪ ಮಾಡುವುದೀಗ ಸಾಮಾನ್ಯ. 'ಹೊಸ ವರ್ಷದ ರೆಸಲ್ಯೂಷನ್' ಎಂಬ ಹೆಸರಿನಲ್ಲಿ ನಡೆಯುವ ಈ ಸಂಕಲ್ಪವೇನೋ ಒಳ್ಳೆಯದೆ. ಆದರೆ, ಅನುಷ್ಠಾನಕ್ಕೆ ತರಲು ಹೊರಟಾಗ ಅನೇಕ ಎಡವಟ್ಟುಗಳು ಆಗುವ ಸಾಧ್ಯತೆ ಇರುತ್ತದೆ. ಅದು ಆಗದಂತೆ ಏನು ಮಾಡಬೇಕು, ಏನು ಮಾಡಬಾರದು ಎನ್ನುವುದು ತುಂಬಾ ಮುಖ್ಯ.

ಉದ್ದೇಶ ಸ್ಪಷ್ಟವಾಗಲಿ

ಜಿಮ್ ಸೇರುವ ಮೊದಲು ವ್ಯಾಯಾಮಕ್ಕೆ ಸಂಕಲ್ಪ ಮಾಡಿದವರ ಉದ್ದೇಶ ಸ್ಪಷ್ಟವಾಗಬೇಕು. ದೇಹತೂಕ ಇಳಿಸಲು/ಹೆಚ್ಚಿಸಲು, ದೇಹಾಕಾರ ಕಟೆಯಲು ಅಥವಾ ಹೃದಯದ ಆರೋಗ್ಯ ಚೆನ್ನಾಗಿ ಇರುವಂತೆ ನೋಡಿಕೊಳ್ಳಲು- ಈ ಪೈಕಿ ಯಾವ ಉದ್ದೇಶಕ್ಕೆ ಜಿಮ್‌ಗೆ ಸೇರುತ್ತಿರುವುದು ಎನ್ನುವುದನ್ನು ಪಕ್ಕಾ ಮಾಡಿಕೊಳ್ಳಬೇಕು.

ರಕ್ತದೊತ್ತಡದಲ್ಲಿ ಏರುಪೇರು ಇರುವವರು ಭಾರ ಎತ್ತಕೂಡದು ಎಂದೇ ವೈದ್ಯರು ಸೂಚಿಸುತ್ತಾರೆ ಅಥವಾ ಎಷ್ಟು ಕೆ.ಜಿ.ವರೆಗೆ ಭಾರವನ್ನು ಎತ್ತಬಹುದು ಎಂದು ಸಲಹೆ ಕೊಡುತ್ತಾರೆ. ಹೀಗಾಗಿ ಜಿಮ್‌ಗೆ ಸೇರುವ ಮೊದಲು ಸಂಪೂರ್ಣ ಆರೋಗ್ಯ ತಪಾಸಣೆಗೆ ಒಳಪಡಬೇಕು. ಫಿಸೀಷಿಯನ್ ಒಬ್ಬರಿಂದ ಏನೆಲ್ಲ ವ್ಯಾಯಾಮ ಮಾಡಬಹುದು ಎನ್ನುವ ಸಲಹೆ ಪಡೆದ ಮೇಲಷ್ಟೇ ಜಿಮ್‌ಗೆ ಪ್ರವೇಶ ಪಡೆಯುವುದು ಉತ್ತಮ.

ವ್ಯಾಯಾಮ ಶುರುಮಾಡಿದ ನಂತರ ಅದಕ್ಕೆ ತಕ್ಕಂತಹ ಪಥ್ಯಾಹಾರ ಸೇವಿಸುವುದು ಅನಿವಾರ್ಯ. ಎಷ್ಟೋ ಜನರು ಗೂಗಲ್ ಮಾಡಿಯೋ ಅಥವಾ ಯಾವುದೋ ವಿಡಿಯೊ ನೋಡಿಯೋ ಈ ವಿಷಯದಲ್ಲಿ ಸ್ವಯಂ ತೀರ್ಮಾನ ತೆಗೆದುಕೊಳ್ಳುವುದನ್ನು ನೋಡುತ್ತೇವೆ. ಹೀಗೆ ಮಾಡಕೂಡದು. ದಿನಕ್ಕೆ ಒಬ್ಬ ವ್ಯಕ್ತಿಯು ಇಂತಿಷ್ಟು ಮೊಟ್ಟೆಯ ಬಿಳಿಭಾಗ ಸೇವಿಸಬೇಕು ಎಂದು ಸಾಮಾನ್ಯೀಕರಿಸಿ ಹೇಳುವುದು ಸಾಧ್ಯವಿಲ್ಲ. ಅದು ಕೂಡ ವ್ಯಕ್ತಿಯಿಂದ ವ್ಯಕ್ತಿಗೆ, ಜೀರ್ಣಶಕ್ತಿಗೆ ತಕ್ಕಂತೆ ಬೇರೆಯೇ ಆಗಿರುತ್ತದೆ. ವ್ಯಾಯಾಮ ಯಾವ ರೀತಿಯಲ್ಲಿ ಮಾಡುತ್ತಿರುವಿರಿ ಎನ್ನುವುದನ್ನು ಆಧರಿಸಿ, ದೇಹಪ್ರಕೃತಿಗೆ ತಕ್ಕಂತಹ ಪಥ್ಯಾಹಾರವನ್ನು ಡಯಟೀಷಿಯನ್‌ಗಳು ಸೂಚಿಸುತ್ತಾರೆ.

ಖಾಲಿ ಹೊಟ್ಟೆಯಲ್ಲಿ ವ್ಯಾಯಾಮ: ಮಿಥ್ಯೆ

ಖಾಲಿ ಹೊಟ್ಟೆಯಲ್ಲಿ ವ್ಯಾಯಾಮ ಮಾಡಬೇಕು ಎನ್ನುವುದೇ ಅನೇಕರ ತಲೆಯಲ್ಲಿ ಇದೆ. ಡಯಟೀಷಿಯನ್‌ಗಳು ಇದನ್ನು ಒಪ್ಪುವುದಿಲ್ಲ. ವ್ಯಾಯಾಮ ಮಾಡುವ ಒಂದು ತಾಸಿನ ಮೊದಲು ಏನು ಸೇವನೆ ಮಾಡಬೇಕು ಎನ್ನುವುದರಿಂದ ಹಿಡಿದು ಮೂರೂ ಹೊತ್ತಿನ ಊಟ ಹಾಗೂ ನಡುವಿನ ಸ್ನ್ಯಾಕ್‌ಗಳು ಯಾವ ಸ್ವರೂಪದ್ದಾಗಿರಬೇಕು ಎಂದು ಚಾರ್ಟ್ ಕೊಡುತ್ತಾರೆ. ಇದು ಕೂಡ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ಒಂದು ವೇಳೆ ವಂಶಾವಳಿಯಲ್ಲಿ ಹಿಂದೆ ಹೃದ್ರೋಗಕ್ಕೆ ಒಳಗಾದವರು ಇದ್ದಲ್ಲಿ ಹೃದ್ರೋಗತಜ್ಞರನ್ನು ಭೇಟಿ ಮಾಡಬೇಕು. ಜಿಮ್‌ಗಳಲ್ಲಿ ಸೊಂಟದ ಮೇಲಿನ ಭಾಗದ ಸ್ನಾಯುಗಳಿಗೆ ಹೆಚ್ಚಾಗಿ ವ್ಯಾಯಾಮ ಮಾಡುತ್ತಾರೆ. ಕಾಲಿನ ಸ್ನಾಯುಗಳನ್ನು ಅಥ್ಲೀಟ್‌ಗಳು ಹುರಿಗೊಳಿಸುತ್ತಾರೆ. ಸ್ನಾಯುಗಳನ್ನು, ಮೂಳೆಗಳನ್ನು ಗಟ್ಟಿ ಮಾಡಿಕೊಳ್ಳುವ ವ್ಯಾಯಾಮ ಮಾಡುವುದರಿಂದ ರಕ್ತಪರಿಚಲನೆ ಉತ್ತಮವಾಗದು. ಅದಕ್ಕೆ ವಾಕಿಂಗ್, ಜಾಗಿಂಗ್ ಅಥವಾ ಟ್ರೆಡ್‌ಮಿಲ್ ಮಾಡುವುದು ತುಂಬಾ ಮುಖ್ಯ. ಇದನ್ನೂ ಹೃದ್ರೋಗ ತಜ್ಞರು ಸೂಚಿಸುತ್ತಾರೆ. 'ವೆರಿಕೋಸ್ ವೇಯ್ನ್' ಸಮಸ್ಯೆ ಇರುವವರಂತೂ ವಾಕಿಂಗ್ ಮಾಡುವ ವಿಷಯದಲ್ಲಿಯೂ ಪರಿಣತ ವೈದ್ಯರ ಸಲಹೆ ಪಡೆಯಬೇಕು.

ವ್ಯಾಯಾಮ ಮಾಡಬೇಕೆನ್ನುವ ಹೊಸ ವರ್ಷದ ಸಂಕಲ್ಪ ಒಳ್ಳೆಯದೇನೋ ಹೌದು. ಅದು ಆರಂಭಶೂರತ್ವ ಅಷ್ಟೇ ಆದರೆ ಇನ್ನಷ್ಟು ದೈಹಿಕ ಸಮಸ್ಯೆಗಳನ್ನು ಎದುರಿಸಬೇಕಾದೀತು.

ವರ್ಷಗಳ ಹಿಂದೆ ಆದ ಅಪಘಾತದಿಂದ ಹಳೆಯ ನೋವು ಇರುವವರು, ಕುತ್ತಿಗೆ-ಬೆನ್ನುನೋವನ್ನು ಆಗಾಗ ಅನುಭವಿಸುವವರು, ಬದುಕಿನುದ್ದಕ್ಕೂ ಎಂದೂ ಸರಳ ವ್ಯಾಯಾಮವನ್ನೂ ಮಾಡದವರು- ಹೀಗೆ ಯಾರೇ ಆದರೂ ಜಿಮ್‌ಗೆ ಕಾಲಿಡುವ ಮುನ್ನ ವೈದ್ಯಕೀಯ ತಪಾಸಣೆಗೆ ಒಳಪಡಲೇಬೇಕು. ❖

ಏನಿದು ಜೆಎನ್.1 ವೈರಸ್?

ಡಾ. ಶ್ರೀಕಾಂತ್ ಎನ್. ಹೆಗಡೆ

ಕಳೆದ ನಾಲ್ಕು ವರ್ಷಗಳಿಂದ ಪ್ರತಿ ಡಿಸೆಂಬರ್‌ನಲ್ಲಿ ಕೊರೊನಾ ವೈರಸ್‌ನ ಹೊಸ ತಳಿಗಳು ಆತಂಕವನ್ನು ಸೃಷ್ಟಿಸಿವೆ. ಆರ್‌ಎನ್‌ಎ ವೈರಾಣು ಗುಂಪಿಗೆ ಸೇರಿದ ಕೊರೊನಾ ವೈರಸ್ ರೂಪಾಂತರಗೊಳ್ಳುವುದು ಅದರ ಉಳಿವಿಗಿರುವ ಸಹಜವಾದ ಪ್ರಕ್ರಿಯೆ. ಲಸಿಕೆಗಳಿಂದ ಬರುವ ಪ್ರತಿರೋಧಕ ಶಕ್ತಿಯಿಂದ ತಪ್ಪಿಸಿಕೊಳ್ಳಲು ವೈರಾಣುವಿಗೆ ಇರುವ ಒಂದು ಮಾರ್ಗವೆಂದರೆ ರೂಪಾಂತರಗೊಳ್ಳುವುದು (Mutation). 2020ರ ಡಿಸೆಂಬರ್‌ನಲ್ಲಿ ಕೊರೊನಾ ರೂಪಾಂತರಿ ಡೆಲ್ಟಾ, 2021ರ ಅಂತ್ಯದಲ್ಲಿ ಒಮೈಕ್ರಾನ್, 2022ರಲ್ಲಿ ರೂಪಾಂತರಗೊಂಡ ಒಮೈಕ್ರಾನ್ ಈಗ ಬಹುಚರ್ಚಿತ ರೂಪಾಂತರಿ ಜೆಎನ್.1. ಹೀಗೆ ಅದು ನಿರಂತರವಾಗಿ ರೂಪಾಂತರಗೊಳ್ಳುತ್ತಿರುತ್ತದೆ.

ಡೆಲ್ಟಾ ಮತ್ತು ಒಮೈಕ್ರಾನ್ ತಳಿಗಳು ದೊಡ್ಡ ಪ್ರಮಾಣದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯನ್ನು ಹೆಚ್ಚಿಸಿತ್ತು. ಅದರಲ್ಲೂ ಒಮೈಕ್ರಾನ್ ಅತಿ ವೇಗವಾಗಿ ಹರಡಿ ಹೊಸ ಅಲೆಗೆ ಕಾರಣವಾದರೂ ಸೋಂಕಿನ ತೀವ್ರತೆ ಕಡಿಮೆ ಇತ್ತು. ಅದಾಗಲೇ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ ಹೆಚ್ಚು ಇದ್ದುದರಿಂದ ಹಾಗೂ ಹಿಂದಿನ ಸೋಂಕುಗಳಿಂದಾಗಿ ಜನರಲ್ಲಿ ಉಂಟಾದ ಪ್ರತಿರೋಧ ಶಕ್ತಿಯ ಹೆಚ್ಚಳದಿಂದ ತೊಂದರೆಯ ಪ್ರಮಾಣ ಕಡಿಮೆಯಾಗಿತ್ತು. ಇದೇ ಒಮೈಕ್ರಾನ್ ತಳಿ ಹಲವು ರೂಪಾಂತರಗಳ ಬಳಿಕ ಜೆಎನ್.1 ವೈರಸ್ ಆಗಿ ನಮ್ಮ ಮುಂದಿದೆ. ಆಗಸ್ಟ್‌ನಲ್ಲಿ ಮೊದಲ ಬಾರಿ ಕಾಣಿಸಿಕೊಂಡ ಈ ತಳಿ ಅಮೆರಿಕ, ಸಿಂಗಪುರ ಹಾಗೂ ಕೆಲವು ಐರೋಪ್ಯ ದೇಶಗಳು, ಭಾರತವೂ ಸೇರಿ 40ಕ್ಕೂ ಹೆಚ್ಚಿನ ದೇಶಗಳಲ್ಲಿ ಕೋವಿಡ್ ಪ್ರಕರಣಗಳಿಗೆ ಕಾರಣವಾಗಿದೆ. ಹೆಚ್ಚು ಕಡಿಮೆ ಕೊರೊನಾದ ಬಗ್ಗೆ ಮರೆತೇ ಹೋಗಿದ್ದ ಸಂದರ್ಭದಲ್ಲಿ ಜೆಎನ್.1 ವೈರಸ್ ಬಗ್ಗೆ ಆತಂಕವಿರುವುದು ಸಹಜ. ಆದರೆ, ಜೆಎನ್.1 ತಳಿಯಿಂದ ದೊಡ್ಡ ಮಟ್ಟದ ತೊಂದರೆ ಇಲ್ಲ ಎಂದು ಲಭ್ಯವಿರುವ ಮಾಹಿತಿ ಹೇಳುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ (WHO) ಇದನ್ನು ಗಮನ ಹರಿಸಬೇಕಾದ ತಳಿ (Variant of Interest) ಎಂದು ಗುರುತಿಸಿದ್ದು, ಜಾಗತಿಕ ಪಿಡುಗಾಗುವ ಸಾಧ್ಯತೆ ಕಡಿಮೆ ಎಂದು ಹೇಳಿದೆ. ಆದರೆ ಈ ರೂಪಾಂತರಿ ವೈರಾಣು ಹೆಚ್ಚು ಬೇಗ ಹರಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಲಕ್ಷಣಗಳೇನು?

ಶೀತ , ಜ್ವರ , ತಲೆನೋವು , ಮೂಗು ಕಟ್ಟುವುದು , ಕೆಮ್ಮು , ಕಫ ಮತ್ತು ವಾಸನೆ ಗೊತ್ತಾಗದಿರುವುದು ಇವು ಸಾಮಾನ್ಯ ಜೆಎನ್.1 ಲಕ್ಷಣಗಳು. ಕೆಲವರಲ್ಲಿ ಶ್ವಾಸಕೋಶದ ಉರಿಯೂತ ಅಥವಾ ನ್ಯುಮೋನಿಯಾ, ರಕ್ತದ ಆಕ್ಸಿಜನ್ ಪ್ರಮಾಣ ಕಡಿಮೆ ಆಗುವ ಸಾಧ್ಯತೆಯೂ ಇದೆ. ಈ ರೂಪಾಂತರಿ ಜೆಎನ್.1 ತೀವ್ರತರದ ಕೋವಿಡ್ ಉಂಟು ಮಾಡುವ ಸಾಧ್ಯತೆ ಕಡಿಮೆ ಎಂದು ಸಿಂಗಪುರ ಹಾಗೂ ಬೆಲ್ಜಿಯಂ ದೇಶಗಳಲ್ಲಿ ನಡೆದ ಸಂಶೋಧನೆಗಳು ಈಗಾಗಲೇ ಹೇಳಿವೆ.

ಯಾರೆಲ್ಲ ಎಚ್ಚರಿಕೆ ವಹಿಸಬೇಕು?

ಹಿರಿಯ ವಯಸ್ಕರು, ಮಧುಮೇಹಿಗಳು, ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವವರು, ಅಂಗಾಂಗ ಕಸಿ ಪಡೆದವರಲ್ಲಿ ಸೋಂಕು ತೀವ್ರವಾಗುವ ಸಾಧ್ಯತೆ ಇರುವುದರಿಂದ ಇಂಥವರು ಹೆಚ್ಚಿನ ಮುಂಜಾಗ್ರತೆ ವಹಿಸುವುದು ಒಳಿತು. ಜನದಟ್ಟಣೆ ಹೆಚ್ಚಿರುವ ಕಡೆಗಳಲ್ಲಿ, ಆಸ್ಪತ್ರೆಗೆ ಭೇಟಿ ನೀಡುವಾಗ ಮಾಸ್ಕ್ ಧರಿಸುವುದು ಉತ್ತಮ.

ಲಸಿಕೆಯನ್ನೇ ತೆಗೆದುಕೊಳ್ಳದ ವಯಸ್ಕರಲ್ಲಿ ಹಿಂದೆ ಕೊರೊನಾ ಸೋಂಕು ಆಗಿದ್ದರೆ ಅದರಿಂದಲೂ ಪ್ರತಿರೋಧಕ ಶಕ್ತಿ ಬಂದಿರುತ್ತದೆ. ಸೋಂಕು ಬಾರದೇ, ಲಸಿಕೆಯೂ ತೆಗೆದುಕೊಳ್ಳದೇ ಇದ್ದವರಲ್ಲಿ ಸೋಂಕು ಉಂಟಾಗುವ ಸಾಧ್ಯತೆ ಹೆಚ್ಚು. ಈ ವೈರಾಣುವಿನಿಂದಾಗುವ ಕೋವಿಡ್‌ನ ತೀವ್ರತೆ ದೇಹದ ಇತರೆ ಆರೋಗ್ಯ ಸಮಸ್ಯೆಗಳನ್ನು ಅವಲಂಬಿಸಿದೆ. ಮೇಲೆ ವಿವರಿಸಿದ ಕೆಲವು ತೊಂದರೆ ಇರುವವರಲ್ಲಿ ತೀವ್ರ ಕಾಯಿಲೆಯೂ ಉಂಟಾಗಬಹುದು. ಚಳಿಗಾಲದಲ್ಲಿ ಫ್ಲೂ ಜ್ವರ, ವೈರಾಣು ಸೋಂಕಿನಿಂದ ಶೀತ, ಜ್ವರ ಹರಡುವುದೆಲ್ಲ ಸಾಮಾನ್ಯ. ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿದರೆ ಕೊರೊನಾ ಅಲ್ಲದೆ ಫ್ಲೂ ತರಹದ ಉಸಿರಾಟದ ಮೂಲಕ ಹರಡುವ ಜ್ವರಗಳಿಂದಲೂ ರಕ್ಷಣೆ ಸಿಗುತ್ತದೆ.

ಮಕ್ಕಳಲ್ಲಿ ಸೌಮ್ಯ ಕಾಯಿಲೆ

ಲಸಿಕೆ ಹಾಕಿಸಿಕೊಳ್ಳದ ಶಿಶು ಹಾಗೂ ಮಕ್ಕಳಲ್ಲಿ ಎಲ್ಲ ಬಗೆಯ ಕೊರೊನಾ ವೈರಸ್‌ಗಳು ಬಹಳ ಸೌಮ್ಯವಾದ ಕಾಯಿಲೆಯನ್ನು ಉಂಟು ಮಾಡಿರುವುದನ್ನು ನೋಡಿದ್ದೇವೆ. ಇವರಿಗೆ ತೀವ್ರತರದ ಕೋವಿಡ್ ಸಾಧ್ಯತೆ ವಿರಳವೆಂದೇ ಹೇಳಬಹುದು. ಹಾಗೆಯೇ ಜೆಎನ್.1 ಕೂಡ ಮಕ್ಕಳಿಗೆ ಹೆಚ್ಚಿನ ತೊಂದರೆ ಉಂಟುಮಾಡಿಲ್ಲ. ಕೊನೆಯದಾಗಿ ಕೊರೊನಾ ವೈರಸ್ ಅನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಆದರೆ, ಇದು ಪ್ಯಾಂಡೆಮಿಕ್ ಆಗದೇ ಎಂಡೆಮಿಕ್ ಆಗಿ ಉಳಿಯುತ್ತದೆ. ಕೆಲವು ಋತುಗಳಲ್ಲಿ ಫ್ಲೂ ಜ್ವರದಂತೆಯೇ (seasonal) ಬಂದು, ಆರೋಗ್ಯದಲ್ಲಿ ತುಸು ಏರಿಳಿತವನ್ನು ಉಂಟು ಮಾಡುತ್ತದೆ. ಇನ್ನು ಈಗ ಬಂದಿರುವ ಜೆಎನ್.1 ತಳಿಯ ಬಗ್ಗೆ ಆತಂಕಿತರಾಗದೇ ಜಾಗ್ರತೆ ವಹಿಸುವುದು ಮುಖ್ಯ. ❖

ರೂಪಾಂತರಿ ವೈರಾಣುಗಳ ಕುರಿತು...

ಆರ್‌ಎನ್‌ಎ (Ribo nucleic acid) ವೈರಾಣು ಗುಂಪಿಗೆ ಕೊರೊನಾ ವೈರಸ್ ಸೇರಿದೆ. ಆರ್‌ಎನ್‌ಎ ವೈರಸ್ ಎಂದರೆ ಇವು ತಮ್ಮ ವಂಶವಾಹಿಯ ತುಣುಕಾಗಿ ಆರ್‌ಎನ್‌ಎ ಅನ್ನು ಹೊಂದಿರುತ್ತದೆ. ಇದೇ ರೀತಿ ಕೆಲವು ವೈರಾಣುಗಳು ತಮ್ಮ ವಂಶವಾಹಿಯ ತುಣುಕಾಗಿ ಡಿಎನ್‌ಎ (Deoxy Ribo nucleic acid) ಪಡೆದಿರುತ್ತದೆ. ಡಿಎನ್‌ಎ ವೈರಾಣುವಿಗೆ ಹೋಲಿಸಿದರೆ ಆರ್‌ಎನ್‌ಎ ವೈರಾಣುಗಳು ಹೆಚ್ಚಿನ ಸಂಖ್ಯೆಯಲ್ಲಿ ರೂಪಾಂತರಗೊಳ್ಳುತ್ತವೆ. ವೈರಸ್‌ನಲ್ಲಿ ಆಗುವ ಮ್ಯುಟೇಷನ್ (Mutation) ವೈರಸ್‌ಗಳು ಹೆಚ್ಚು ಬೇಗ ಹರಡಲು ಅಥವಾ ಪ್ರತಿರೋಧಕಗಳಿಂದ ತಪ್ಪಿಸಲು ಸಾಧ್ಯವಾಗುವಂತೆ ಮಾಡುತ್ತವೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ: 2 ತ್ರಿಭುಜ

3) ಚಿತ್ರ 2.18ರಲ್ಲಿ LM‖CB ಮತ್ತು LN‖CD ಆದರೆ $\frac{AM}{AB}=\frac{AN}{AD}$ ಎಂದು ಸಾಧಿಸಿ.



ಪರಿಹಾರ:– ಮೇಲಿನ ಚಿತ್ರದಲ್ಲಿರುವಂತೆ, **LM || CB,**
ಮೂಲ ಸಮಾನುಪಾತತೆಯ ಪ್ರಮೇಯದಂತೆ

$\frac{AM}{AB}=\frac{AL}{AC}$ .....(1)

ಅದರಂತೆ **LN || CD**
ಮೂಲ ಸಮಾನುಪಾತತೆಯ ಪ್ರಮೇಯದಂತೆ

$\therefore \frac{AN}{AD}=\frac{AL}{AC}$ .....(2)

ಇಲ್ಲಿ ಸಮೀಕರಣ 1 ಮತ್ತು 2 ರಿಂದ

$\frac{AM}{AB}=\frac{AN}{AD}$

4) ಚಿತ್ರ 2.19ರಲ್ಲಿ DE‖AC ಮತ್ತು DF‖AE ಆದರೆ $\frac{BF}{FE}=\frac{BE}{EC}$ ಎಂದು ಸಾಧಿಸಿ

ಪರಿಹಾರ:– : **ΔABC** ದಲ್ಲಿ **DE || AC**
ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ
∴

$\frac{BD}{DA}=\frac{BE}{EC}$ .....(1)

ΔBAE ದಲ್ಲಿ **DF || AE**
ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\frac{BD}{DA}=\frac{BF}{FE}$ .....(2)

ಸಮೀಕರಣ 1 ಮತ್ತು 2 ರಿಂದ,

$\frac{BF}{FE}=\frac{BE}{EC}$ ಸಾಧಿಸಿದೆ

5) ಚಿತ್ರ 2.20 ಯಲ್ಲಿ DE‖OQ ಮತ್ತು DF‖OR ಆದರೆ EF‖QR ಎಂದು ಸಾಧಿಸಿ..



ಪರಿಹಾರ:–
ΔPQO ದಲ್ಲಿ, **DE || OQ**
ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\frac{PD}{DO}=\frac{PE}{EQ}$ .....(1)

ΔPORದಲ್ಲಿ, **DF || OR,**
5) ಚಿತ್ರ 2.20 ಯಲ್ಲಿ DE‖OQ ಮತ್ತು DF‖OR ಆದರೆ EF‖QR ಎಂದು ಸಾಧಿಸಿ..



ಪರಿಹಾರ:–
ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\frac{PD}{DO}=\frac{PF}{FR}$ .....(2)

ಸಮೀಕರಣ 1 ಮತ್ತು 2 ರಿಂದ,

$\frac{PE}{EQ}=\frac{PF}{FR}$ .....(2)

ಆದ್ದರಿಂದ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ
EF || QR,.

6) ಚಿತ್ರ 2.21ರಲ್ಲಿ AB‖PQ ಮತ್ತು AC‖PR ಆಗುವಂತೆ A, B ಮತ್ತು C ಗಳು ಕ್ರಮವಾಗಿ OP, OQ ಮತ್ತು ORಗಳ ಚಿತ್ರ 2.20ಮೇಲಿನ ಬಿಂದುಗಳು. ಆದರೆ BC‖QR ಎಂದು ತೋರಿಸಿ

ಪರಿಹಾರ:– **ΔOPQ** ದಲ್ಲಿ, **AB || PQ** (ದತ್ತ)
ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\frac{QA}{AP}=\frac{OB}{BQ}$ .....(1)

ΔOPRದಲ್ಲಿ, **AC || PR**
ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\therefore \frac{QA}{AP}=\frac{OC}{CR}$ .....(2)

ಸಮೀಕರಣ 1 ಮತ್ತು 2 ರಿಂದ,

$\frac{OB}{BQ}=\frac{OC}{CR}$

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ
ΔOQR, ದಲ್ಲಿ, **BC || QR.**

II PUC PHYSICS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Chapter – 1

ELECTRIC CHARGES AND FIELDS

(.....Contd)

4. Electric field intensity due to an infinitely long straight uniformly charged wire at a distance *r* from the wire varies as

a) r b) r^{-1}
c) r^2 d) r^{-2}

5. Electric field intensity due to uniformly charged thin infinite non-conducting plane sheet of surface charge density σ at a distance *r* is

a) $\frac{\sigma}{\epsilon_0}$ b) $\frac{\sigma}{2\epsilon_0}$
c) $\frac{\sigma}{2r}$ d) $\frac{\sigma}{2\epsilon_0 r}$

6. Which of the following graphs represent the variation of electric field intensity E(*r*) due to a charged spherical shell of radius R with distance *r* from its centre?



7. Which of the following graphs represent the variation of electric field intensity E(*r*) due to a charged solid sphere of radius R with distance *r* from its centre.



Answers:- 4(b); 5. (b); 6.(c); 7. (d)

TWO MARK QUESTIONS

1. Calculate the total charge enclosed by a closed surface if the number of electric lines of force entering it is 10,000 and leaving is 20,000.

Ans:- Net flux leaving the surface,

$\phi = 20{,}000 - 10{,}000 = 10{,}000 = 10^4$

$\phi = \frac{q}{\epsilon_0}$

$\therefore q = \epsilon_0 \phi = 8.85 \times 10^{-12} \times 10^4$

ಕೊರೊನಾ ಸೋಂಕಿತರಲ್ಲಿ ಮೂವರ ಸಾವು • ಸಂಪುಟ ಉಪ ಸಮಿತಿ ಸಭೆ ಇಂದು

ಜೆಎನ್.1: ರಾಜ್ಯದಲ್ಲಿ 34 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ವೈರಾಣುವಿನ ಹೊಸ ಉಪ ತಳಿ ಜೆಎನ್.1ನ ಸೋಂಕು ರಾಜ್ಯದ 34 ಜನರಿಗೆ ತಗಲಿರುವುದು ದೃಢಪಟ್ಟಿದ್ದು, ಅವರಲ್ಲಿ ಮೂವರು ಮೃತಪಟ್ಟಿದ್ದಾರೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ 21, ಮೈಸೂರಿನಲ್ಲಿ ನಾಲ್ಕು, ಮಂಡ್ಯದಲ್ಲಿ ಮೂರು ಹಾಗೂ ರಾಮನಗರ, ಬೆಂಗಳೂರು ಗ್ರಾಮಾಂತರ, ಕೊಡಗು, ಚಾಮರಾಜನಗರ, ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಲಾ ಒಂದು ಜೆಎನ್. 1 ಉಪ ತಳಿಯ ಪ್ರಕರಣಗಳು ಪತ್ತೆಯಾಗಿವೆ' ಎಂದರು.

ಬೆಂಗಳೂರು ನಗರ, ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜೆಎನ್.1 ಉಪ ತಳಿಯ ಕೋವಿಡ್ ವೈರಾಣುವಿನ ಸೋಂಕು ತಗುಲಿದ್ದ ತಲಾ ಒಬ್ಬರು ಮೃತಪಟ್ಟಿದ್ದಾರೆ. ಅವರೆಲ್ಲರೂ ಗಂಭೀರ ಸ್ವರೂಪದ ಇತರ ಕಾಯಿಲೆಗಳಿಂದ ಬಳಲುತ್ತಿದ್ದರು ಎಂದು ತಿಳಿಸಿದರು.

ಜೆಎನ್.1 ಉಪ ತಳಿಯ ಸೋಂಕಿನ ಶಂಕೆಯ ಮೇಲೆ 192 ಜನರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ಪರೀಕ್ಷೆಗೆ ಕಳುಹಿಸಲಾಗಿತ್ತು. ಈವರೆಗೆ 60 ಮಾದರಿಗಳ ವರದಿಗಳು ಬಂದಿವೆ. ಅವುಗಳಲ್ಲಿ 34 ಜನರಲ್ಲಿ ಜೆಎನ್.1 ಉಪ ತಳಿಯ ವೈರಾಣು ಸೋಂಕು ಪತ್ತೆಯಾಗಿದೆ ಎಂದು ವಿವರಿಸಿದರು.

ಹೊಸ ಉಪ ತಳಿಯ ಸೋಂಕಿನ ಪ್ರಕರಣಗಳು ಪತ್ತೆಯಾಗಿರುವು ದರಿಂದ ಜನರು ಆತಂಕಪಡಬೇಕಾಗಿಲ್ಲ. ಆರೋಗ್ಯ ಇಲಾಖೆಯು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ತೀವ್ರ ಉಸಿರಾಟದ ತೊಂದರೆ ಇರುವವರು ಮತ್ತು ವಿಷಮಶೀತ ಜ್ವರ ಇರುವವರಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ನಡೆಸಲಾಗುವುದು. ಶನಿವಾರದ ವೇಳೆಗೆ ಪ್ರತಿ ದಿನ 5,000 ಮಾದರಿಗಳ ಪರೀಕ್ಷೆ ಮಾಡಲಾಗುವುದು ಎಂದರು.

ವೆಂಟಿಲೇಟರ್‌ಗಳ ನಿರ್ವಹಣೆಗೆ ನೆರವು ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಪೋರ್ಟಲ್‌ನಲ್ಲಿ ಕೋವಿಡ್ ಪ್ರಕರಣಗಳ ಮಾಹಿತಿ ಸಮರ್ಪಕವಾಗಿ ಲಭ್ಯವಾಗು ತ್ತಿಲ್ಲ. ಅದನ್ನೂ ಸರಿಪಡಿಸುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸಂಪುಟ ಉಪ ಸಮಿತಿ ಸಭೆ: ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಗಾಗಿ ರಚಿಸಿರುವ ಸಂಪುಟ ಉಪ ಸಮಿತಿ ಸಭೆ ಮಂಗಳವಾರ ನಡೆಯಲಿದೆ. ಜೆಎನ್.1 ಉಪ ತಳಿಯ ವೈರಾಣು ಸೋಂಕಿನ ಕುರಿತು ಚರ್ಚಿಸಿ ಅಗತ್ಯ ನಿರ್ಧಾರಗಳನ್ನು ಕೈಗೊಳ್ಳಲಾಗುವುದು ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಹೊಸ ವರ್ಷಾಚರಣೆ, ಸಭೆ, ಸಮಾರಂಭಗಳಿಗೆ ನಿರ್ಬಂಧ ಹೇರುವ ಪ್ರಸ್ತಾವವಿಲ್ಲ. ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ತಾಂತ್ರಿಕ ಸಮಿತಿಯ ಸಲಹೆ ಪಡೆದು ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಕ್ರಿಯ ಪ್ರಕರಣ 436ಕ್ಕೆ ಏರಿಕೆ

ರಾಜ್ಯದಲ್ಲಿ ಕೋವಿಡ್ ಸೋಂಕಿನ 125 ಪ್ರಕರಣಗಳು ಸೋಮವಾರ ದೃಢಪಟ್ಟಿದ್ದು, ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 436ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

400 ಮಂದಿ ಮನೆ ಆರೈಕೆಯಲ್ಲಿದ್ದಾರೆ. 36 ಜನರು ಆಸ್ಪತ್ರೆಗಳಿಗೆ ದಾಖಲಾಗಿದ್ದು, ಅವರಲ್ಲಿ ಏಳು ಮಂದಿ ತೀವ್ರ ನಿಗಾ ಘಟಕಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

24 ಗಂಟೆಗಳ ಅವಧಿಯಲ್ಲಿ 3,155 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಕೋವಿಡ್ ದೃಢ ಪ್ರಮಾಣ ದರ ಶೇಕಡ 3.96 ರಷ್ಟಿದೆ.

ಬೆಂಗಳೂರು ನಗರದಲ್ಲಿ 94 ಹೊಸ ಪ್ರಕರಣಗಳು ದೃಢಪಟ್ಟವೆ. ಮೈಸೂರಿನಲ್ಲಿ 13, ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿ ತಲಾ ಐದು, ಶಿವಮೊಗ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ತಲಾ ಎರಡು, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಗಳಲ್ಲಿ ತಲಾ ಒಂದು ಹೊಸ ಪ್ರಕರಣಗಳು ಪತ್ತೆಯಾಗಿವೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಉಪ ತಳಿಯ 63 ಪ್ರಕರಣ ದಾಖಲು

ನವದೆಹಲಿ(ಪಿಟಿಐ): ಕೊರೊನಾ ವೈರಸ್‌ನ ಹೊಸ ಉಪತಳಿ ಜೆಎನ್.1ರ ಒಟ್ಟು 63 ಪ್ರಕರಣಗಳು ಭಾನುವಾರದವರೆಗೆ ವರದಿಯಾಗಿವೆ ಎಂದು ಮೂಲಗಳು ತಿಳಿಸಿವೆ.

ಗೋವಾದಲ್ಲಿ ದಾಖಲಾದ 34, ಮಹಾರಾಷ್ಟ್ರದಲ್ಲಿ 9, ಕೇರಳದಲ್ಲಿ 6, ತಮಿಳುನಾಡಿನಲ್ಲಿ 4 ಮತ್ತು ತೆಲಂಗಾಣದಲ್ಲಿ 2 ಪ್ರಕರಣಗಳು ವರದಿಯಾಗಿವೆ.

ಆಸ್ಪತ್ರೆಗೆ ದಾಖಲಾಗುವ ಪ್ರಮಾಣದಲ್ಲಿ ಯಾವುದೇ ಏರಿಕೆಯಾಗಿಲ್ಲ. ಇತರ ವೈದ್ಯಕೀಯ ಕಾರಣಗಳಿಗೆ ಆಸ್ಪತ್ರೆಗೆ ದಾಖಲಾದವರಲ್ಲಿ ಕೋವಿಡ್-19 ಪ್ರಾಸಂಗಿಕವಾಗಿ ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಲ್ಲಿ ಒಂದೇ ದಿನ ಕೋವಿಡ್‌ನ 628 ಹೊಸ ಪ್ರಕರಣಗಳು ದಾಖಲಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 4,054ಕ್ಕೆ ಏರಿದೆ. ಕಳೆದ 24 ತಾಸುಗಳ ಅವಧಿಯಲ್ಲಿ ಕೇರಳದಲ್ಲಿ ಕೋವಿಡ್‌ನಿಂದ ಒಬ್ಬರು ಮೃತಪಟ್ಟರುವ ಬಗ್ಗೆ ವರದಿಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

3 ತಿಂಗಳಲ್ಲಿ ಅಡೆತಡೆ ತೆರವು: ಸಚಿವ

₹17 ಸಾವಿರ ಕೋಟಿ ವೆಚ್ಚದ ಕಾಮಗಾರಿ ಸ್ಥಗಿತ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ₹17 ಸಾವಿರ ಕೋಟಿ ವೆಚ್ಚದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ವಿವಿಧ ಕಾರಣಗಳಿಂದ ಸ್ಥಗಿತಗೊಂಡಿವೆ. ಮೂರು ತಿಂಗಳಲ್ಲಿ ಎಲ್ಲ ಅಡೆತಡೆ ನಿವಾರಿಸಿ, ಹೆದ್ದಾರಿ ನಿರ್ಮಾಣಕ್ಕೆ ಅನುವು ಮಾಡಿಕೊಡ ಲಾಗುವುದು. ಈ ಬಗ್ಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೂ ಮನವಿ ಮಾಡಲಾಗಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಗೋವಾದಲ್ಲಿ ಭಾನುವಾರ ನಿತಿನ್ ಗಡ್ಕರಿ ಅವರೊಂದಿಗೆ ಚರ್ಚಿಸಿದ್ದೇನೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಯೋಚಿಸಬೇಕು, ಇಲ್ಲದಿದ್ದರೆ ಯೋಜನೆ ಸ್ಥಗಿತವಾಗುತ್ತದೆ ಎಂದು ಸಚಿವರು ಎಚ್ಚರಿಸಿದ್ದಾರೆ. ಮೂರು ತಿಂಗಳ ಕಾಲಾವಕಾಶ ಕೇಳಿದ್ದೇನೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಶೀಘ್ರ ಚರ್ಚಿಸುತ್ತೇನೆ' ಎಂದು ಅವರು ಸೋಮವಾರ ಪತ್ರಿಕಾ-ಗೋಷ್ಠಿಯಲ್ಲಿ ತಿಳಿಸಿದರು.

'12 ವರ್ಷಗಳ ಹಿಂದೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ರಾಜ್ಯಕ್ಕೆ ₹17 ಸಾವಿರ ಕೋಟಿ ಬಂದಿದೆ. ಈವರೆಗೆ ₹8,000 ಕೋಟಿ ಖರ್ಚಾಗಿದೆ. ಅರಣ್ಯ ಒತ್ತುವರಿ, ಭೂ ಸಮಸ್ಯೆ, ಗ್ರಾಮಗಳ ಸ್ಥಳಾಂತರ ಸೇರಿ ಇನ್ನಿತರ ಕಾರಣಗಳಿಂದ 15 ಕಡೆ ಕಾಮಗಾರಿ ಸ್ಥಗಿತವಾಗಿದೆ' ಎಂದರು.

'ವಿಜಯಪುರ- ಹುಬ್ಬಳ್ಳಿ ಮಾರ್ಗದ ರಸ್ತೆ ಕೇವಲ ಶೇ 1ರಷ್ಟು ಮಾತ್ರ ಬಾಕಿ ಇದೆ. ಗೋವಾ ಗಡಿಯಿಂದ ಕರ್ನಾಟಕದ ಕುಂದಾಪುರದವರೆಗೆ ರಸ್ತೆ ಮಾಡಲು ಅರಣ್ಯ ಇಲಾಖೆಯ ತಕರಾರುಗಳಿವೆ. ಇದೇ ರೀತಿ ಆರು ಕಡೆ ಅರಣ್ಯ ಇಲಾಖೆಯಿಂದ ತಡೆ ಬಿದ್ದಿದೆ. ಹೆದ್ದಾರಿ ಪ್ರಾಧಿಕಾರದಲ್ಲಿ ಹಣದ ಕೊರತೆ ಇಲ್ಲ. ಅದನ್ನು ನಾವು ಸಮರ್ಪಕವಾಗಿ ಬಳಸಿ-ಕೊಳ್ಳುತ್ತೇವೆ' ಎಂದರು.

ಖರ್ಗೆ- ಧನಕರ್ 'ಪತ್ರ ಸಮರ' ತೀವ್ರ

ಒಂದನೇ ಪುಟದಿಂದ...

'ಸದನದಲ್ಲಿ ಹೇಳಿಕೆ ನೀಡಲು ಬಯಸದ ಗೃಹ ಸಚಿವರನ್ನು ಮತ್ತು ಸರ್ಕಾರದ ಧೋರಣೆಯನ್ನು ಸಭಾಪತಿಯವರು ಕ್ಷಮಿಸಿರುವುದು ವಿಷಾದನೀಯ. ಸದನದ ಕಲಾಪ ನಡೆಯುತ್ತಿರುವ ವೇಳೆಯೇ ಗೃಹ ಸಚಿವರು ಈ ಘಟನೆಯ ಕುರಿತು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು. ಈ ರೀತಿ ಪ್ರಜಾ ಪ್ರಭುತ್ವದ ಮಂದಿರ ಅಪವಿತ್ರಗೊಂಡದ್ದು ಸಭಾಪತಿಯ ಗಮನಕ್ಕೆ ಬಾರದೇ ಇರುವುದು ಇನ್ನಷ್ಟು ವಿಷಾದಕರ ಸಂಗತಿ' ಎಂದಿದ್ದಾರೆ.

'ಲೋಕಸಭೆ ಮತ್ತು ರಾಜ್ಯಸಭೆ ಸಂಸದರ ಅಮಾನತು ಪ್ರಕ್ರಿಯೆಯು ಪೂರ್ವಯೋಜಿತ ಎಂದು ಮುನ್ನ ವಿರೋಧ ಪಕ್ಷಗಳ ಹೆಚ್ಚಿನ ಸಂಖ್ಯೆಯ ಸಂಸದರನ್ನು ಅಮಾನತುಗೊಳಿಸಲಾಗುವುದು ಎಂದು ರಾಜ್ಯಸಭೆಯ ಸಭಾನಾಯಕ ಪೀಯೂಷ್ ಗೋಯಲ್ ಹೇಳಿದ್ದಾಗಿ ಟಿಎಂಸಿಯ ಸಂಸದರೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಇದು ನಿಜವೇ ಆಗಿದ್ದಲ್ಲಿ, ಸಭಾಪತಿಯವರು ಈ ಬಗ್ಗೆ ತನಿಖೆ ನಡೆಸಬೇಕೆಂದು ಬಯಸುತ್ತೇವೆ ಎಂದಿದ್ದಾರೆ.

'ಜವಾಬ್ದಾರಿ ನಿಭಾಯಿಸುವೆ'

ಸವಾಲುಗಳ ಅರಿವಿದೆ: ಕೋಟ ಶ್ರೀನಿವಾಸ ಪೂಜಾರಿ

ಪ್ರಜಾವಾಣಿ ವಾರ್ತೆ

ಉಡುಪಿ: 'ಪಕ್ಷ ನೀಡಿರುವ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ. ಸೈದ್ಧಾಂತಿಕ ವಿಚಾರಗಳಡಿ ಸಂಘಟನಾತ್ಮಕ ಹೋರಾಟಕ್ಕೆ ಒತ್ತು ನೀಡುವುತ್ತೇವೆ' ಎಂದು ಕೋಟ ಶ್ರೀನಿವಾಸ ಪೂಜಾರಿ ಪ್ರತಿಕ್ರಿಯಿಸಿದರು.

ಸೋಮವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಸರ್ಕಾರದಲ್ಲಿಯ ಗೊಂದಲಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ. ಆಡಳಿತ ಪಕ್ಷದ ವೈಫಲ್ಯಗಳನ್ನು ಜನರ ಬಳಿಗೆ ಕೊಂಡೊಯ್ಯತ್ತೇವೆ. ಬಡವರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಯ ಪರ ಹೋರಾಟಗಳಿಗೆ ಒತ್ತು ನೀಡಲಾಗುವುದು' ಎಂದರು.

'ವಿಧಾನ ಪರಿಷತ್ ನಾಯಕನ ಜವಾಬ್ದಾರಿಯ ಹಿಂದಿರುವ ಸವಾಲುಗಳ ಅರಿವಿದೆ. ಮೂರು ಬಾರಿ ಸಚಿವನಾಗಿ, ಎರಡು ಬಾರಿ ವಿಪಕ್ಷ ನಾಯಕನಾಗಿ ಕೆಲಸ ಮಾಡಿದ ಅನುಭವ ಇದೆ. ಆರ್.ಅಶೋಕ ಹಾಗೂ ವಿಜಯೇಂದ್ರ ಜೊತೆಗೂಡಿ ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಲಾಗುವುದು' ಎಂದು ವಿಶ್ವಾಸ ವ್ಯಕ್ತ-ಪಡಿಸಿದರು.

'ಲೋಕಸಭಾ ಚುನಾವಣೆಯ ಗೆಲುವು ಮುಂದಿನ ಗುರಿಯಾಗಿದ್ದು ಎಲ್ಲರನ್ನೂ ಒಳಗೊಂಡು ಪಕ್ಷ ಸಂಘಟನೆಗೆ ಒತ್ತು ನೀಡಲಾಗುವುದು' ಎಂದು ತಿಳಿಸಿದರು.

ಮೃದುವಾದ ಸೇನೆ

ಒಂದನೇ ಪುಟದಿಂದ..

ಇದೊಂದು ಗಂಭೀರ ಅಪರಾಧ ಎಂದು ಭಾರತೀಯ ದಂಡ ಸಂಹಿತೆಯ 302ನೇ ಸೆಕ್ಷನ್ ಅಡಿಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ, ಆರೋಪಿಗಳ ವಿವರಗಳು 'ತಿಳಿದಿಲ್ಲ' ಎಂದು ನಮೂದಿಸಲಾಗಿದೆ.

ಸೇನೆಗೆ ನೆರವಾಗುತ್ತಿದ್ದ ಸಮುದಾಯ: ಯೋಧರಿಂದ ಜನರು ಹೊಡೆತ ತಿನ್ನುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಈಗಾಗಲೇ ಹರಿದಾಡಿದೆ. ಈ ವಿಡಿಯೊದಲ್ಲಿ ತಾವು ಇದ್ದೇವೆ ಎಂದು ಗ್ರಾಮದ ಸರಪಂಚ ಮತ್ತು ಮೃತರ ಇಬ್ಬರು ಸಂಬಂಧಿಕರು ಹೇಳಿದ್ದಾರೆ. ಸೇನೆಯು ವಶಕ್ಕೆ ಪಡೆದ 13 ಜನರ ಪೈಕಿ 10 ಜನರು ಗಾಯಗೊಂಡಿದ್ದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೇನೆಯು ವಶಕ್ಕೆ ಪಡೆದ ಎಲ್ಲ 13 ಮಂದಿ ಗುಜ್ಜರ್ ಮತ್ತು ಬೇಕರ್‌ವಾಲ್ ಬುಡಕಟ್ಟುಸಮುದಾಯಕ್ಕೆಸೇರಿದವರು. ಭಯೋತ್ಪಾದನೆ ನಿಗ್ರಹಕ್ಕಾಗಿ ಸೇನೆಯು ನಡೆಸುವ ಕಾರ್ಯಾಚರಣೆಗಳಿಗೆ ಈ ಸಮುದಾಯಗಳು ಸದಾ ನೆರವು ನೀಡುತ್ತಲೇ ಬಂದಿವೆ.

ಶ್ರೀನಿವಾಸ ಪೂಜಾರಿ ಮೇಲ್ಮನೆ ವಿಪಕ್ಷ ನಾಯಕ

ಒಂದನೇ ಪುಟದಿಂದ...

ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕರನ್ನಾಗಿ ಅರವಿಂದ್ ಬೆಲ್ಲದ ಮತ್ತು ಮುಖ್ಯ ಸಚೇತಕ ರನ್ನಾಗಿ ದೊಡ್ಡನಗೌಡ ಜಿ.ಪಾಟೀಲ ಅವರನ್ನು ನೇಮಕ ಮಾಡಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಈ ಬಾರಿ ಹಲವು ಹೆಸರುಗಳು ಮುನ್ನಲೆಗೆ ಬಂದಿದ್ದವು. ರಘುನಾಥ ರಾವ್ ಮಲ್ಕಾಪುರೆ, ಛಲವಾದಿ ನಾರಾಯಣಸ್ವಾಮಿ, ಎನ್. ರವಿಕುಮಾರ್ ಅವರ ಹೆಸರು ಪ್ರಮುಖ ವಾಗಿದ್ದವು. ಕರಾವಳಿ ಪ್ರದೇಶ ಮತ್ತು ಬಿಲ್ಲವ ಸಮುದಾಯ ಈ ಎರಡೂ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪೂಜಾರಿ ಅವರಿಗೆ ಅವಕಾಶ ನೀಡುವ ತೀರ್ಮಾನ ಮಾಡಲಾಗಿದೆ.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದ ಎನ್. ರವಿಕುಮಾರ್ ಅವರನ್ನು ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ. ಇವರು ಹಿಂದುಳಿದ ವರ್ಗದ ಕೋಲಿ (ಗಂಗಾಮತ) ಸಮುದಾಯಕ್ಕೆ ಸೇರಿದವರು.

ಅರವಿಂದ ಬೆಲ್ಲದ

ದೊಡ್ಡನಗೌಡ ಪಾಟೀಲ

ಸುನಿಲ್ ವಲ್ಯಾಪುರೆ

ರವಿಕುಮಾರ್

ಸಚಿವರ ಹೇಳಿಕೆಗೆ ರಾಜ್ಯದಾದ್ಯಂತ ತೀವ್ರ ಖಂಡನೆ, ಪ್ರತಿಭಟನೆ; ಕ್ಷಮೆಯಾಚನೆಗೆ ಪಟ್ಟು

ಶಿವಾನಂದ ಪಾಟೀಲ ವಿರುದ್ಧ ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ರೈತರು ಬರ ಬರಲಿ ಎಂದು ಬಯಸುತ್ತಾರೆ' ಎಂಬ ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿಕೆಯನ್ನು ಖಂಡಿಸಿ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಹಾಗೂ ಬೆಳೆಗಾರರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಬಿ. ರಾಚಯ್ಯ ಜೋಡಿ ರಸ್ತೆಯ ಲ್ಲಿರುವ ಜಿಲ್ಲಾಡಳಿತ ಭವನದ ಗೇಟ್ ಬಳಿ ಸೇರಿದ ಅವರು, ಸಚಿವರ ವಿರುದ್ಧ ಘೋಷಣೆ ಕೂಗಿದರು. ಅವರ ಭಾವಚಿತ್ರವನ್ನು ಹರಿದು ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಮೈಸೂರು-ಚಾಮರಾಜ ನಗರ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತ ನಾಡಿ, 'ಸಚಿವರ ಹೇಳಿಕೆ ಅತ್ಯಂತ ಖಂಡನೀಯ. ಮಾನಸಿಕ ಸ್ಥಿಮಿತತೆ ಕಳೆದುಕೊಂಡು ಮಾತನಾಡಿದ್ದಾರೆ' ಎಂದರು.

'ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪನಿಗಳವರ ಸಾಲ ಮನ್ನಾ ಮಾಡಿದಾಗ ಇವರು ಎಲ್ಲಿಗೆ ಹೋಗಿದ್ದರು' ಎಂದು ಪ್ರಶ್ನಿಸಿದರು.

ಅವಹೇಳನ ಸರಿಯಲ್ಲ

ಚಿಕ್ಕಮಗಳೂರು: 'ಬರಗಾಲ ಬರಲಿ ಎಂದು ರೈತರು ಕಾಯುತ್ತಾರೆ ಎಂದು ಶಿವಾನಂದ ಪಾಟೀಲ ಅವರು ಹೇಳಿದ್ದಾರೆ. ಹಿಂದೆ ಕೂಡ ರೈತರ ಆತ್ಮಹತ್ಯೆ ಬಗ್ಗೆ ಹಗುರವಾಗಿ ಮಾತನಾಡಿದ್ದರು. ರೈತರ ಬಗ್ಗೆ ಅವಹೇಳನ ಸರಿಯಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇದೊಂದು ಕೆಟ್ಟ ಸರ್ಕಾರ, ರೈತ ವಿರೋಧ ಸರ್ಕಾರ ಎಂಬುದಕ್ಕೆ ಇದು ಉದಾಹರಣೆ. ಸರ್ಕಾರಕ್ಕೆ ನಾಚಿಕೆಯಾಗಬೇಕು, ರೈತರನ್ನು ಕಡೆಗಣಿಸಿದರೆ ಅವರ ಶಾಪಕ್ಕೆ ಸರ್ಕಾರ ಗುರಿಯಾಗಲಿದೆ' ಎಂದರು.

ಸಚಿವ ಶಿವಾನಂದ ಪಾಟೀಲ ಹೇಳಿಕೆ ಖಂಡಿಸಿ ಮೈಸೂರು-ಚಾಮರಾಜನಗರದ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಚಾಮರಾಜನಗರದಲ್ಲಿ ಸೋಮವಾರ ಪ್ರತಿಭಟಿಸಿದರು

'ರೈತರನ್ನು ಎತ್ತಿಕಟ್ಟುತ್ತಿರುವ ಬಿಜೆಪಿ'

ಒಂದನೇ ಪುಟದಿಂದ...

ಇಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಹೇಳಿಕೆ ತಿರುಚಲಾಗಿದೆ. ಇಡೀ ಭಾಷಣದ ಸಾರಾಂಶ ಬಿಟ್ಟು ವಿರೋಧ ಪಕ್ಷದವರು ಕೇವಲ ಒಂದು ವಿಡಿಯೊ ತುಣುಕು ಇಟ್ಟುಕೊಂಡು ರೈತರನ್ನು ಎತ್ತಿಕಟ್ಟುವ ಪ್ರಯತ್ನ ನಡೆಸಿದ್ದಾರೆ' ಎಂದು ಹರಿಹಾಯ್ದರು.

'ಕಾಂಗ್ರೆಸ್ ರೈತರ ಪರವಾಗಿದ್ದು ಸಾಕಷ್ಟು ಯೋಜ

ಸುಭಾಷಿತ

ಆತ್ಮವಿಶ್ವಾಸ ಎಂಬುದು ಜನ್ಮಜಾತವಾಗಿ ಬರುವುದಿಲ್ಲ. ಅದನ್ನು ಅನುಭವದಿಂದ ಕಲಿಯಬೇಕು ಮತ್ತು ಗಳಿಸಬೇಕು.
-ಗೌತಮ ಬುದ್ಧ

ದೂರಸಂಪರ್ಕ ಮಸೂದೆ ಸರ್ಕಾರಕ್ಕೆ ನಿರಂಕುಶ ಅಧಿಕಾರ

ದೂರಸಂಪರ್ಕ ಮಸೂದೆ- 2023 ಅನ್ನು ಸಂಸತ್ತು ಅಂಗೀಕರಿಸಿದೆ. ದೂರಸಂಪರ್ಕ ಕ್ಷೇತ್ರವನ್ನು ನಿಯಂತ್ರಿಸುತ್ತಿರುವ 138 ವರ್ಷಗಳಷ್ಟು ಹಳೆಯದಾದ ಟೆಲಿಗ್ರಾಫ್ ಕಾಯ್ದೆ ಬದಲಿಗೆ ಈ ಮಸೂದೆಯನ್ನು ರೂಪಿಸಲಾಗಿದೆ. ಈಗ ಇರುವ ಪ್ರಕ್ರಿಯೆಗಳು ಮತ್ತು ನಿಯಮಗಳಿಗೆ ಸುಧಾರಣೆ ತಂದು ಅವನ್ನು ಪರಿಷ್ಕರಿಸುವುದು ಹೊಸ ಮಸೂದೆಯ ಉದ್ದೇಶ ಎಂದು ಘೋಷಿಸಲಾಗಿದೆ. ಹೊಸ ಮಸೂದೆಯ ಪರಿಣಾಮವಾಗಿ ಭಾರತೀಯ ವೈರ್‌ಲೆಸ್ ಟೆಲಿಗ್ರಾಫಿ ಕಾಯ್ದೆ-1933 ಮತ್ತು ಟೆಲಿಗ್ರಾಫ್ ವೈರ್ಸ್ (ಅಕ್ರಮವಾಗಿ ಸ್ವಾಧೀನದಲ್ಲಿ ಇರಿಸಿಕೊಳ್ಳುವಿಕೆ) ಕಾಯ್ದೆ-1950 ಕೂಡ ಬದಲಾಗಲಿವೆ. ಹಳೆಯ ಕಾನೂನುಗಳು ಈಗಿನ ಆಧುನಿಕ ಯುಗದಲ್ಲಿ ಅಸಮರ್ಪಕ ಮತ್ತು ಅವು ವಸಾಹತುಶಾಹಿ ಆಳ್ವಿಕೆ ಮತ್ತು ನಿಯಂತ್ರಣದ ದೃಷ್ಟಿಯಿಂದ ರೂಪುಗೊಂಡ ಕಾಯ್ದೆಗಳಾಗಿವೆ. ಸಂವಹನ ಕ್ಷೇತ್ರದಲ್ಲಿ ಈಚಿನ ವರ್ಷಗಳಲ್ಲಿ ಆಗಿರುವ ಪಲ್ಲಟ ಅಗಾಧವಾದುದು. ಹಾಗಿದ್ದರೂ ಹಳೆಯ ಕಾಯ್ದೆಗಳ ಸಮಗ್ರ ಮರು ಪರಿಶೀಲನೆಗೆ ಇಷ್ಟೆಲ್ಲ ವರ್ಷಗಳು ಬೇಕಾದವು ಎಂಬುದೇ ಅಚ್ಚರಿಯ ಸಂಗತಿ. ಹತ್ತಾರು ವ್ಯವಸ್ಥೆಗಳನ್ನು ಹೊಂದಿರುವ ಅತ್ಯಂತ ಸಂಕೀರ್ಣವಾದ ಸಂವಹನ ಕ್ಷೇತ್ರದ ಅಧಿಕಾರಿಶಾಹಿ ಕಾರ್ಯವಿಧಾನ ಮತ್ತು ಪ್ರಕ್ರಿಯೆಗಳನ್ನು ಸರಳಗೊಳಿಸುವುದು ಹೊಸ ಮಸೂದೆಯ ಉದ್ದೇಶ. ಹೊಸ ಮಸೂದೆಯು ಜಾರಿಯಾದರೆ ಪರವಾನಗಿ ನೀಡಿಕೆ ಪ್ರಕ್ರಿಯೆಯು ಡಿಜಿಟಲೀಕರಣಗೊಳ್ಳಲಿದೆ. ಪರವಾನಗಿ ಮತ್ತು ವಿವಾದ ಪರಿಹಾರ ವ್ಯವಸ್ಥೆಗಳು ವಿಕೇಂದ್ರೀಕರಣಗೊಳ್ಳುವುದರಿಂದ ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಅನುಕೂಲ ಆಗಲಿದೆ.

ಸುಧಾರಣೆ ಮತ್ತು ಪರಿಷ್ಕರಣೆಗಳ ನಡುವೆ ಗಂಭೀರವಾದ ನಕಾರಾತ್ಮಕ ಅಂಶಗಳು ಸಹ ಮಸೂದೆಯಲ್ಲಿ ಇವೆ

ಈಗ ಇರುವ ತ್ರಾಸದಾಯಕವಾದ ಪರವಾನಗಿ ವ್ಯವಸ್ಥೆಯನ್ನು ಈ ಮಸೂದೆಯು ಕೊನೆಗೊಳಿಸಲಿದೆ. ದೂರಸಂಪರ್ಕ ಎಂಬುದು ಅಂತರರಾಷ್ಟ್ರೀಯ ನಂಟು ಹೊಂದಿರುವ ಕ್ಷೇತ್ರವಾಗಿದೆ. ಹಾಗಾಗಿ, ಈ ಮಸೂದೆಯಲ್ಲಿ ಅಂತರರಾಷ್ಟ್ರೀಯವಾಗಿ ಅನುಸರಿಸಲಾಗುವ ಕೆಲವು ಪದ್ಧತಿಗಳನ್ನು ಅನುಸರಿಸಲಾಗಿದೆ. ಉಪಗ್ರಹ ಅಂತರ್ಜಾಲ ಕ್ಷೇತ್ರದಲ್ಲಿ ಇರುವವರು ತರಂಗಾಂತರಕ್ಕೆ ಬಿಡ್ ಸಲ್ಲಿಸಬೇಕಾದ ಅಗತ್ಯ ಇಲ್ಲ ಎಂದು ಮಸೂದೆಯು ಹೇಳುತ್ತದೆ. ಏಕೆಂದರೆ ಬಿಡ್ ಸಲ್ಲಿಕೆಯ ಮೂಲಕ ತರಂಗಾಂತರ ಪಡೆದುಕೊಂಡರೆ ಒಟ್ಟು ಸೇವೆಯ ವೆಚ್ಚ ಏರಿಕೆಯಾಗುತ್ತದೆ. ಕಾನೂನು ಬಾಹಿರವಾಗಿ ದೂರವಾಣಿ ಕದ್ದಾಲಿಕೆ ಮತ್ತು ಅನಧಿಕೃತ ಹ್ಯಾಕಿಂಗ್‌ಗೆ ದಂಡ ಮತ್ತು ಸಜೆ ವಿಧಿಸುವ ಅವಕಾಶವನ್ನೂ ಮಸೂದೆಯಲ್ಲಿ ಸೇರಿಸಲಾಗಿದೆ. ಸಿಮ್ ಕಾರ್ಡ್ ನೀಡುವುದಕ್ಕೆ ಬಯೊಮೆಟ್ರಿಕ್ ಪ್ರಮಾಣೀಕರಣ ಕುರಿತ ಪ್ರಸ್ತಾಪವೂ ಇದೆ. ಇದರಿಂದಾಗಿ ಬೇರೆಯವರ ಹೆಸರಿನಲ್ಲಿ ಸಿಮ್ ಕಾರ್ಡ್ ಪಡೆದು ವಂಚನೆ ನಡೆಸುವುದು ಮತ್ತು ಇದೇ ರೀತಿಯ ಇತರ ಅಪರಾಧಗಳನ್ನು ತಪ್ಪಿಸಬಹುದಾಗಿದೆ. ಈ ಎಲ್ಲ ಸುಧಾರಣೆ ಮತ್ತು ಪರಿಷ್ಕರಣೆಗಳ ನಡುವೆ ಗಂಭೀರವಾದ ನಕಾರಾತ್ಮಕ ಅಂಶಗಳೂ ಮಸೂದೆಯಲ್ಲಿ ಇವೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಖಾಸಗಿತನ ಮತ್ತು ಸ್ವಾಯತ್ತೆಯು ಬಹಳ ಮುಖ್ಯವಾದುದಾಗಿದೆ. ಆದರೆ, ಈ ಕ್ಷೇತ್ರದ ನಿಯಂತ್ರಣ ಮತ್ತು ನಿರ್ವಹಣೆಗೆ ಸರ್ಕಾರಕ್ಕೆ ನಿರಂಕುಶ ಅಧಿಕಾರವನ್ನು ನೀಡಲಾಗಿದೆ. ಮಸೂದೆಯಲ್ಲಿ ಇರುವ ಕೆಲವು ವ್ಯಾಖ್ಯೆಗಳು ಎಷ್ಟು ಸ್ಥೂಲವಾಗಿವೆ ಎಂದರೆ, ಯಾವುದೇ ರೀತಿಯ ಸಂವಹನವನ್ನು ಸರ್ಕಾರವು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದಾಗಿದೆ. ಹಲವು ಸೇವೆಗಳನ್ನು ಮಸೂದೆಯ ವ್ಯಾಪ್ತಿಗೆ ತರಲಾಗಿದೆ. ವ್ಯಕ್ತಿಗಳು ಮತ್ತು ಸಂಘಟನೆಗಳ ಖಾಸಗಿತನದ ಮೇಲೆ ನಿಗಾ ಇರಿಸುವ ಮತ್ತು ಹಸ್ತಕ್ಷೇಪ ನಡೆಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಡಲಾಗಿದೆ.

'ದೇಶದ ಸುರಕ್ಷತೆ' ಮತ್ತು 'ಸಾರ್ವಜನಿಕ ಸುವ್ಯವಸ್ಥೆ'ಯ ಕಾರಣಗಳನ್ನು ಕೊಟ್ಟು ಯಾವುದೇ ಇಬ್ಬರು ವ್ಯಕ್ತಿಗಳ ನಡುವಣ ಸಂವಹನವನ್ನು ಸರ್ಕಾರವು ತಡೆಯಬಹುದು. 'ದೇಶದ ಸುರಕ್ಷತೆ' ಮತ್ತು 'ಸಾರ್ವಜನಿಕ ಸುವ್ಯವಸ್ಥೆ' ಎಂಬುದನ್ನು ಸರ್ಕಾರವು ತನ್ನ ಇಷ್ಟಕ್ಕೆ ಬೇಕಾದಂತೆ ವ್ಯಾಖ್ಯಾನಿಸುವುದಕ್ಕೆ ಸದಾ ಅವಕಾಶ ಇದೆ. ಜನರ ದೂರವಾಣಿ ಮಾತುಕತೆಗಳನ್ನು ಆಲಿಸಲು ಸರ್ಕಾರದ ಸಂಸ್ಥೆಗಳಿಗೆ ಅನುಮತಿ ನೀಡುವ ಪ್ರಸ್ತಾವವು ಮಸೂದೆಯಲ್ಲಿ ಇದೆ. ಸಾರ್ವಜನಿಕ ತುರ್ತು ಸಂದರ್ಭದಲ್ಲಿ ದೂರಸಂಪರ್ಕ ಸೇವೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕೂಡ ಅವಕಾಶ ಸೃಷ್ಟಿಸಲಾಗಿದೆ. ಬಳಕೆದಾರರ ಅನುಕೂಲಕ್ಕಾಗಿ ಸೇರಿಸಿಕೊಳ್ಳಲಾಗಿದೆ ಎಂದು ಹೇಳಲಾಗಿರುವ ಹಲವು ಅವಕಾಶಗಳನ್ನು ಬಳಕೆದಾರರ ವಿರುದ್ಧವೇ ದುರ್ಬಳಕೆ ಮಾಡಿಕೊಳ್ಳಬಹುದಾಗಿದೆ. ಕಾಯ್ದೆಗಳ ಸುಧಾರಣೆ ಮತ್ತು ಸರಳೀಕರಣವನ್ನು ಉದ್ಯಮದ ಸಂಘಟನೆಗಳು ಸ್ವಾಗತಿಸಿವೆ. ಆದರೆ, ಮಸೂದೆಯಲ್ಲಿ ಪ್ರಸ್ತಾಪಿಸಿರುವ ನಿಯಂತ್ರಣ ವ್ಯವಸ್ಥೆಗಳು ಉದ್ಯಮವನ್ನೂ ಬಾಧಿಸಲಿವೆ. ಆದರೆ, ಈಗಿನ ರಾಜಕೀಯ ಸನ್ನಿವೇಶದಲ್ಲಿ ಈ ವಿಚಾರವನ್ನು ಉದ್ಯಮದ ವ್ಯಕ್ತಿಗಳು ಬಹಿರಂಗವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ವಿರೋಧ ಪಕ್ಷದ ಬಹುಪಾಲು ಸದಸ್ಯರು ಅಮಾನತಾಗಿ ಸಂಸತ್ತಿನಲ್ಲಿ ಉಪಸ್ಥಿತರಿಲ್ಲದ ಸಂದರ್ಭದಲ್ಲಿಯೇ ಈ ಮಸೂದೆಯನ್ನು ತರಾತುರಿಯಲ್ಲಿ ಅನುಮೋದಿಸಲಾಗಿದೆ ಎಂಬುದೇ ಸರ್ಕಾರದ ಉದ್ದೇಶ ಏನು ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಹಾಗೆಯೇ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಿತಿಗೂ ಇದು ಕನ್ನಡಿ ಹಿಡಿಯುತ್ತದೆ.

ಹೊಸ ಚಿಂತನೆ ಅರಳುವುದಕ್ಕೆ ಪೂರಕವಾದ, ಉದ್ಯಮಶೀಲತೆಯನ್ನು ಬೆಳೆಸಬಲ್ಲ ಪರಿಸರ ಬೇಕು

ಭಾರತದ ಆರ್ಥಿಕತೆ: ವಿಭಿನ್ನ ನೋಟ

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಭಾರತದ ಆರ್ಥಿಕತೆ ಎತ್ತ ಸಾಗಿದೆ? ಕೆಲವರ ದೃಷ್ಟಿಯಲ್ಲಿ ಅದರ ಚಲನೆ ಅದ್ಭುತವಾಗಿ ಇದೆ. ಇನ್ನು ಕೆಲವರ ದೃಷ್ಟಿಯಲ್ಲಿ ಏನೂ ಸರಿಯಿಲ್ಲ. ಆದರೆ ಎಲ್ಲರೂ ಒಪ್ಪಿಕೊಳ್ಳಬಹುದಾದ ಒಂದು ಸತ್ಯವೆಂದರೆ, ನಮ್ಮ ದೇಶದ ಭವಿಷ್ಯದ ಬಗ್ಗೆ ನಮಗೊಂದು ಚೆಂದದ ಕನಸಿರಬೇಕು, ಗುರಿಯ ಬಗ್ಗೆ ಒಂದು ಸ್ಪಷ್ಟ ಕಲ್ಪನೆ ಇರಬೇಕು.

ಆರ್‌ಬಿಐ ಮಾಜಿ ಗವರ್ನರ್ ರಘುರಾಂ ರಾಜನ್ ಅವರಿಗೂ ಭಾರತದ ಆರ್ಥಿಕತೆಯ ಬಗ್ಗೆ ಒಂದು ಕನಸಿದೆ. ಅದನ್ನು ಸಾಕಾರಗೊಳಿಸುವುದಕ್ಕೆ ಅವರದೇ ಆದ ಆಲೋಚನೆಯೂ ಇದೆ. ಇದನ್ನು ಹಲವು ವರ್ಷಗಳಿಂದ ವಿವಿಧ ವೇದಿಕೆಗಳಲ್ಲಿ ಅವರು ಹೇಳುತ್ತಲೇ ಬಂದಿದ್ದಾರೆ. ಈಗ ರೋಹಿತ್ ಲಂಬಾ ಅವರೊಂದಿಗೆ ಕೂಡಿಕೊಂಡು 'ಬ್ರೇಕಿಂಗ್ ದಿ ಮೌಲ್ಡ್- ರಿಇಮ್ಯಾಜಿನಿಂಗ್ ಇಂಡಿಯಾಸ್ ಎಕನಾಮಿಕ್ ಫ್ಯೂಚರ್' ಅಂತ ಒಂದು ಪುಸ್ತಕವನ್ನೇ ಬರೆದಿದ್ದಾರೆ.

ನಮ್ಮಲ್ಲಿ ಒಳ್ಳೆಯ ಕೆಲಸಗಳಾಗಿವೆ. ಬೇರೆ ಎಷ್ಟೋ ದೇಶಗಳಿಗೆ ಹೋಲಿಸಿದರೆ ಬೆಳವಣಿಗೆ ಆಗಿದೆ. ಇಂಗ್ಲೆಂಡನ್ನು ಹಿಂದಿಕ್ಕಿದ್ದೇವೆ. ಆದರೆ ಸಾಧಿಸುವುದಕ್ಕೆ ಇನ್ನೂ ತುಂಬಾ ಇದೆ. ಉದಾಹರಣೆಗೆ, ನಮ್ಮಲ್ಲಿ ಹೆಚ್ಚಿನ ಯುವಕರಿಗೆ ಉದ್ಯೋಗ ಇಲ್ಲ. ಸಿಗುವ ಭರವಸೆಯೂ ಇಲ್ಲ. ಇನ್ನು ಮಹಿಳೆಯರಂತೂ ಐದು ಜನರಲ್ಲಿ ಒಬ್ಬರು ದುಡಿಯುತ್ತಿದ್ದಾರೆ. ಜಿ20 ದೇಶಗಳಲ್ಲೇ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಹಿಳಾ ಕಾರ್ಮಿಕರಿರುವ ದೇಶ ನಮ್ಮದು.

ಸಮಸ್ಯೆ ಇನ್ನಷ್ಟು ತೀವ್ರವಾಗಬಹುದು. ಜಾಗತಿಕ ಆರ್ಥಿಕತೆ ಸಂಕಟದಲ್ಲಿದೆ. ಕೆಲಸಗಳು ಯಾಂತ್ರೀಕರಣ ಗೊಳ್ಳುತ್ತಿವೆ. ಇನ್ನಷ್ಟು ಜನ ನಿರುದ್ಯೋಗಿಗಳಾಗಬಹುದು. ನಮ್ಮಲ್ಲಿ 140 ಕೋಟಿ ಜನರಿದ್ದೇವೆ. ಅದು ನಮ್ಮ ಶಕ್ತಿ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗಬೇಕು. ಅಂದರೆ ಹೆಚ್ಚಿಚ್ಚು ಉದ್ಯೋಗ ಸೃಷ್ಟಿಯಾಗಬೇಕು.

ಇದಕ್ಕೊಂದು ಪರಿಹಾರ ಬೇಕಿದೆ. ಉತ್ತರಕ್ಕಾಗಿ, ಆರ್ಥಿಕತೆ ಕ್ರಮಿಸಿದ ಹಾದಿಯತ್ತ ರಾಜನ್ ಚಿಕಿತ್ಸಕ ನೋಟ ಬೀರಿದ್ದಾರೆ. 1960- 70ರಲ್ಲಿ ವಸ್ತುಗಳ ಸಾಗಣೆ ವೆಚ್ಚ ತುಂಬಾ ಕಡಿಮೆಯಾಯಿತು. ಅಗ್ಗವಾಗಿ ಎಲ್ಲಿ ಉತ್ಪಾದಿಸಲು ಸಾಧ್ಯವೋ ಅಲ್ಲಿ ಉತ್ಪಾದಿಸಿ, ಅಲ್ಲಿಂದ ಬೇರೆಡೆಗೆ ಸಾಗಿಸುವುದು ಲಾಭದಾಯಕವಾಗಿತ್ತು. ಅಮೆರಿಕಕ್ಕೋ ಯುರೋಪಿಗೋ ಹೋಲಿಸಿದರೆ ಚೀನಾದಲ್ಲಿ ಉತ್ಪಾದನಾ ವೆಚ್ಚ ತುಂಬಾ ಅಗ್ಗವಾಗಿತ್ತು. ರೇಡಿಯೊ, ಟಿ.ವಿ. ಬಿಡಿಭಾಗಗಳನ್ನು ಜೋಡಿಸುವ ಕೆಲಸಕ್ಕೆ ಹೆಚ್ಚಿನ ನೈಪುಣ್ಯವೂ ಬೇಕಿರಲಿಲ್ಲ. ಬಹುರಾಷ್ಟ್ರೀಯ ಕಂಪನಿಗಳು ಚೀನಾದಲ್ಲಿ ಫ್ಯಾಕ್ಟರಿಗಳನ್ನು ಸ್ಥಾಪಿಸಿ, ರೇಡಿಯೊ, ಟಿ.ವಿ.ಗಳನ್ನು ಅಲ್ಲೇ ಜೋಡಿಸಿ, ಬೇರೆ ದೇಶಗಳಿಗೆ ಮಾರಿ ಲಾಭ ಮಾಡಿಕೊಂಡವು. ಚೀನಾದಲ್ಲಿ ಉತ್ಪಾದನಾ ಚಟುವಟಿಕೆ ಹೆಚ್ಚಿತು. ಅದು ಶ್ರೀಮಂತವಾದಂತೆ, ಮೂಲ ಸೌಕರ್ಯ ಹೆಚ್ಚಿದಂತೆ ಕೆಲಸಗಾರರು ವಿದ್ಯಾವಂತರಾದರು. ಬಿಡಿಭಾಗಗಳನ್ನು ತಯಾರಿಸುವುದೂ ಅಗ್ಗವಾಯಿತು. ಹಾಗಾಗಿ, ಉತ್ಪಾದನೆ ಪ್ರಕ್ರಿಯೆಯು ಸಂಪೂರ್ಣವಾಗಿ ಚೀನಾಕ್ಕೆ ಸ್ಥಳಾಂತರವಾಯಿತು. ಜಪಾನ್, ಕೊರಿಯಾ, ತೈವಾನ್ ಕೂಡ ಇದೇ ಹಾದಿ ಹಿಡಿದು, ಪ್ರಗತಿ ಸಾಧಿಸಿದವು.

ಈಗ ಭಾರತ ಈ ದಾರಿಯಲ್ಲಿ ಸಾಗಬೇಕೆಂದು ಕೊಂಡಿದೆ. ಆದರೆ ಅದು ಸುಲಭವಲ್ಲ. ಅಗ್ಗದ ಕೂಲಿ ವಿಷಯಕ್ಕೆ ಬಂದಾಗ ಚೀನಾ, ತೈವಾನ್, ಬಾಂಗ್ಲಾ, ವಿಯೆಟ್ನಾಂ ಜೊತೆಗೆ ಭಾರತ ಸ್ಪರ್ಧಿಸಬೇಕಾಗಿದೆ. ಬಿಡಿಭಾಗಗಳನ್ನು ಚೀನಾ, ತೈವಾನ್ ತೀರಾ ಅಗ್ಗವಾಗಿ ತಯಾರಿಸುತ್ತಿವೆ. ಹಾಗಾಗಿ, ಉತ್ಪಾದನೆಯ ಎಲ್ಲ ಹಂತಗಳಲ್ಲೂ ಭಾರತಕ್ಕೆ ತೀವ್ರವಾದ ಪೈಪೋಟಿಯಿದೆ.

ಅದಕ್ಕೆ ಪರಿಹಾರವಾಗಿ ಭಾರತ ಸರ್ಕಾರ ಪಿಎಲ್‌ಐ-ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್ ಯೋಜನೆ ಜಾರಿಗೆ ತಂದಿದೆ. ಭಾರತದಲ್ಲೇ ತಯಾರಾಗುವ ಕೆಲವು ಉತ್ಪನ್ನಗಳಿಗೆ ಸಬ್ಸಿಡಿ ಕೊಡಲಾಗುತ್ತದೆ. ಉದಾಹರಣೆಗೆ, ಪ್ರತಿ ಮೊಬೈಲ್ ಫೋನಿಗೆ ಅದರ ಮಾರಾಟ ಬೆಲೆಯ ಶೇ 4ರಿಂದ 6ರಷ್ಟು ಸಬ್ಸಿಡಿ ಕೊಡಲಾಗುತ್ತಿದೆ. ರಾಜನ್ ಗುರುತಿಸುವಂತೆ, ಭಾರತದಲ್ಲಿ ಮೊಬೈಲ್ ಫೋನ್ ಉತ್ಪಾದನೆ ಆಗುತ್ತಿಲ್ಲ. ಬಿಡಿಭಾಗಗಳ ಜೋಡಣೆಯಷ್ಟೇ ಆಗುತ್ತಿರುವುದು.

ಉತ್ಪಾದನಾ ಪ್ರಕ್ರಿಯೆ ಸಾಮಾನ್ಯವಾಗಿ ಮೂರು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯದು, ಉತ್ಪಾದನಾಪೂರ್ವ ಹಂತ. ಅಂದರೆ ಸಂಶೋಧನೆ, ವಿನ್ಯಾಸದಂತಹ ಬೌದ್ಧಿಕ ಕೆಲಸಗಳು ನಡೆಯುವ ಹಂತ. ಎರಡನೆಯದು, ಉತ್ಪಾದನಾ ಹಂತ. ಮೂರನೆಯದು, ಉತ್ಪಾದನೆಯ ನಂತರದ ಮಾರಾಟದ ಹಂತ. ಇದರಲ್ಲಿ ಮಾರ್ಕೆಟಿಂಗ್, ಪ್ರಚಾರದಂತಹವು ಬರುತ್ತವೆ. ಮೊದಲ ಹಾಗೂ ಕೊನೆಯ ಹಂತದಲ್ಲಿ ಗರಿಷ್ಠ ಬೆಲೆ ಸಿಗುತ್ತದೆ. ಕನಿಷ್ಠ ಹಣ ಸಿಗುವುದು ಮಧ್ಯದ, ಅಂದರೆ ಉತ್ಪಾದನೆಯ ಕೆಲಸಕ್ಕೆ. ಅದರಲ್ಲೂ ಬಿಡಿಭಾಗಗಳ ಜೋಡಣೆಗೆ ತುಂಬಾ ಕಡಿಮೆ ಸಿಗುತ್ತದೆ. ಉದಾಹರಣೆಗೆ, ಐಫೋನ್ ಗಮನಿಸೋಣ. ಅಲ್ಲಿ ಆ್ಯಪಲ್ ಕಂಪನಿ ಮಾಡುವುದು ಮೊದಲ ಹಾಗೂ ಕೊನೆಯ ಹಂತದ ಕೆಲಸ. ನಿಜವಾಗಿ ಐಫೋನನ್ನು ತಯಾರಿಸುವುದು ಫಾಕ್ಸ್‌ಕಾನ್ ಅನ್ನುವ ಕಂಪನಿ. ಅದು ಹೆಚ್ಚಾಗಿ ತಯಾರಾಗುವುದು ಚೀನಾದಲ್ಲಿ. ಆದರೆ ಆ್ಯಪಲ್ ಕಂಪನಿಗೆ ಒಟ್ಟು ಬೆಲೆಯ ಶೇ 60ರಷ್ಟು ಹೋಗುತ್ತದೆ. ಉತ್ಪಾದಿಸುವವರಿಗೆ ಸಿಗುವುದು ಶೇ 30ರಷ್ಟು. ಬಿಡಿಭಾಗಗಳನ್ನು ಜೋಡಿಸಿದ್ದಕ್ಕೆ ಸಿಗುವುದು ಬರೀ ಶೇ 4ರಷ್ಟು. ಸರ್ಕಾರ ಕೊಡುವ ಸಬ್ಸಿಡಿಗಿಂತ ಕಡಿಮೆ.

ಭಾರತವು ಕನಿಷ್ಠ ಬೆಲೆ ಸಿಗುವ ಬಿಡಿಭಾಗಗಳನ್ನು ಜೋಡಿಸುವ ಕೆಲಸಕ್ಕೆ ಪೈಪೋಟಿ ಮಾಡುತ್ತಿದೆ. ಅದರ ಬದಲು ಸಂಶೋಧನೆ ಹಾಗೂ ವಿನ್ಯಾಸಕ್ಕೆ ಅದು ಶ್ರಮಿಸಬೇಕು. ಅಲ್ಲಿ ನಮಗೆ ಸಾಮರ್ಥ್ಯವಿದೆ. ಇಂದು ಸುಮಾರು ಶೇ 20ರಷ್ಟು ಚಿಪ್‌ಗಳು ಭಾರತದಲ್ಲೇ ವಿನ್ಯಾಸಗೊಳ್ಳುತ್ತಿವೆ. ಆದರೆ ಅವನ್ನು ಜಾಗತಿಕ ಉದ್ದಿಮೆಗಳಿಗಾಗಿ ತಯಾರಿಸಲಾಗುತ್ತಿದೆ. ಭಾರತದ್ದೇ ಆದ ಚಿಪ್ ಉತ್ಪಾದನೆಯ ಉದ್ದಿಮೆಯಿಲ್ಲ. ಚಿಪ್ ಉತ್ಪಾದನೆಗಿಂತ ಚಿಪ್ ವಿನ್ಯಾಸ ಲಾಭದಾಯಕ. ಚಿಪ್ ವಿನ್ಯಾಸ ಮಾಡುವ ವಿಡಿಯಾ ಕಂಪನಿಯು ಚಿಪ್ ಉತ್ಪಾದಿಸುವ ಟಿಎಸ್‌ಎಂಸಿಗಿಂತ ಹಲವು ಪಟ್ಟು ಹೆಚ್ಚು ದುಡಿಯುತ್ತದೆ.

ಚೀನಾ ಮಾಡಿದಂತೆ ಬಿಡಿಭಾಗಗಳ ಜೋಡಣೆಯಿಂದ ಪ್ರಾರಂಭಿಸಿ ಮೇಲಿನ ಹಂತಕ್ಕೆ ಹೋಗುವ ಅವಶ್ಯಕತೆ ಭಾರತಕ್ಕಿಲ್ಲ. ಅದು ನೇರವಾಗಿ ಮೊಬೈಲ್ ಫೋನ್ ವಿನ್ಯಾಸದ ತಯಾರಿಗೇ ಪ್ರಯತ್ನಿಸಬಹುದು. ಒಂದು ಕಾಲದಲ್ಲಿ ಸೇವೆಯನ್ನು ರಫ್ತು ಮಾಡುವುದು ಕಷ್ಟವಾಗಿತ್ತು. ಈಗ ತಂತ್ರಜ್ಞಾನ ಬೆಳೆದಿದೆ. ಸೇವೆಯನ್ನು ರಫ್ತು ಮಾಡುವುದಕ್ಕೆ ಅವಕಾಶಗಳು ಹೆಚ್ಚುತ್ತಿವೆ. 2020ಕ್ಕೆ ಹೋಲಿಸಿದರೆ ಹಾಗೆ ರಫ್ತಾದ ಸೇವೆಯ ಪ್ರಮಾಣ 2022ರಲ್ಲಿ ಶೇ 12ರಷ್ಟು ಹೆಚ್ಚಿದೆ.

ಹಲವು ಹೊಸ ಉದ್ದಿಮೆಗಳು ಹುಟ್ಟಿಕೊಂಡಿವೆ. ಟಲ್ಲಿ ಸಂಸ್ಥೆ ತನ್ನ ವೆಬ್‌ಸೈಟ್ ಮೂಲಕ ಬನಾರಸ್ ಸಿಲ್ಕ್ ಸೀರೆಗಳನ್ನು ಜಗತ್ತಿನಾದ್ಯಂತ ಮಾರುತ್ತಿದೆ. ನವೀನ ವಿನ್ಯಾಸಗಳನ್ನು ಪರಿಚಯಿಸುವ ಮೂಲಕ ಹೆಚ್ಚು ಆಕರ್ಷಕ ಮಾಡಿದೆ. ಕಷ್ಟದಲ್ಲಿದ್ದ ಸಾಂಪ್ರದಾಯಿಕ ಕುಶಲ ಕರ್ಮಿಗಳ ಉತ್ಪನ್ನಕ್ಕೆ ಮಾರುಕಟ್ಟೆಯನ್ನು ಹಿಗ್ಗಿಸಿದೆ. ಉದ್ಯೋಗ ಹೆಚ್ಚಿದೆ. ಇಂತಹ ಹಲವು ಉದಾಹರಣೆಗಳು ಪುಸ್ತಕದಲ್ಲಿವೆ. ಇವರೆಲ್ಲಾ ಡಿಜಿಟಲ್ ಜ್ಞಾನವನ್ನು ಬಳಸಿಕೊಂಡು ಉತ್ಪಾದನೆಯನ್ನು ಹಿಗ್ಗಿಸುತ್ತಿದ್ದಾರೆ. ಇದನ್ನು ಹಲವು ಪಟ್ಟು ವಿಸ್ತರಿಸುವ ಸಾಧ್ಯತೆಯಿದೆ.

ಇದಕ್ಕೆ, ಹೊಸ ಚಿಂತನೆಗಳು ಹಾಗೂ ಉದ್ಯಮಶೀಲತೆಯನ್ನು ಬೆಳೆಸಬಲ್ಲ ಪರಿಸರ ನಿರ್ಮಾಣ ಆಗಬೇಕು. ಯುವಕರ ಬೌದ್ಧಿಕ ಸಾಮರ್ಥ್ಯ ಹೆಚ್ಚಬೇಕು. ಅದಕ್ಕಾಗಿ ಉತ್ತಮ ಗುಣಮಟ್ಟದ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಬೇಕು. ಜಗತ್ತಿನ 200 ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಒಂದು ವಿಶ್ವವಿದ್ಯಾಲಯವೂ ಇಲ್ಲ. ಒಳ್ಳೆಯ ವಿಶ್ವವಿದ್ಯಾಲಯ ಇದ್ದ ಕಡೆ ಹೊಸ ಚಿಂತನೆಗಳು, ವಿಚಾರಗಳು, ಉತ್ಪನ್ನಗಳು ಸೃಷ್ಟಿಯಾಗುತ್ತವೆ.

ಹೊಸ ಚಿಂತನೆ, ಕ್ರಿಯಾಶೀಲತೆ ಅರಳಬೇಕಾದರೆ ಮುಕ್ತ ವಾತಾವರಣ ಬೇಕು. ಚರ್ಚೆ, ಸಂವಾದ ಇದ್ದ ಕಡೆ ಹೊಸ ಹೊಸ ವಿಚಾರಗಳು ಹುಟ್ಟಿಕೊಳ್ಳುತ್ತವೆ. ಅಂತಹ ಚಿಂತನೆಗಳನ್ನು ಬಳಸಿಕೊಳ್ಳುವುದಕ್ಕೆ ಉದ್ದಿಮೆಗಳು ಕ್ರಿಯಾಶೀಲವಾಗಬೇಕು. ಇವೆಲ್ಲಕ್ಕೂ ಪ್ರಜಾಸತ್ತೆ ಭದ್ರ ಬುನಾದಿಯನ್ನು ಒದಗಿಸುತ್ತದೆ. ಹಾಗಾಗಿ, ಭಾರತದ ಭವ್ಯ ಆರ್ಥಿಕತೆಯ ಕನಸು ನನಸಾಗಬೇಕಾದರೆ ನಮ್ಮ ಪ್ರಜಾಸ

ಗಲಭೆ, ಗದ್ದಲದ ನಡುವೆ ಬಾಹ್ಯಾಕಾಶದಲ್ಲಿ ವಿಕ್ರಮ

ಮಣಿಪುರದಲ್ಲಿ ಅಮಾನವೀಯವಾದ ಗಲಭೆ, ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿ ಕೇಂದ್ರ ಮತ್ತು ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಗಳ ನಡುವೆ ತಿಕ್ಕಾಟ, ಬಿಜೆಪಿ ವಿರುದ್ಧ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟ ರಚನೆ, ಚಂದ್ರನಲ್ಲಿ ಇಳಿದ ಇಸ್ರೊ ನೌಕೆ, ಸೂರ್ಯನ ಅಧ್ಯಯನಕ್ಕೆ 'ಆದಿತ್ಯ' ನೌಕೆ ಉಡಾವಣೆಯಂತಹ ಹತ್ತಾರು ಬೆಳವಣಿಗೆಗಳನ್ನು 2023 ಹಾದು ಹೋಗಿದೆ

• ಸುಕೃತ ಎಸ್.

ಸಂಘರ್ಷ: ಮೇ 3ರಂದು ಮಣಿಪುರದಲ್ಲಿ ಆರಂಭವಾದ ಕುಕಿ ಬುಡಕಟ್ಟು ಸಮುದಾಯ ಹಾಗೂ ಮೈತೇಯಿ ಸಮುದಾಯಗಳ ಮಧ್ಯದ ಜನಾಂಗೀಯ ಸಂಘರ್ಷವು 2023ರಲ್ಲಿ ಭಾರತದ ಪ್ರಮುಖ ಘಟನಾವಳಿಗಳಲ್ಲೊಂದು. ಇಲ್ಲಿಯವರೆಗೂ 175ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ನೆಲೆ ಕಳೆದುಕೊಂಡ ಜನರು ಇಂದಿಗೂ ನಿರಾಶ್ರಿತರ ಶಿಬಿರಗಳಲ್ಲಿಯೇ ಇದ್ದಾರೆ. ಸುಳ್ಳು ಸುದ್ದಿಯನ್ನು ನಂಬಿ, ಸೇಡಿನ ಕಾರಣಕ್ಕಾಗಿ ಕುಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿಸಿ, ಅತ್ಯಾಚಾರ ಎಸಗಿದ ಘಟನೆಯಂತೂ ದೇಶದ ಅಂತಃಸಾಕ್ಷಿಯನ್ನೇ ಕಲಕಿತ್ತು. ಈ ಕೃತ್ಯದ ವಿಡಿಯೊವು ದೇಶದಾದ್ಯಂತ ಜುಲೈ ಹೊತ್ತಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಆದರೆ, ಘಟನೆ ನಡೆದ ಕೆಲವೇ ದಿನಗಳಲ್ಲಿ ಮಹಿಳಾ ಆಯೋಗಕ್ಕೆ ಈ ಬಗ್ಗೆ ದೂರು ನೀಡಲಾಗಿತ್ತಾದರೂ ಆಯೋಗ ಯಾವ ಕ್ರಮವನ್ನು ತೆಗೆದುಕೊಳ್ಳದ ಕುರಿತು ದೊಡ್ಡ ಮಟ್ಟದ ಆಕ್ರೋಶ ವ್ಯಕ್ತವಾಯಿತು. ನಂತರ, ಮೈತೇಯಿ ಸಮುದಾಯಕ್ಕೆ ಸೇರಿದ ಮಹಿಳೆಯೊಬ್ಬರು ತಮ್ಮ ಮೇಲೆ ಕುಕಿ ಸಮುದಾಯದ ಪುರುಷರು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ ಎಂದು ಆರೋಪಿಸಿದ್ದರು. ಕೇಂದ್ರ ಸರ್ಕಾರ ಈ ಬಗ್ಗೆ ನಿಷ್ಕ್ರಿಯವಾಗಿದೆ ಎಂಬ ಆಕ್ರೋಶ ದೇಶದಾದ್ಯಂತ ಮೊರೆಯಿತು. ಮಣಿಪುರದಲ್ಲಿ ಇಂದಿಗೂ ಸಂಘರ್ಷ ನಡೆಯುತ್ತಲೇ ಇದೆ.

ಜುಲೈ 31ರಂದು ಹರಿಯಾಣದ ನೂಹ್ ಜಿಲ್ಲೆಯಲ್ಲಿ ಕೋಮು ಸಂಘರ್ಷ ಆರಂಭವಾಯಿತು. 10 ದಿನ ನೂಹ್ ಹಾಗೂ ಗುರುಗ್ರಾಮ ಪ್ರದೇಶದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಸಂಘರ್ಷದಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ವಿಡಿಯೊಗಳೇ ಸಂಘರ್ಷದ ಮೂಲಬಿಂದು. ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳವು ಆಯೋಜಿಸಿದ್ದ, ಬ್ರಿಜ್ ಮಂಡಲ ಜಲಾಭಿಷೇಕ ಯಾತ್ರೆಗೆ ಮುಸ್ಲಿಂ ಸಮುದಾಯದ ಗುಂಪೊಂದು ಕಲ್ಲು ಎಸೆಯಿತು. ಇದರಿಂದ ಸಂಘರ್ಷ ಆರಂಭಗೊಂಡಿತು. ನೂರಾರು ಮುಸ್ಲಿಂ ಮನೆಗಳನ್ನು ಬುಲ್ಡೋಜರ್‌ನಿಂದ ನೆಲಸಮ ಮಾಡಲಾಯಿತು. ಮಸೀದಿಗಳಿಗೂ ಬೆಂಕಿ ಹಚ್ಚಲಾಯಿತು.

ಮಾರ್ಚ್ ಕೊನೇ ವಾರ ಹಾಗೂ ಏಪ್ರಿಲ್ ಮೊದಲ ವಾರಗಳಲ್ಲಿ ರಾಮ ನವಮಿ ಮೆರವಣಿಗೆ ವಿಷಯವಾಗಿ ದೇಶದಾದ್ಯಂತ ಕೋಮು ಗಲಭೆ ಏರ್ಪಟ್ಟಿತ್ತು. ಪಶ್ಚಿಮ ಬಂಗಾಳದ ಹೌರಾ ಹಾಗೂ ಉತ್ತರ್ ದಿನಾಜ್‌ಪುರ, ಬಿಹಾರದ ನಳಂದಾ ಹಾಗೂ ಸಾಸಾರಾಂ, ತೆಲಂಗಾಣದ ಹೈದರಾಬಾದ್, ಮಹಾರಾಷ್ಟ್ರದ ಔರಂಗಾಬಾದ್, ಗುಜರಾತ್‌ನ ವಡೋದರ, ಜಾರ್ಖಂಡ್‌ನ ಜಮ್‌ಶಡ್‌ಪುರದಲ್ಲಿ ಗಲಭೆಗಳು ನಡೆದಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಅಮೆರಿಕ-ಈಜಿಪ್ಟ್ ಪ್ರವಾಸ ಮುಗಿಸಿ ಭಾರತಕ್ಕೆ ಜೂನ್ 26ರಂದು ವಾಪಸಾದರು. ವಿಮಾನ ಇಳಿಯುತ್ತಿದ್ದಂತೆಯೇ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಸಂಬೋಧಿಸಿ, 'ದೇಶದಲ್ಲಿ ಏನು ನಡೆಯುತ್ತಿದೆ?' ಎಂದು ಕೇಳಿದ್ದರು. ಇದಕ್ಕೆ ಜೆ.ಪಿ. ನಡ್ಡಾ ಅವರು 'ದೇಶವು ಸಂತೋಷದಲ್ಲಿದೆ' ಎಂದು ಉತ್ತರಿಸಿದ್ದರು. ಈ ಕುರಿತು ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು.

'ಇಂಡಿಯಾ' ಮೈತ್ರಿಕೂಟ: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಅಧಿಕಾರದಿಂದ ಇಳಿಸಲು, ವಿರೋಧ ಪಕ್ಷಗಳನ್ನು ಒಗ್ಗೂಡಿಸಿ ತೃತೀಯ ರಂಗವೊಂದನ್ನು ರೂಪಿಸಲು ಹಲವು ಪ್ರಯತ್ನಗಳು ನಡೆದವು. ಆದರೆ, ಅವು ಫಲ ನೀಡಲಿಲ್ಲ. ಈ ಬಾರಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಈ ಪ್ರಯತ್ನವನ್ನು ಮುನ್ನಡೆಸಿದರು. ಹಲವು ಸುತ್ತಿನ ಭೇಟಿ, ಚರ್ಚೆಯ ಬಳಿಕ ಜುಲೈನಲ್ಲಿ ವಿರೋಧ ಪಕ್ಷಗಳ ಒಕ್ಕೂಟವು ವ್ಯವಸ್ಥಿತವಾದ ಸ್ವರೂಪ ಪಡೆಯಿತು. 'ದಿ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟ್ ಇನ್‌ಕ್ಲೂಸಿವ್ ಅಲಯನ್ಸ್ (ಇಂಡಿಯಾ)' ಹೆಸರಿನಲ್ಲಿ ಸುಮಾರು 26 ವಿರೋಧ ಪಕ್ಷಗಳು ಕಾಂಗ್ರೆಸ್ ನೇತೃತ್ವದಲ್ಲಿ ಒಗ್ಗೂಡಿದವು. ಈಗ ವಿರೋಧ ಪಕ್ಷಗಳ ಸಂಖ್ಯೆ 28ಕ್ಕೆ ಏರಿದೆ.

ಮೈತ್ರಿಕೂಟದ ಹೆಸರು 'ಇಂಡಿಯಾ' ಎಂದು ಇಟ್ಟಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆಕ್ರೋಶ ವ್ಯಕ್ತಪಡಿಸಿದರು. ಈ ಬಳಿಕ ದೇಶದ ಹೆಸರು 'ಭಾರತ'ವೊ ಅಥವಾ 'ಇಂಡಿಯಾ'ವೊ ಎನ್ನುವ ಚರ್ಚೆವೊಂದು ದೊಡ್ಡ ಮಟ್ಟದಲ್ಲಿ ನಡೆಯಿತು. ದೆಹಲಿಯಲ್ಲಿ ಜಿ-20 ಶೃಂಗಸಭೆ ನಡೆಯಿತು. ಇದರ ಔತಣಕೂಟದ ಆಮಂತ್ರಣ ಪತ್ರಿಕೆಯಲ್ಲಿ 'ಪ್ರಸಿಡೆಂಡ್ ಆಫ್ ಇಂಡಿಯಾ' ಬದಲಾಗಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಬರೆದಿದ್ದು ಚರ್ಚೆಗೆ ಕಾರಣವಾಯಿತು. ಅ.2ರಂದು ಬಿಹಾರ ಸರ್ಕಾರವು ಜಾತಿ ಗಣತಿ ವರದಿಯನ್ನು ಬಿಡುಗಡೆಗೊಳಿತು. ಈ ಬಳಿಕ ದೇಶದ ರಾಜಕೀಯವನ್ನು ಜಾತಿಗಣತಿ ವರದಿ ಪ್ರವೇಶಿಸಿತು. ಜಾತಿಗಣತಿಯನ್ನು 2024ರ ಲೋಕಸಭೆ ಚುನಾವಣೆಯ ವಿಷಯವನ್ನಾಗಿಸಲೂ 'ಇಂಡಿಯಾ' ಮೈತ್ರಿಕೂಟ ಬಯಸಿದೆ. ಆದರೆ, ಜಾತಿಗಣತಿಗೆ ಬಿಜೆಪಿ ವಿರೋಧ ವ್ಯಕ್ತಪಡಿಸಿದೆ.

ರಾಜ್ಯಪಾಲ-ರಾಜ್ಯ ಸರ್ಕಾರಗಳ ನಡುವೆ ತಿಕ್ಕಾಟ: ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರಗಳ ಮಧ್ಯೆ ತಿಕ್ಕಾಟ ನಡೆದುಕೊಂಡೇ ಬರುತ್ತಿದೆ. ತಮಿಳುನಾಡಿನಲ್ಲಿ ರಾಜ್ಯಪಾಲ ಎನ್. ರವಿ ಹಾಗೂ ಡಿಎಂಕೆ ಮಧ್ಯದ ತಿಕ್ಕಾಟ 2023ರಲ್ಲಿ ತಾರಕಕ್ಕೇರಿತು. ಜೊತೆಗೆ, ಕೇರಳ, ಜಾರ್ಖಂಡ್, ಪಶ್ಚಿಮ ಬಂಗಾಳ, ತೆಲಂಗಾಣ, ಪಂಜಾಬ್‌ನಲ್ಲಿಯೂ ಜಗಳ ನಡೆಯುತ್ತಿದೆ. ಈ ಎಲ್ಲ ಕಡೆಗಳಲ್ಲಿಯೂ ವಿಧಾನಸಭೆಗಳಲ್ಲಿ ಅನುಮೋದನೆ ಪಡೆದ ಮಸೂದೆಗಳನ್ನು ರಾಜ್ಯಪಾಲರು ತಡೆಹಿಡಿದಿದ್ದಾರೆ. ಈ ವಿಚಾರ ಸುಪ್ರೀಂ ಕೋರ್ಟ್‌ನ ಮೆಟ್ಟಿಲೂ ಏರಿದೆ.

ವಿವಿಧೆಡೆ ನಡೆದ ವಿಧಾನಸಭೆ ಚುನಾವಣೆ

2023 ಮರೆಯುವ ಮುನ್ನ...

ಚಂದ್ರಯಾನದ ಯಶಸ್ಸು

ಜುಲೈ 14, ಚಂದ್ರಯಾನ-3 ಯೋಜನೆಯ ಮೊದಲ ಹಂತ ಸಂಪನ್ನವಾದ ದಿನ. ಶ್ರೀಹರಿಕೋಟಾದಿಂದ ಚಂದ್ರನಲ್ಲಿಗೆ ರಾಕೆಟ್ ಅನ್ನು ಉಡಾವಣೆ ಮಾಡಲಾಯಿತು. ಆಗಸ್ಟ್ 23, ಭಾರತದ ಬಾಹ್ಯಾಕಾಶ ತಂತ್ರಜ್ಞಾನದ ಕ್ಷೇತ್ರದಲ್ಲಿನ ಐತಿಹಾಸಿಕ ದಿನ. ಅಂದು ಇಸ್ರೊದ ಸಾಧನೆಯು ಜಗತ್ತಿನಾದ್ಯಂತ ಮಾರ್ದನಿಸಿತು. ಅಂದು, ಚಂದ್ರನ ದಕ್ಷಿಣ ಧ್ರುವದಲ್ಲಿ 'ವಿಕ್ರಮ್' ಲ್ಯಾಂಡರ್ ಅಡಿಇಟ್ಟಿತ್ತು. ಹೀಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ನೌಕೆ ಇಳಿಸಿದ ನಾಲ್ಕನೇ ದೇಶವಾಗಿ ಭಾರತ ಸಾಧನೆಗೈಯಿತು. ಚಂದ್ರನ ತಾಪಮಾನ ಕುರಿತು ಕೆಲವು ಮಾಹಿತಿಗಳನ್ನು ಆಗಸ್ಟ್ 27ರಂದು ರೋವರ್ ಕಳುಹಿಸಿಕೊಟ್ಟಿತು. ನಂತರ ಸೆಪ್ಟೆಂಬರ್ 4ರ ಹೊತ್ತಿಗೆ ರೋವರ್‌ನೊಂದಿಗೆ ಇಸ್ರೊ ಸಂಪರ್ಕ ಕಡಿತಗೊಂಡಿತು. ರೋವರ್‌ನೊಂದಿಗೆ ಸಂಪರ್ಕ ಸಾಧಿಸಲು ಇಸ್ರೊ ಈಗಲೂ ಪ್ರಯತ್ನಿಸುತ್ತಿದೆ.

ಸೆಪ್ಟೆಂಬರ್ 2ರಂದು ಸೂರ್ಯನ ಅಧ್ಯಯನಕ್ಕಾಗಿ ಆದಿತ್ಯ ಎಲ್-1 ಅಂತರಿಕ್ಷ ವೀಕ್ಷಣಾಲಯವನ್ನು ಶ್ರೀಹರಿಕೋಟಾದಿಂದ ಪಿಎಸ್‌ಎಲ್‌ವಿ-ಸಿ 57 ರಾಕೆಟ್ ಮೂಲಕ ಉಡಾವಣೆ ಮಾಡಲಾಯಿತು. 'ಈ ಉಪಗ್ರಹವು ಜ.6ರಂದು ತನ್ನ ಗಮ್ಯ ಸ್ಥಾನವಾದ ಲಗ್ರಾಂಜಿಯನ್ ಬಿಂದು (ಎಲ್1) ತಲುಪಲಿದೆ' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ತಿಳಿಸಿದ್ದಾರೆ.



'ಭಾರತ ಜೋಡೊ ಯಾತ್ರೆ'ಯಿಂದ ಜಿ20 ಶೃಂಗಸಭೆವರೆಗೆ...

- 2022ರ ಸೆಪ್ಟೆಂಬರ್‌ನಲ್ಲಿ ಆರಂಭವಾಗಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ ಜೋಡೊ ಯಾತ್ರೆ'ಯು 2023ರ ಜನವರಿ 30ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ಮುಕ್ತಾಯಗೊಂಡಿತು
- ದೆಹಲಿ ಅಬಕಾರಿ ನೀತಿ ಸಂಬಂಧ ಫೆ. 26ರಂದು ಆಮ್ ಆದ್ಮಿ ಪಕ್ಷದ ನಾಯಕ, ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿತು. ಇದೇ ಪ್ರಕರಣದಲ್ಲಿ ಇದೇ ಪಕ್ಷದ ಸಂಜಯ್ ಸಿಂಗ್ ಅವರನ್ನೂ ಅಕ್ಟೋಬರ್‌ನಲ್ಲಿ ಬಂಧಿಸಲಾಗಿದೆ
- ಫೆಬ್ರುವರಿಯಲ್ಲಿ ಬಿಡುಗಡೆ ಮಾಡಿದ್ದ ಗುಜರಾತ್ ಗಲಭೆ ಕುರಿತ ಬಿಬಿಸಿಯ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರವು ದೇಶದಾದ್ಯಂತ ದೊಡ್ಡ ಮಟ್ಟದ ಚರ್ಚೆ, ಆಕ್ರೋಶ ಹುಟ್ಟು ಹಾಕಿತ್ತು. ಈ ಸಾಕ್ಷ್ಯಚಿತ್ರ ವೀಕ್ಷಣೆಯನ್ನು ಭಾರತ ಸರ್ಕಾರವು ನಿಷೇಧಿಸಿತ್ತು. ಜೊತೆಗೆ, ಕೆಲವು ದಿನಗಳ ಬಳಿಕ ಭಾರತದಲ್ಲಿರುವ ಬಿಬಿಸಿ ಕಚೇರಿಗೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದರು. ಈ ಬಗ್ಗೆ ಈಗಲೂ ತನಿಖೆ ನಡೆಯುತ್ತಿದೆ
- ಮೋದಿ ಉಪನಾಮಕ್ಕೆ ಸಂಬಂಧಿಸಿದ ಹೇಳಿಕೆಯ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸೂರತ್ ನ್ಯಾಯಾಲಯವು ಮಾರ್ಚ್‌ನಲ್ಲಿ 2 ವರ್ಷಗಳ ಗರಿಷ್ಠ ಶಿಕ್ಷೆ ವಿಧಿಸಿತು. ತೀರ್ಪು ಹೊರಬಂದ ಮರುದಿನವೇ ರಾಹುಲ್ ಅವರ ಲೋಕಸಭಾ ಸದಸ್ಯತ್ವವನ್ನು ಸ್ಪೀಕರ್ ಓಂ ಬಿರ್ಲಾ ಅವರು ಅಮಾನತುಗೊಳಿಸಿದ್ದರು. ನಂತರ ರಾಹುಲ್ ಅವರು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿದರು. ಜುಲೈನಲ್ಲಿ ತೀರ್ಪು ನೀಡಿದ ಕೋರ್ಟ್, ಸೂರತ್ ನ್ಯಾಯಾಲಯ ನೀಡಿದ ತೀರ್ಪಿಗೆ ತಡೆ ನೀಡಲು ನಿರಾಕರಿಸಿತು. ನಂತರ, ಆಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್ ತೀರ್ಪಿಗೆ ತಡೆ ನೀಡಿತು. ಈ ಬಳಿಕ ರಾಹುಲ್ ಅವರ ಲೋಕಸಭಾ ಸದಸ್ಯತ್ವವನ್ನು ಸ್ಪೀಕರ್ ಅವರು ಮರುಸ್ಥಾಪಿಸಿದರು
- ಸೆಪ್ಟೆಂಬರ್ 9 ಹಾಗೂ 10ರಂದು ದೆಹಲಿಯಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ಜಿ20 ಶೃಂಗಸಭೆ ಯಶಸ್ವಿಯಾಗಿ ನಡೆಯಿತು
- ಚೀನಾ ಪರ ಪ್ರಚಾರ ನಡೆಸುತ್ತಿದೆ ಹಾಗೂ ಇದಕ್ಕಾಗಿ ಹಣ ಅಕ್ರಮ ವರ್ಗಾವಣೆ ನಡೆದಿದೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯವು ನ್ಯೂಸ್‌ಕ್ಲಿಕ್ ಸುದ್ದಿ ಸಂಸ್ಥೆಯ ವಿರುದ್ಧ ಆಗಸ್ಟ್‌ನಲ್ಲಿ ತನಿಖೆ ಆರಂಭಿಸಿದೆ. ಸಂಸ್ಥೆಯ ಸ್ಥಾಪಕ ಪ್ರಬೀರ್ ಪುರಕಾಯಸ್ಥ ಹಾಗೂ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಬಂಧಿಸಲಾಗಿದೆ

ಆಧಾರ: ಪಿಟಿಐ, ಇಸ್ರೊ ವೆಬ್‌ಸೈಟ್, ಸಂಸದೀಯ ವ್ಯವಹಾರಗಳ ಸಚಿವಾಲಯ ವೆಬ್‌ಸೈಟ್

ಕಲಾಪ ಮತ್ತು ಪ್ರತಿಭಟನೆ

ಇಡೀ ವರ್ಷ ಸಂಸತ್ತು ಒಂದಿಲ್ಲೊಂದು ಕಾರಣಗಳಿಗಾಗಿ, ವಿವಾದಗಳಿಗಾಗಿ ಸುದ್ದಿಯಲ್ಲಿ ಇದ್ದೇ ಇತ್ತು. ಉದ್ಯಮಿ ಗೌತಮ್ ಅದಾನಿ ಅವರು ಅವ್ಯವಹಾರ ಎಸಗಿದ್ದಾರೆ ಎಂದು ಆರೋಪಿಸಿ ಹಿಂಡನ್‌ಬರ್ಗ್ ಬಿಡುಗಡೆ ಮಾಡಿದ್ದ ವರದಿ ಸಂಬಂಧ ಜಂಟಿ ಸಂಸದೀಯ ಸಮಿತಿ ಅಥವಾ ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿಯಿಂದ ಕಾಲಮಿತಿಯೊಳಗೆ ತನಿಖೆ ನಡೆಸಬೇಕು ಎಂದು ಬಜೆಟ್ ಅಧಿವೇಶನದುದ್ದಕ್ಕೂ ವಿರೋಧ ಪಕ್ಷಗಳು ಬೇಡಿಕೆ ಮುಂದಿಟ್ಟಿದ್ದವು. ಆದರೆ, ಕೇಂದ್ರ ಸರ್ಕಾರ ಈ ಬೇಡಿಕೆಯನ್ನು ಒಪ್ಪಿಕೊಳ್ಳಲಿಲ್ಲ.

ಮಣಿಪುರದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಜುಲೈ 20ರಿಂದ ಆಗಸ್ಟ್ 11ರವರೆಗೆ ಅಧಿವೇಶನ ನಡೆಯಿತು. ಪ್ರಧಾನಿ ಮೋದಿ ಅವರು ಈ ಬಗ್ಗೆ ಸಂಸತ್ತಿನಲ್ಲಿ ಉತ್ತರಿಸಬೇಕು ಹಾಗೂ ಸಂಘರ್ಷದ ಬಗ್ಗೆ ವಿಸ್ತೃತ ಚರ್ಚೆಗೆ ಅವಕಾಶ ನೀಡಬೇಕು ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿದವು. ಇದಕ್ಕೆ ಕೇಂದ್ರ ಸರ್ಕಾರ ಸ್ಪಂದಿಸದಿದ್ದಾಗ, ರಾಜ್ಯಸಭಾ ಪ್ರಕ್ರಿಯಾ ಕೈಪಿಡಿಯ 267ನೇ ನಿಯಮದಡಿ ಚರ್ಚೆಗೆ ವಿರೋಧ ಪಕ್ಷಗಳು ಅವಕಾಶ ಕೋರಿದವು. ಆದರೆ, ಸರ್ಕಾರವು 176ನೇ ನಿಯಮದಡಿ ಚರ್ಚೆಗೆ ಬರುವುದಾಗಿ ಹೇಳಿತು.

ಲೋಕಸಭೆಯ 'ಸದಸ್ಯರ ಪೋರ್ಟಲ್'ಗೆ ಬಳಸುವ ಐ.ಡಿ ಹಾಗೂ ಪಾಸ್‌ವರ್ಡ್ ಅನ್ನು ಇತರರೊಂದಿಗೆ ಹಂಚಿಕೊಂಡಿದ್ದಾರೆ ಎಂಬ ಕಾರಣಕ್ಕೆ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಲೋಕಸಭೆ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಯಿತು. ಪ್ರಶ್ನೆ ಕೇಳುವುದಕ್ಕಾಗಿ ಹಣ ಪಡೆದುಕೊಂಡಿದ್ದಾರೆ ಎನ್ನುವ ಆರೋಪವು ಅವರ ವಿರುದ್ಧ ಕೇಳಿಬಂದಿತ್ತು. ಈ ಸಂಬಂಧ ಕೇಂದ್ರ ಸರ್ಕಾರವು ನೀತಿ ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯು ಮಹುವಾ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿತ್ತು.

ನೂತನ ಸಂಸತ್ ಭವನ ಮತ್ತು ವಿವಾದಗಳು: ಪ್ರಧಾನಿ ಮೋದಿ ಅವರು ನೂತನ ಸಂಸತ್ ಭವನವನ್ನು ಮೇ 28ರಂದು ಉದ್ಘಾಟನೆ ಮಾಡಿದರು. ಇದು ದೇಶದಲ್ಲಿ ಸಂತೋಷದ ವಾತಾವರಣದ ಜೊತೆ ಜೊತೆಗೆ ದೊಡ್ಡ ಮಟ್ಟದ ವಿವಾದಗಳ ಸುರಿಮಳೆಯನ್ನೇ ಸುರಿಸಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಈ ಸಮಾರಂಭಕ್ಕೆ ಆಮಂತ್ರಣ ನೀಡಲಿಲ್ಲ. ರಾಷ್ಟ್ರಪತಿ ಅವರೇ ನೂತನ ಭವನವನ್ನು ಉದ್ಘಾಟಿಸಬೇಕು ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿದವು. ಇದಕ್ಕೆ ಕೇಂದ್ರವು ಸಹಮತ ವ್ಯಕ್ತಪಡಿಸಲಿಲ್ಲ. ಪ್ರತಿಭಟನಾತ್ಮಕವಾಗಿ 22 ವಿರೋಧ ಪಕ್ಷಗಳು ಸಮಾರಂಭವನ್ನು ಬಹಿಷ್ಕರಿಸಿದ್ದವು. ನೂತನ ಸಂಸತ್ ಭವನ ಉದ್ಘಾಟನೆ ಬಳಿಕ ಸೆಪ್ಟೆಂಬರ್‌ನಲ್ಲಿ ನಡೆದ ಮೊದಲ ಅಧಿವೇಶನದಲ್ಲಿ ಎಲ್ಲ ಸಂಸದರಿಗೂ ನೀಡಲಾದ ಸಂವಿಧಾನದ ಪ್ರಸ್ತಾವನೆ ಪ್ರತಿಯಲ್ಲಿ 'ಜಾತ್ಯತೀತ, ಸಮಾಜವಾದ ಹಾಗೂ ಸಮಗ್ರತೆ' ಪದಗಳನ್ನು ಕೈಬಿಡಲಾಗಿತ್ತು.

'ಸೆಂಗೋಲ್' ಅನ್ನು (ರಾಜದಂಡ) ತಮಿಳುನಾಡಿನ ಆಧೀನಂ ಪೀಠದ ಯತಿಗಳ ಸಮೂಹದೊಂದಿಗೆ ಪ್ರಧಾನಿ ಮೋದಿ ಅವರು ನೂತನ ಸಂಸತ್ ಭವನದ ಒಳಗೆ ಮೆರವಣಿಗೆ ಮೂಲಕ ಕೊಂಡೊಯ್ದರು. 'ಸೆಂಗೋಲ್' ಪ್ರತಿಷ್ಠಾಪನೆ ಕೂಡ ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹630
12 ಮೊಟ್ಟೆಗೆ ₹82
ಮೈಸೂರು
100 ಮೊಟ್ಟೆಗೆ ₹630

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹880 (880)
ಸೂರ್ಯಕಾಂತಿ (ರಿಫೈನ್ಡ್)	₹895 (895)
ಪಾಮೋಲಿನ್	₹816 (818)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯೆ



ಅರದೇಶಹಳ್ಳಿ **ಎನ್.ಸೊಣ್ಣಪ್ಪನವರು**
ನಿಧನ : 16-12-23. ಪಚ್ಯಾಹ : 26-12-23.
ಮೃತರ ಸ್ವಗೃಹದಲ್ಲಿ. ಬೆಳಿಗ್ಗೆ : 10.00 ಗಂಟೆಗೆ
ಇಂತಿ :- ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಕುಟುಂಬವರ್ಗ
ಹಾಗೂ ಪದಾಧಿಕಾರಿಗಳು ಮತ್ತು ಸದಸ್ಯರು, ಸ್ನೇಹಿತರು
ವಿದ್ಯಾ ಪೋಷಕರ ಸಂಘ – ಯಲಹಂಕ

mathru deva bhava
6ನೇ ವರ್ಷದ ಪುಣ್ಯಸ್ಮರಣೆ

ಪೂಜ್ಯ ಮಾತೃಶ್ರೀ **ಆರ್.ಕೆ. ಕೃಷ್ಣಮ್ಮ** ನವರು
(ದಿ|| ಎಸ್.ಎ. ಲಕ್ಷ್ಮಣ್ ರವರ ಧರ್ಮಪತ್ನಿ)
ದಿನಾಂಕ: 26-12-2017
ನಿಮ್ಮ ನೆನಪಲಿ ದಿನವ ಕಳೆಯುತಾ
ನಿಮ್ಮ ಆದರ್ಶಗಳನ್ನು ಸ್ಮರಿಸುತಾ
ನಿಮ್ಮ ಶ್ರೀರಕ್ಷೆಯ ಬಲದಿಂದ
ಬೆಳೆಯುತಿಹೆವು ನಾವು
ನಿಮ್ಮ ನಾಮ ಸ್ಮರಣೆಯಿಂದ

ಚಿರಸ್ಮರಣೆ

ಎಮ್. ನಾಗಪ್ಪ
ಕ್ಲಾಸ್1, ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್
337, ಸದಾಶಿವನಗರ,
ಮರಣ: 26-12-1991
ಗೌರವಾದಾರಗಳೊಂದಿಗೆ
ಸ್ಮರಿಸುವ
ಕುಟುಂಬ ವರ್ಗದವರು.

ಉಷ್ಣಾಂಶ ತಾಳಿಕೆ ಗೋಧಿ ತಳಿ ಬಿತ್ತನೆ: ಕೇಂದ್ರ ಹೇಳಿಕೆ

30.86 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಪೂರ್ಣ

ನವದೆಹಲಿ (ಪಿಟಿಐ): ಕಳೆದ ವರ್ಷ ಗೋಧಿ ಬೆಳೆಗಾರರು ಬಿಸಿಗಾಳಿಯಿಂದ ಬೆಳೆ ನಷ್ಟ ಅನುಭವಿಸಿದ್ದರು. ಹಾಗಾಗಿ, ಈ ಬಾರಿ ಹವಾಮಾನಕ್ಕೆ ಹೊಂದಿಕೊಳ್ಳುವಂತಹ ತಳಿಗಳ ಬಿತ್ತನೆಗೆ ಮೊರೆ ಹೋಗಿದ್ದಾರೆ ಎಂದು ಕೇಂದ್ರ ಕೃಷಿ ಸಚಿವಾಲಯದ ಆಯುಕ್ತ ಪಿ.ಕೆ. ಸಿಂಗ್ ತಿಳಿಸಿದ್ದಾರೆ.

ಗೋಧಿ ಚಳಿಗಾಲದ ಪ್ರಮುಖ ಆಹಾರದ ಬೆಳೆಯಾಗಿದೆ. ಸಾಮಾನ್ಯವಾಗಿ ನವೆಂಬರ್‌ನಲ್ಲಿ ಬಿತ್ತನೆಯಾಗಲಿದ್ದು, ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಕಟಾವು ನಡೆಯಲಿದೆ.

'ಡಿಸೆಂಬರ್ 22ರವರೆಗೆ 30.86 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗೋಧಿ ಬಿತ್ತನೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 31.44 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು' ಎಂದು ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ.

'ಕೆಲವು ಪ್ರದೇಶಗಳಲ್ಲಿ ಭತ್ತದ ಕಟಾವು ತಡವಾಗಿದೆ. ಹಾಗಾಗಿ, ಗೋಧಿ ಬಿತ್ತನೆಯ ಗುರಿ ಸಾಧನೆಗೆ ಸ್ವಲ್ಪ ಹಿನ್ನಡೆಯಾಗಿದೆ' ಎಂದು ಸಿಂಗ್ ಅವರು ಇದಕ್ಕೆ ಸ್ಪಷ್ಟನೆ ನೀಡಿದ್ದಾರೆ.

ಗೋಧಿ ಬೆಳೆಗಾರರು ಕಳೆದ ವರ್ಷ ಅನುಭವಿಸಿದ್ದ ಬಿಸಿಗಾಳಿಯ ಪರಿಣಾಮವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಹಾಗಾಗಿ, ಹವಾಮಾನ ವೈಪರೀತ್ಯಕ್ಕೆ ಹೊಂದಿಕೊಳ್ಳುವ ತಳಿಗಳ ಬಿತ್ತನೆಗೆ ಕ್ರಮವಹಿಸಿದೆ. ಶೇ 60ರಷ್ಟು ಪ್ರದೇಶದಲ್ಲಿ ಈ ತಳಿಯ ಬಿತ್ತನೆಯಾಗಿದೆ ಎಂದು ವಿವರಿಸಿದ್ದಾರೆ. ಉಷ್ಣಾಂಶ ತಾಳಿಕೆಯ ತಳಿಗಳ ಬಿತ್ತನೆಗೆ ಒತ್ತು ನೀಡಿದ್ದೇವೆ. ಕಳೆದ ವರ್ಷ ಶೇ 45ರಷ್ಟು ಪ್ರದೇಶದಲ್ಲಷ್ಟೇ ಈ ತಳಿಯ ಬಿತ್ತನೆ ನಡೆದಿತ್ತು. ಕಟಾವು ವೇಳೆ ಎದುರಾಗುವ ಬಿಸಿಲ ಬೇಗೆಯಿಂದ ಬೆಳೆಯನ್ನು ರಕ್ಷಿಸಿಕೊಳ್ಳಲು ಇದರಿಂದ ಅನುಕೂಲವಾಗಲಿದೆ ಎಂದಿದ್ದಾರೆ.

ಉತ್ತರಪ್ರದೇಶದಲ್ಲಿ ಗೋಧಿ ಬಿತ್ತನೆ ಪ್ರದೇಶ 90.44 ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 90.29 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು. ಮಧ್ಯಪ್ರದೇಶದಲ್ಲಿ ಸ್ವಲ್ಪ ಇಳಿಕೆಯಾಗಿದ್ದು, 80.17 ಲಕ್ಷ ಹೆಕ್ಟೇರ್ ಆಗಿದೆ. ಹಿಂದಿನ ವರ್ಷ 80.39 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ನಡೆದಿತ್ತು. ಪಂಜಾಬ್ ಮತ್ತು ಹರಿಯಾಣದಲ್ಲಿ ಬಿತ್ತನೆಯು ಹಿಂದಿನ ವರ್ಷದ ಮಟ್ಟದಲ್ಲಿದ್ದು, ಕ್ರಮವಾಗಿ 30.49 ಲಕ್ಷ ಮತ್ತು 20.31 ಲಕ್ಷ ಹೆಕ್ಟೇರ್ ಆಗಿದೆ ಎಂದು ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

ನಿರಂತರ ವಿದ್ಯುತ್: ಕೇಂದ್ರ ಭರವಸೆ

ಕಲ್ಲಿದ್ದಲು ವಿದ್ಯುತ್ ಸ್ಥಾವರದ ಉತ್ಪಾದನೆ ಹೆಚ್ಚಿಸಲು ನಿರ್ಧಾರ

ನವದೆಹಲಿ (ಪಿಟಿಐ): ದೇಶದಲ್ಲಿ ಕಲ್ಲಿದ್ದಲನ್ನು ಅವಲಂಬಿಸಿರುವ ಉಷ್ಣ ವಿದ್ಯುತ್ ಸ್ಥಾವರಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸುವ ಮೂಲಕ ಗ್ರಾಹಕರಿಗೆ ನಿರಂತರವಾಗಿ ವಿದ್ಯುತ್ ಪೂರೈಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಮುಂದಿನ ವರ್ಷದಲ್ಲಿ ದೇಶದ ಯಾವುದೇ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಅನಿಶ್ಚಿತತೆ ತಲೆದೋರದಂತೆ ಕ್ರಮ-ಹಿಸಲಾಗುವುದು. ಆ ಮೂಲಕ ಆರ್ಥಿಕತೆಯ ವಿಸ್ತರಣೆಗೆ ಒತ್ತು ನೀಡಲಾಗುವುದು ಎಂದು ಕೇಂದ್ರ ಇಂಧನ ಸಚಿವಾಲಯ ಹೇಳಿದೆ.

ಸಮರ್ಪಕವಾಗಿ ವಿದ್ಯುತ್ ಪೂರೈಕೆ ಸಂಬಂಧ ಈಗಿರುವ ಸ್ಥಾವರಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುವರಿಯಾಗಿ 91 ಗಿಗಾವಾಟ್‌ಗೆ ಹೆಚ್ಚಿಸಲು ನಿರ್ಧರಿಸಿದೆ. ಇದಕ್ಕಾಗಿ ಹಂತಹಂತವಾಗಿ ₹7.28 ಲಕ್ಷ ಕೋಟಿ ವೆಚ್ಚ ಮಾಡಲು ಯೋಜನೆ ರೂಪಿಸಿದೆ.

'ರಷ್ಯಾ-ಉಕ್ರೇನ್ ನಡುವಿನ ಕದನದಿಂದಾಗಿ ಯುರೋಪ್ ಎದುರಿಸಿದ ಇಂಧನ ಬಿಕ್ಕಟ್ಟಿನ ಬಗ್ಗೆ ಎಲ್ಲರಿಗೂ ತಿಳಿದಿದೆ. ದಿನದ 24ಗಂಟೆಯೂ ವಿದ್ಯುತ್ ಪೂರೈಕೆಯ ಸೌಲಭ್ಯ ಪಡೆಯುವುದು ಪ್ರತಿಯೊಬ್ಬ ಗ್ರಾಹಕನ ಹಕ್ಕಾಗಿದೆ. ಇಂಧನ ಭದ್ರತೆ ಒದಗಿಸುವುದು ನಮ್ಮ ಆದ್ಯತೆಯಾಗಿದೆ' ಎಂದು ಕೇಂದ್ರ ಇಂಧನ ಮತ್ತು ಹೊಸ ಮತ್ತು ನವೀಕರಿಸ-ಬಹುದಾದ ಇಂಧನ ಸಚಿವ ಆರ್.ಕೆ. ಸಿಂಗ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಪ್ರಸ್ತುತ ನಗರ ಪ್ರದೇಶದಲ್ಲಿ ಸರಾಸರಿ ವಿದ್ಯುತ್ ಪೂರೈಕೆ 23.50 ಗಂಟೆ ಇದ್ದರೆ, ಗ್ರಾಮೀಣ ಪ್ರದೇಶದಲ್ಲಿ 22 ಗಂಟೆ ಇದೆ' ಎಂದು ತಿಳಿಸಿದ್ದಾರೆ.

ದೇಶದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ 243.27 ಗಿಗಾವಾಟ್ ವಿದ್ಯುತ್ ಬೇಡಿಕೆ ಸೃಷ್ಟಿಯಾಗಿತ್ತು. ಇದು ಇಲ್ಲಿಯವರೆಗಿನ ದಾಖಲೆಯ ವಿದ್ಯುತ್ ಬೇಡಿಕೆಯಾಗಿದೆ. ಹಾಗಾಗಿ, ಕಲ್ಲಿದ್ದಲು ಅವಲಂಬಿಸಿರುವ ಉಷ್ಣ ವಿದ್ಯುತ್ ಸ್ಥಾವರಗಳ ಸಾಮರ್ಥ್ಯ ಹೆಚ್ಚಿಸುವುದು ಅನಿವಾರ್ಯ ಎಂದು ಹೇಳಿದ್ದಾರೆ.

ಸೌರ ವಿದ್ಯುತ್ ಪೂರೈಕೆಗೆ ಅದಾನಿ ಕಂಪನಿ ಒಪ್ಪಂದ

ನವದೆಹಲಿ (ಪಿಟಿಐ): ಅದಾನಿ ಗ್ರೀನ್ ಎನರ್ಜಿ ಕಂಪನಿಯು (ಎಜಿಇಎಲ್) 1,799 ಮೆಗಾವಾಟ್ ಸೌರ ವಿದ್ಯುತ್ ಪೂರೈಕೆ ಸಂಬಂಧ ಭಾರತೀಯ ಸೌರ ಶಕ್ತಿ ನಿಗಮದ (ಎಸ್‌ಇಸಿಐ) ಜೊತೆ ವಿದ್ಯುತ್ ಖರೀದಿ ಒಪ್ಪಂದಕ್ಕೆ (ಪಿಪಿಎ) ಸಹಿ ಹಾಕಿದೆ.

ಒಟ್ಟು ಎಂಟು ಸಾವಿರ ಮೆಗಾವಾಟ್ ಸೌರ ವಿದ್ಯುತ್ ಪೂರೈಕೆ ಸಂಬಂಧ 2020ರ ಜೂನ್‌ನಲ್ಲಿ ಎಸ್‌ಇಸಿಐಯಿಂದ ಟೆಂಡರ್ ಪಡೆಯಲಾಗಿತ್ತು. ಈ ಕುರಿತು ಬಾಕಿ ಉಳಿದಿದ್ದ ಒಪ್ಪಂದ ಪ್ರಕ್ರಿಯೆಯನ್ನು ಪೂರ್ಣಗೊಳಿಸ-ಲಾಗಿದೆ ಎಂದು ಅದಾನಿ ಕಂಪನಿ ಹೇಳಿದೆ.

ಹಸಿರು ಇಂಧನಕ್ಕೆ ಸಂಬಂಧಿಸಿದ ಅತಿದೊಡ್ಡ ಒಪ್ಪಂದವನ್ನು ಪೂರ್ಣಗೊಳಿಸುವ ಮೂಲಕ ಸುಸ್ಥಿರ ಇಂಧನದ ಕಾರ್ಯಕ್ಷೇತ್ರವನ್ನು ವಿಸ್ತರಿಸಲಾಗಿದೆ ಎಂದು ತಿಳಿಸಿದೆ.

2030ರ ವೇಳೆಗೆ ಭಾರತವು ಪಳೆಯುಳಿಕೆಯೇತರ ಇಂಧನ ಸಾಮರ್ಥ್ಯವನ್ನು 500 ಗಿಗಾವಾಟ್‌ಗೆ ಹೆಚ್ಚಿಸುವ ಗುರಿ ಹೊಂದಿದೆ. ಇದಕ್ಕೆ ಹೆಚ್ಚುವರಿಯಾಗಿ 45 ಗಿಗಾವಾಟ್‌ನಷ್ಟು ನವೀಕರಿಸಬಹುದಾದ ಇಂಧನದ ಕೊಡುಗೆ ನೀಡಲು ಕಂಪನಿ ನಿರ್ಧರಿಸಿದೆ. ಇದಕ್ಕಾಗಿ ಹೂಡಿಕೆ ಮಾಡಿರುವ ಬಂಡವಾಳವನ್ನು ಐದು ಪಟ್ಟು ಹೆಚ್ಚಿಸಲಾಗಿದೆ' ಎಂದು ಎಜಿಇಎಲ್ ಸಿಇಒ ಅಮಿತ್ ಸಿಂಗ್ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

25-12-2023

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	832 (832)
ಪಾಮ್ ವಾರದ ಡೆಲಿವರಿ	814 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	830 (830)

ಚೆನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 62,600 (62,575)
ಬೆಳ್ಳಿ ಕೆ.ಜಿ 74,500 (74,400)

ಆವರಣದಲ್ಲಿ ಶನಿವಾರದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹285-460
ದ್ವಿತಳಿ (ಬಿ.ಎ) ₹190-556

ಭಾರತೀಯ ಪ್ರಯಾಣಿಕರಿದ್ದ ವಿಮಾನ ಮುಂಬೈಗೆ

ವಾಟ್ರಿ (ಫ್ರಾನ್ಸ್) (ಎಎಫ್‌ಪಿ): ಮಾನವ ಕಳ್ಳಸಾಗಣೆ ಶಂಕೆಯ ಮೇಲೆ ಪ್ಯಾರಿಸ್ ಬಳಿ ವಶಕ್ಕೆ ಪಡೆದಿದ್ದ 303 ಭಾರತೀಯ ಪ್ರಯಾಣಿಕರಿದ್ದ ವಿಮಾನವನ್ನು ಫ್ರಾನ್ಸ್ ಪೊಲೀಸರು ವಿಚಾರಣೆಯ ನಂತರ ಮುಂಬೈಗೆ ಪ್ರಯಾಣಿಸಲು ಸೋಮವಾರ ಅನುವು ಮಾಡಿಕೊಟ್ಟಿದ್ದಾರೆ.

ಸದ್ಯ 276 ಪ್ರಯಾಣಿಕರನ್ನು ಹೊತ್ತ ವಿಮಾನವು ಮುಂಬೈಗೆ ಪ್ರಯಾಣ ಆರಂಭಿಸಿರುವುದನ್ನು 'ಎಎಫ್‌ಪಿ' ವರದಿಗಾರರೊಬ್ಬರು ಖಚಿತಪಡಿಸಿದ್ದಾರೆ. ಐವರು ಅಪ್ರಾಪ್ತರು ಸೇರಿದಂತೆ 25 ಪ್ರಯಾಣಿಕರು ಫ್ರಾನ್ಸ್‌ನಲ್ಲೇ ಉಳಿದಿದ್ದಾರೆ. ದುಬೈನಿಂದ ನಿಕರಾಗುವಾಗೆ ಹೋಗುತ್ತಿದ್ದ ಏರ್‌ಬಸ್ ಎ340 ವಿಮಾನವನ್ನು ಕಳೆದ ಗುರುವಾರ ಪ್ಯಾರಿಸ್‌ನ ಪೂರ್ವದ ವಾಟ್ರಿ ವಿಮಾನ ನಿಲ್ದಾಣದಲ್ಲಿ ಇಳಿಸಲಾಗಿತ್ತು. ಮಾನವ ಕಳ್ಳಸಾಗಣೆಯ ಶಂಕೆ ಕುರಿತು ಮಾಹಿತಿ ಲಭಿಸಿದ್ದರಿಂದ ಫ್ರಾನ್ಸ್ ಪೊಲೀಸರು ತನಿಖೆ ನಡೆಸುತ್ತಿದ್ದರು. ಈ ಸಂಬಂಧ ಇಬ್ಬರು ವ್ಯಕ್ತಿಗಳನ್ನು ಫ್ರಾನ್ಸ್ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದು, ತನಿಖೆ ಮುಂದುವರಿದಿದೆ. ವಿಮಾನದಲ್ಲಿದ್ದ 303 ಪ್ರಯಾಣಿಕರು ಸ್ವಇಚ್ಛೆಯ ಮೇರೆಗೆ ವಿಮಾನ ಹತ್ತಿದ್ದಾಗಿ ಹೇಳಿಕೆ ನೀಡಿದ ನಂತರ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ನ್ಯಾಯಾಂಗದ ಮೂಲಗಳು ತಿಳಿಸಿವೆ.

ರಷ್ಯಾಗೆ ಸಚಿವ ಎಸ್.ಜೈಶಂಕರ್

ಮಾಸ್ಕೊ (ಪಿಟಿಐ): ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಐದು ದಿನಗಳ ರಷ್ಯಾ ಪ್ರವಾಸದ ಅಂಗವಾಗಿ ಸೋಮವಾರ ಮಾಸ್ಕೊಗೆ ಬಂದಿಳಿದರು. ಪ್ರವಾಸ ಸಂದರ್ಭದಲ್ಲಿ ಅವರು ರಷ್ಯಾ ವಿದೇಶಾಂಗ ವ್ಯವಹಾರಗಳ ಸಚಿವರೊಂದಿಗೆ ದ್ವಿಪಕ್ಷೀಯ ಮತ್ತು ಜಾಗತಿಕ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ವಾಣಿಜ್ಯ, ಇಂಧನ, ರಕ್ಷಣೆ ಮತ್ತು ಸಂಪರ್ಕ ವಿಚಾರಗಳ ಕುರಿತು ಉಭಯ ದೇಶಗಳ ನಾಯಕರು ಚರ್ಚೆ ನಡೆಸಬಹುದು ಎಂದು ನಿರೀಕ್ಷಿಸಲಾಗಿದೆ. ಜೊತೆಗೆ ಉಪ ಪ್ರಧಾನಿ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಸಚಿವರನ್ನೂ ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ.

ಕರ್ನಾಟಕದಲ್ಲಿ ಪ್ರತಿದಿನ 2 ಕೋಟಿ ಮೊಟ್ಟೆ ಉತ್ಪಾದನೆ

ಮೊಟ್ಟೆ ದರ ಇನ್ನಷ್ಟು ಹೆಚ್ಚಳ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಎರಡೂವರೆ ತಿಂಗಳಿನಲ್ಲಿ ಕೋಳಿ ಮೊಟ್ಟೆಯ ಸಗಟು ಧಾರಣೆ ಹೆಚ್ಚಾಗಿದೆ. ಹಾಗಾಗಿ, ಹೊಸ ವರ್ಷಕ್ಕೆ ಚಿಲ್ಲರೆ ಮಾರಾಟ ತುಟ್ಟಿಯಾಗಬಹುದು ಎನ್ನಲಾಗಿದೆ.

ಅಕ್ಟೋಬರ್‌ನಲ್ಲಿ ಸಗಟು ದರ ₹535 (ಪ್ರತಿ 100 ಮೊಟ್ಟೆಗಳಿಗೆ) ಇತ್ತು. ಈ ತಿಂಗಳಿನಲ್ಲಿ ₹630ಕ್ಕೆ ಮುಟ್ಟಿದೆ. ಒಟ್ಟಾರೆ 95 ಪೈಸೆ ಹೆಚ್ಚಳವಾಗಿದೆ.

ಜನರು ಜನವರಿಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ಮಾಡುತ್ತಾರೆ. ಇದರಿಂದ ಕೇಕ್‌ಗಳ ತಯಾರಿಕೆಗೆ ಬೇಡಿಕೆ ಹೆಚ್ಚುತ್ತದೆ. ಅಲ್ಲದೇ, ಚಳಿಗಾಲದಲ್ಲಿ ಮನೆ ಸೇರಿದಂತೆ ಹೋಟೆಲ್‌ಗಳಲ್ಲಿ ಮೊಟ್ಟೆಗಳನ್ನು ಬಳಕೆ ಮಾಡುವುದು ಹೆಚ್ಚು. ಹಾಗಾಗಿ, ಒಂದು ಮೊಟ್ಟೆಗೆ ಸಗಟು ದರ ₹6.50ರಿಂದ ₹6.75 ದಾಟುವ ಸಾಧ್ಯತೆಯಿದೆ. ಹಾಗಾಗಿ, ಚಿಲ್ಲರೆ ಮಾರಾಟ ದರವು ₹7ರಿಂದ ₹7.50ಕ್ಕೆ ಹೆಚ್ಚಳವಾಗಲಿದೆ ಎನ್ನುತ್ತಾರೆ ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿಯ (ಎನ್‌ಇಸಿಸಿ) ಪ್ರತಿನಿಧಿಗಳು.

ಪ್ರಸ್ತುತ ರಾಜ್ಯದಲ್ಲಿ ವಿಜಯನಗರ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಮೈಸೂರು, ಕೊಪ್ಪಳ ಜಿಲ್ಲೆ ಸೇರಿದಂತೆ ಬೆಂಗಳೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಕೋಳಿ ಸಾಕಾಣಿಕೆ ನಡೆಯುತ್ತಿದೆ. ರಾಜ್ಯದಲ್ಲಿ ಪ್ರತಿನಿತ್ಯ 2 ಕೋಟಿಯಷ್ಟು ಮೊಟ್ಟೆಗಳ ಉತ್ಪಾದನೆಯಾಗುತ್ತದೆ. 'ಬೆಂಗಳೂರಿನಲ್ಲಿ ಜನರು ಪ್ರತಿದಿನ 90 ಲಕ್ಷ ಮೊಟ್ಟೆಗಳನ್ನು ಬಳಸುತ್ತಾರೆ. ದಾವಣಗೆರೆ ಸೇರಿದಂತೆ ರಾಜಧಾನಿ ಸುತ್ತ-ಮುತ್ತಲಿನ ಪ್ರದೇಶದಿಂದ ಇಲ್ಲಿಗೆ ನಿತ್ಯ 40 ಲಕ್ಷ ಮೊಟ್ಟೆಗಳು ಪೂರೈಕೆಯಾಗುತ್ತವೆ. ಉಳಿದಂತೆ ತಮಿಳುನಾಡಿನ ನಾಮಕ್ಕಲ್‌ನಿಂದ 40 ಲಕ್ಷದಿಂದ 50 ಲಕ್ಷ ಮೊಟ್ಟೆಗಳು ಪೂರೈಕೆಯಾಗುತ್ತಿವೆ' ಎಂದು ವಿವರಿಸುತ್ತಾರೆ ಎನ್‌ಇಸಿಸಿ ಬೆಂಗಳೂರು ವಲ ಯದ ಪ್ರಭಾರ ಉಸ್ತುವಾರಿಯಾಗಿರುವ ರವೀಂದ್ರ ರೆಡ್ಡಿ.

ನೆರೆಯ ಗೋವಾ, ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಗೂ ರಾಜ್ಯದಲ್ಲಿ ಉತ್ಪಾದನೆಯಾಗುವ ಕೋಳಿ ಮೊಟ್ಟೆಗಳು ಪೂರೈಕೆಯಾಗುತ್ತವೆ. ಬಳ್ಳಾರಿ ಭಾಗದ ಕೋಳಿ ಸಾಕಾಣಿಕೆ ಕೇಂದ್ರಗಳಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳು ತೆಲಂಗಾಣದ ರಾಯಲಸೀಮೆ ಭಾಗಕ್ಕೆ ಹೆಚ್ಚಾಗಿ ಪೂರೈಕೆಯಾಗುತ್ತವೆ.



ವಾರ್ಷಿಕ ವಹಿವಾಟು ₹5 ಸಾವಿರ ಕೋಟಿ

'ಕರ್ನಾಟಕದಲ್ಲಿ ಪ್ರತಿವರ್ಷ ಮೊಟ್ಟೆ ಉತ್ಪಾದನೆಯು ಶೇ 5ರಿಂದ 6ರಷ್ಟು ಹೆಚ್ಚಳ ವಾಗುತ್ತಿದೆ. ಜತೆಗೆ, ಬಳಕೆ ಪ್ರಮಾಣವೂ ಹೆಚ್ಚುತ್ತಿದೆ' ಎಂದು ಹೇಳುತ್ತಾರೆ ರವೀಂದ್ರ ರೆಡ್ಡಿ.

'ಕರ್ನಾಟಕವು ಮೊಟ್ಟೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಹೊರರಾಜ್ಯಗಳ ಅವಲಂಬನೆಯ ಅಗತ್ಯವಿಲ್ಲ. ಆದರೆ, ಹೊರ ಜಿಲ್ಲೆಗಳಿಂದ ಬೆಂಗಳೂರಿಗೆ ಸಾಗಾಣಿಕೆ ವೆಚ್ಚ ದುಬಾರಿಯಾಗಲಿದೆ. ಹಾಗಾಗಿ, ತಮಿಳುನಾಡಿನಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳ ಖರೀದಿಗೆ ಇಲ್ಲಿನ ಡೀಲರ್‌ಗಳು ಹೆಚ್ಚು ಆಸ್ಥೆವಹಿಸುತ್ತಾರೆ' ಎಂದು ಹೇಳುತ್ತಾರೆ.

'ಅಲ್ಲದೇ, ರಾಜ್ಯದಲ್ಲಿ ಪ್ರತಿದಿನ ಮೊಟ್ಟೆ ವಹಿವಾಟು ₹10 ಕೋಟಿ ದಾಟುತ್ತದೆ. ಕೋಳಿಗಳು, ಮೊಟ್ಟೆ ಹಾಗೂ ಗೊಬ್ಬರದ ಮಾರಾಟವನ್ನು ಪರಿಗಣಿಸಿದರೆ ಈ ಉದ್ಯಮದ ವಾರ್ಷಿಕ ವಹಿವಾಟು ಸುಮಾರು ₹4,500 ಕೋಟಿಯಿಂದ ₹5 ಸಾವಿರ ಕೋಟಿ ಇದೆ' ಎಂಬುದು ಅವರ ವಿವರಣೆ.

ಮಾರುಕಟ್ಟೆಯಲ್ಲಿ ಸ್ಮಾಲ್–ಮಿಡ್ ಕ್ಯಾಪ್ ಷೇರು ಜಿಗಿತ

ಹೂಡಿಕೆದಾರರ ನಿರೀಕ್ಷೆ ಫಲಪ್ರದ

ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನಡಿ ಷೇರು ಮಾರುಕಟ್ಟೆಯಲ್ಲಿ ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್

ವಿಚ್ಛೇದನ ಕೋರಿದ್ದ ಪ್ರಕರಣದ ಅರ್ಜಿಯ ವಿಚಾರಣೆ ವೇಳೆ ಅಭಿಪ್ರಾಯ ವ್ಯಕ್ತಪಡಿಸಿದ ದೆಹಲಿ ಹೈಕೋರ್ಟ್

ಪತಿಯನ್ನು 'ಸ್ತ್ರೀಲೋಲ' ಎನ್ನುವುದು ಕ್ರೌರ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪತಿಯ ವ್ಯಕ್ತಿತ್ವಕ್ಕೆ ಧಕ್ಕೆ ತರುವುದು ಕ್ರೌರ್ಯದ ಪರಮಾವಧಿ: ಹೈಕೋರ್ಟ್
- ಪತ್ನಿಯ ಸಂದೇಹದಿಂದ ಪತಿಗೆ ಮಾನಸಿಕ ಹಿಂಸೆ

ನವದೆಹಲಿ: ಆಧಾರರಹಿತ ಆರೋಪಗಳ ಮೂಲಕ ಪತಿಯ ಸಾರ್ವಜನಿಕ ನಿಂದನೆ, ತೇಜೋವಧೆ ಮತ್ತು 'ಸ್ತ್ರೀಲೋಲ' ಎಂದು ಕರೆಯುವ ಮೂಲಕ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವ ಪತ್ನಿಯ ನಡವಳಿಕೆಯು 'ಕ್ರೌರ್ಯದ ಪರಮಾವಧಿ' ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯ ಪಟ್ಟಿದೆ.

ಕೌಟುಂಬಿಕ ನ್ಯಾಯಾಲಯವೊಂದು ನೀಡಿದ್ದ ವಿಚ್ಛೇದನವನ್ನು ಪ್ರಶ್ನಿಸಿ ಪತ್ನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ನೀನಾ ಕೃಷ್ಣ ಬನ್ಸಾಲ್ ಮತ್ತು ಸುರೇಶ್ ಕುಮಾರ್ ಕೈತ್ ಅವರನ್ನು ಒಳಗೊಂಡ ನ್ಯಾಯಪೀಠವು ವಜಾಗೊಳಿಸಿತು.

ಅರ್ಜಿದಾರ ಮಹಿಳೆಯ ಮನವಿಯನ್ನು ಆಲಿಸಿದ ಬಳಿಕ ನ್ಯಾಯಾಲಯವು, 'ಪತ್ನಿಯು 'ಪುರುಷತ್ವ'ದ ಬಗ್ಗೆ ಆರೋಪ ಮಾಡುವುದು ಪತಿಯನ್ನು ತೀವ್ರ ಖಿನ್ನತೆ ಹಾಗೂ ಮಾನಸಿಕ ಆಘಾತಕ್ಕೆ ದೂಡುತ್ತದೆ' ಎಂದು ಹೇಳಿತು.

'ಸಂಗಾತಿಯನ್ನು ಸಾರ್ವಜನಿಕವಾಗಿ ನಿಂದಿಸುವುದು, ಮಾನಹಾನಿಕರ ಹೇಳಿಕೆ ಮೂಲಕ ತೇಜೋವಧೆ ಮಾಡುವುದು ಕ್ರೌರ್ಯಕ್ಕೆ ಸಮನಾದ ಕೃತ್ಯ. ಈ ಪ್ರಕರಣದಲ್ಲಿ ಪತಿಯ ದಾಂಪತ್ಯ ನಿಷ್ಠೆಯ ಬಗ್ಗೆ ಪತ್ನಿಗೆ ಅತೀವ ಸಂದೇಹ ಇದೆ. ಇದರಿಂದ ಪತಿಯು ಮಾನಸಿಕ ಕ್ರೌರ್ಯ ಅನುಭವಿಸುತ್ತಿದ್ದಾರೆ ಎಂಬುದು ಸ್ಪಷ್ಟ' ಎಂದು ತಿಳಿಸಿತು.

'ಪರಸ್ಪರ ನಂಬಿಕೆ, ವಿಶ್ವಾಸ ಮತ್ತು ಗೌರವವೇ ವಿವಾಹದ ತಳಹದಿ. ಪತಿಯಾಗಲೀ, ಪತ್ನಿಯಾಗಲೀ ಪರಸ್ಪರ ದೂಷಣೆ ಮಾಡುತ್ತಾ ಅಗೌರವದಿಂದ ವರ್ತಿಸುವುದು ಅಕ್ಷಮ್ಯ ಅಪರಾಧ. ಸಂಗಾತಿಗಳು ಪರಸ್ಪರರ ವ್ಯಕ್ತಿತ್ವ ಮತ್ತು ಘನತೆಯ ರಕ್ಷಣೆಗೆ ಗುರಾಣಿಯಾಗಿ ನಿಲ್ಲಬೇಕು' ಎಂದು ಕೋರ್ಟ್ ಪಾಠ ಹೇಳಿತು.

ದಂಪತಿ ಫೆಬ್ರುವರಿ 28, 2000ರಂದು ವಿವಾಹವಾಗಿದ್ದರು. 2004ರಲ್ಲಿ ಪುತ್ರನೂ ಜನಿಸಿದ್ದ. ವಿವಾಹವಾದ ಆರು ವರ್ಷದ ನಂತರ ಅವರ ನಡುವೆ ವೈಮನಸ್ಸು ಶುರುವಾಗಿತ್ತು. 'ನಪುಂಸಕ' ಎಂದು ಆರೋಪಿಸಿದ್ದ ಪತ್ನಿ ವಿರುದ್ಧ ವಿಚ್ಛೇದನ ಕೋರಿ ಪತಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಕ್ರೌರ್ಯದ ಆಧಾರದ ಮೇಲೆ ಕೋರ್ಟ್ ವಿಚ್ಛೇದನ ನೀಡಿತ್ತು.

ಕೆವಿಎಸ್ ದಾಖಲಾತಿ: ಅನ್ಯ ರಾಜ್ಯಗಳ ಆದಾಯ ಪ್ರಮಾಣಪತ್ರವೂ ಸ್ವೀಕೃತ

ನವದೆಹಲಿ (ಪಿಟಿಐ): ಆದಾಯ ಪ್ರಮಾಣಪತ್ರವನ್ನು ಬೇರೆ ರಾಜ್ಯದಿಂದ ಪಡೆಯಲಾಗಿದೆ ಎಂಬ ಕಾರಣ ನೀಡಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇಡಬ್ಲ್ಯುಎಸ್) ಮೀಸಲಾತಿ ಅಡಿ ದಾಖಲಾತಿಯನ್ನು ಕೇಂದ್ರೀಯ ವಿದ್ಯಾಲಯ ಸಂಘಟನೆ (ಕೆವಿಎಸ್) ಶಾಲೆಗಳು ನಿರಾಕರಿಸುವಂತಿಲ್ಲ ಎಂದು ದೆಹಲಿ ಹೈಕೋರ್ಟ್ ಆದೇಶ ಹೊರಡಿಸಿದೆ.

ಮಗುವೊಂದು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದೆಯೇ ಎಂದು ನಿರ್ಧರಿಸಲು, ಕೇಂದ್ರ ಸರ್ಕಾರವೇ ಮಗುವಿನ ಕುಟುಂಬದ ವಾರ್ಷಿಕ ಆದಾಯದ ಮಿತಿಯನ್ನು ನಿಗದಿಪಡಿಸುತ್ತದೆ ಎಂದೂ ಹೈಕೋರ್ಟ್ ಹೇಳಿದೆ. ಕೆವಿಎಸ್ ಶಾಲೆಗಳು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿವೆ.

ಕೆವಿಎಸ್ ಶಾಲೆಗಳಲ್ಲಿ ದಾಖಲಾತಿ ಪಡೆಯುವ ನಿಟ್ಟಿನಲ್ಲಿ ಪಡೆಯುವ ಆದಾಯ ಪ್ರಮಾಣಪತ್ರವನ್ನು ಆಯಾ ರಾಜ್ಯದ ತಹಶೀಲ್ದಾರ ಹುದ್ದೆಗಿಂತ ಕೆಳ ಹುದ್ದೆಗಳಲ್ಲಿ ಇರುವವರಿಂದ ಪಡೆದಿರಬಾರದು. ಆಯಾ ರಾಜ್ಯಗಳು ನಿಗದಿಪಡಿಸಿರುವ ದಾಖಲೆ ಪರಿಶೀಲನಾ ಪ್ರಕ್ರಿಯೆಗಳ ಅನ್ವಯವೇ ಸಂಬಂಧಪಟ್ಟ ದಾಖಲೆಗಳ ಪರಿಶೀಲನೆ ನಡೆದಿರಬೇಕು ಎಂದು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಅಧಿಸೂಚನೆ ಅನ್ವಯ, ದೇಶದ ಯಾವುದೇ ರಾಜ್ಯದಲ್ಲಿರುವ ಕೆವಿಎಸ್ ಶಾಲೆಯಲ್ಲಿ ಇಡಬ್ಲ್ಯುಎಸ್ ಮೀಸಲಾತಿ ಅಡಿ ದಾಖಲಾತಿ ಬಯಸುವ ಅಭ್ಯರ್ಥಿಯು ಅದೇ ರಾಜ್ಯದಿಂದ ಆದಾಯ ಪ್ರಮಾಣಪತ್ರ ಪಡೆದಿರಬೇಕೆಂಬ ನಿಯಮವಿಲ್ಲ ಎಂದು ನ್ಯಾಯಮೂರ್ತಿ ಅನೂಪ್ ಜೈರಾಮ್ ಭಂಭಾನಿ ಅವರು ಆದೇಶ ಹೊರಡಿಸುವ ವೇಳೆ ಹೇಳಿದ್ದಾರೆ.

ಪ್ರಕರಣವೇನು?: ಉತ್ತರ ಪ್ರದೇಶದ ಆಜಂಗಢದ ನಿವಾಸಿಯೊಬ್ಬರು ತಮ್ಮ ಮಗನಿಗೆ ಇಡಬ್ಲ್ಯುಎಸ್ ಮೀಸಲಾತಿ ಅಡಿ ಒಂದನೇ ತರಗತಿಗೆ ದಾಖಲಾತಿ ನೀಡಲು ದೆಹಲಿಯ ನರೇಲಾದ ಕೆವಿಎಸ್ ಶಾಲೆಗೆ ಅರ್ಜಿ ಸಲ್ಲಿಸಿದ್ದರು. ವ್ಯಕ್ತಿ ಸಲ್ಲಿಸಿದ್ದ ಆದಾಯ ಪ್ರಮಾಣಪತ್ರವನ್ನು ಆಜಂಗಢದ ತಹಶೀಲ್ದಾರರು ಪ್ರಮಾಣೀಕರಿಸಿದ್ದರು. ದೆಹಲಿಯ ಶಾಲೆಯಲ್ಲಿ ಪ್ರವೇಶ ನೀಡಲು ಉತ್ತರ ಪ್ರದೇಶದ ಪ್ರಮಾಣಪತ್ರವನ್ನು ಪರಿಗಣಿಸಲಾಗುವುದಿಲ್ಲ ಎಂದು ಹೇಳಿದ್ದ ಶಾಲೆಯ ಆಡಳಿತ ಮಂಡಳಿಯು, 2022ರ ಜನವರಿಯಲ್ಲಿ ದಾಖಲಾತಿ ನಿರಾಕರಿಸಿತ್ತು.

ಉದ್ಯೋಗದ ನಿಮಿತ್ತ ಉತ್ತರ ಪ್ರದೇಶದಿಂದ ದೆಹಲಿಗೆ ತಮ್ಮ ಕುಟುಂಬವನ್ನು ವರ್ಗಾಯಿಸಿದ್ದೇನೆ. ಹೀಗಾಗಿ ಮಗನಿಗೆ ಕೇಂದ್ರೀಯ ವಿದ್ಯಾಲಯದಲ್ಲಿ ದಾಖಲಾತಿ ನೀಡುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ವ್ಯಕ್ತಿಯು ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಉತ್ತರ ಪ್ರದೇಶದಿಂದ ಪಡೆಯಲಾಗಿರುವ ಆದಾಯ ಪ್ರಮಾಣಪತ್ರವೊಂದೇ ಬಾಲಕನ ಪ್ರವೇಶಾತಿ ನಿರಾಕರಣೆಗೆ ಕಾರಣವಲ್ಲ. ಬಾಲಕನ ಪೋಷಕರು ಸಲ್ಲಿಸಿದ್ದ ಅರ್ಜಿಯಲ್ಲಿ ಹಲವಾರು ಸಮಸ್ಯೆಗಳಿದ್ದವು ಎಂದು ಕೆವಿಎಸ್ ಶಾಲೆ ಪರ ವಕೀಲರು ಹೈಕೋರ್ಟ್‌ನಲ್ಲಿ ಹೇಳಿದರು.

ಅರ್ಜಿದಾರರ ಮಗನಿಗೆ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ ದಾಖಲಾತಿ ನೀಡಿ, ಬಳಿಕ ಅದನ್ನು ನಿರಾಕರಿಸಲಾಗಿದೆ. ವ್ಯಾಜ್ಯದ ಕಾರಣಕ್ಕಾಗಿ ಬಾಲಕನ ಅಮೂಲ್ಯ ಸಮಯ ಹಾಳಾಗಿದೆ. ಹೀಗಾಗಿ ಆತನಿಗೆ 2023-24ನೇ ಸಾಲಿನ ಮೂರನೇ ತರಗತಿಗೆ ದಾಖಲಾತಿ ನೀಡಬೇಕೆಂದು ಹೈಕೋರ್ಟ್ ನರೇಲಾದ ಕೆವಿಎಸ್ ಶಾಲೆಗೆ ನಿರ್ದೇಶನ ನೀಡಿದೆ.

'ಅಯ್ಯಪ್ಪ ಸ್ವಾಮಿ ಭಕ್ತರಿಗೆ ನೀರಿನ ಸೌಕರ್ಯ ಒದಗಿಸಿ'

ಕೊಚ್ಚಿ (ಪಿಟಿಐ): ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ತೆರಳುವ ಭಕ್ತರಿಗೆ ಮಾರ್ಗ ಮಧ್ಯೆ ಇಡತ್ತಾವಳಂನಲ್ಲಿ ನೀರು, ಲಘು ಆಹಾರ ಮತ್ತು ಇತರ ಸೌಲಭ್ಯಗಳನ್ನು ಒದಗಿಸಬೇಕು ಎಂದು ತಿರುವಾಂಕೂರು ದೇವಸ್ಥಾನ ಮಂಡಳಿಗೆ (ಟಿಡಿಬಿ) ಕೇರಳ ಹೈಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಶಬರಿಮಲೆಗೆ ತೆರಳುವ ರಸ್ತೆಗಳಲ್ಲಿ ಮಕ್ಕಳು ಸೇರಿದಂತೆ ಭಕ್ತರು ಆಹಾರ ಮತ್ತು ನೀರು ಇಲ್ಲದೆ ಸುಮಾರು 12 ತಾಸುಗಳವರೆಗೆ ಪರದಾಡಿದರು ಎಂಬ ವರದಿಗಳನ್ನು ಗಮನಿಸಿದ ನ್ಯಾಯಾಲಯ ವಿಶೇಷ ಕಲಾಪ ನಡೆಸಿತು.

ಭಕ್ತಾದಿಗಳು ಕೆಲ ಸಮಯ ವಿರಮಿಸುವ ಸ್ಥಳವಾದ ಇಡತ್ತಾವಳಂನಲ್ಲಿ ಅವರಿಗೆ ನೀರು, ಲಘು ಆಹಾರ ಮತ್ತು ಇತರ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು ಎಂದು ತಿರುವಾಂಕೂರು ದೇವಸ್ಥಾನ ಮಂಡಳಿಗೆ ನ್ಯಾಯಮೂರ್ತಿಗಳಾದ ಅನಿಲ್ ಕೆ. ನರೇಂದ್ರನ್ ಮತ್ತು ಜಿ. ಗಿರೀಶ್ ಅವರನ್ನು ಒಳಗೊಂಡ ಪೀಠವು ಸೂಚಿಸಿದೆ ಎಂದು ವಕೀಲರೊಬ್ಬರು ಹೇಳಿದರು.

ದೇವಾಲಯದ ಒಳಗೆ ಮತ್ತು ಹೊರಗೆ ಜನರನ್ನು ನಿಯಂತ್ರಿಸುವ ಕುರಿತು ಮೇಲ್ವಿಚಾರಣೆ ನಡೆಸಬೇಕು, ಅಗತ್ಯ ಬಿದ್ದರೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನೇಮಿಸಬೇಕು ಎಂದು ರಾಜ್ಯ ಪೊಲೀಸ್ ಮುಖ್ಯಸ್ಥರಿಗೂ ಪೀಠವು ನಿರ್ದೇಶನ ನೀಡಿತು.

ಯಾವುದೇ ಆಹಾರ ಮತ್ತು ನೀರಿನ ವ್ಯವಸ್ಥೆ ಇಲ್ಲದ ಕಡೆಗಳಲ್ಲಿ ತಮ್ಮನ್ನು ತಡೆದು ನಿಲ್ಲಿಸಲಾಗಿದೆ ಎಂದು ತಮಿಳುನಾಡು ಮತ್ತು ಕರ್ನಾಟಕದಿಂದ ಬಂದಿರುವ ಭಕ್ತರು ಸುದ್ದಿ ವಾಹಿನಿಗಳಿಗೆ ಹೇಳಿಕೆ ನೀಡಿದ್ದಾರೆ. ಶಬರಿಮಲೆಯಲ್ಲಿ ಸನ್ನಿಧಾನಂನಲ್ಲಿ ಕೂಡ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತಿರುವುದಾಗಿ ಭಕ್ತರು ದೂರುತ್ತಿರುವುದು ಕಂಡು ಬಂದಿದೆ.

ಭಾನುವಾರ ದರ್ಶನಕ್ಕಾಗಿ 1.2 ಲಕ್ಷ ಜನರು ಬಂದಿದ್ದರು. ಸೋಮವಾರ ಕೂಡ ಇಷ್ಟೇ ಸಂಖ್ಯೆಯ ಜನರು ಇದ್ದರು. ಈ ಸಲ ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಬಂದಿದ್ದಾರೆ ಎಂದು ಟಿಡಿಬಿ ಮೂಲಗಳು ಹೇಳಿವೆ.

ಆಹಾರ ಮತ್ತು ನೀರು ಲಭ್ಯವಿರುವ ಕಡೆಯೇ ವಾಹನಗಳ ನಿಲುಗಡೆ ಮಾಡಲು ಸೂಚನೆ ನೀಡಲಾಗಿದೆ ಎಂದು ಟಿಡಿಬಿ ಅಧ್ಯಕ್ಷ ಪಿ.ಎಸ್. ಪ್ರಶಾಂತ್ ತಿಳಿಸಿದರು.

ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಹೇಳಿಕೆ

'2024ರ ಲೋಕಸಭೆ ಚುನಾವಣೆಗೆ ಮೋದಿ ನಾಯಕತ್ವದ ವಿರುದ್ಧ ಪ್ರತಿಪಕ್ಷಗಳು ಒಗ್ಗೂಡುತ್ತಿವೆ. ಆದರೆ ಅವರ ನಾಯಕ ಯಾರು ಎಂಬುದೇ ಸ್ಪಷ್ಟವಿಲ್ಲ'

'ಮೋದಿಗೆ ಪರ್ಯಾಯ ಇಲ್ಲ'

ಮುಂಬೈ (ಪಿಟಿಐ): ಈಗಿನ ಪ್ರಕಾರ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪರ್ಯಾಯ ಇಲ್ಲ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದರು.

ಲೋಕಸಭೆ ಚುನಾವಣೆಗಾಗಿ ಮೋದಿ ನಾಯಕತ್ವದ ವಿರುದ್ಧ ಪ್ರತಿಪಕ್ಷಗಳು ಒಗ್ಗೂಡುತ್ತಿರುವ ಬಗ್ಗೆ ವರದಿಗಾರರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.



'ಈಗಿನ ಪ್ರಕಾರ ಮೋದಿ ಅವರಿಗೆ ಪರ್ಯಾಯ ನಾಯಕ ಯಾರೂ ಇಲ್ಲ. ಇಂತಹ ನಿರ್ಧಾರಗಳನ್ನು ಹಲವಾರು ಅಂಶಗಳನ್ನು ಆಧರಿಸಿ ಕೈಗೊಳ್ಳಲಾಗುತ್ತದೆ. ಒಂದು ಅಥವಾ ಎರಡು ಅಂಶಗಳ ಆಧಾರದಲ್ಲಿ ಅಲ್ಲ' ಎಂದರು.

'ನೀವು ಬಹಳ ಪ್ರಚಾರ ಮಾಡುತ್ತೀರಿ' ಎಂದು ಅವರು ಹೇಳಿದರು.

ಆದರೆ, ದೇಶದ ಹಿತವನ್ನು ಯಾರು ರಕ್ಷಿಸುವರು, ಯಾರು ಅಧಿಕಾರಕ್ಕೆ ಬಂದರೆ ದೇಶ ಸುರಕ್ಷಿತವಾಗಿರುತ್ತದೆ ಮತ್ತು ಸದೃಢವಾಗಿರುತ್ತದೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ವರ್ಚಸ್ಸನ್ನು ಹೆಚ್ಚಿಸಿದವರು ಯಾರು– ಈ ಎಲ್ಲ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

'ಛತ್ತೀಸಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನ– ಈ ಮೂರು ರಾಜ್ಯಗಳಲ್ಲಿ ಈಚೆಗಿನ ಚುನಾವಣಾ ಫಲಿತಾಂಶವನ್ನೂ ನೋಡಿದ್ದೇವೆ. ಇಲ್ಲಿ ಬಿಜೆಪಿ ಗೆಲುವು ಪಡೆದಿದೆ. ಚುನಾವಣೆಗೆ ಮೊದಲು ಮಾಡುವ ಊಹೆಗಳಿಂದ ಫಲಿತಾಂಶ ಹೀಗೇ ಇರುತ್ತದೆ ಎಂದು ಹೇಳಲು ಆಗುವುದಿಲ್ಲ' ಎಂದು ಅಜಿತ್ ಪವಾರ್ ಹೇಳಿದರು.

'ಇಂಡಿಯಾ' ಸಭೆ ಬಳಿಕ ಮೊದಲ ಬಾರಿಗೆ ಪ್ರತಿಕ್ರಿಯೆ

ನನ್ನನ್ನು ನಿರ್ಲಕ್ಷಿಸಿಲ್ಲ: ನಿತೀಶ್

ಪಟ್ನಾ (ಪಿಟಿಐ): ಕಳೆದ ವಾರ ದೆಹಲಿಯಲ್ಲಿ ನಡೆದ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ತಮ್ಮನ್ನು ನಿರ್ಲಕ್ಷಿಸಲಾಗಿದೆ ಎಂದು ತಾವು ಭಾವಿಸಿರುವುದಾಗಿ ಹರಡಿರುವ ವದಂತಿಗಳನ್ನು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೋಮವಾರ ಅಲ್ಲಗಳೆದರು.

ಈ ಸಭೆಯಲ್ಲಿ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಸೂಚಿಸಲಾಗಿತ್ತು.

ಬಿಜೆಪಿಯನ್ನು ವಿರೋಧಿಸುವ ಪಕ್ಷಗಳನ್ನು ಒಂದೇ ವೇದಿಕೆಯಡಿ ತರಲು ಪ್ರಯತ್ನಿಸಿದ್ದು, ನನ್ನ ಸ್ವಂತ ಲಾಭಕ್ಕಾಗಿ ಏನನ್ನೂ ಬಯಸುವುದಿಲ್ಲ ಎಂದರು. ಆದರೆ ಸೀಟು ಹಂಚಿಕೆ ವಿಷಯವನ್ನು ತ್ವರಿತವಾಗಿ ಇತ್ಯರ್ಥಗೊಳಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಿದ್ದಾಗಿ ಹೇಳಿದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮ ದಿನಾಚರಣೆ ಅಂಗವಾಗಿ ಗೌರವ ಸಲ್ಲಿಸಲು ಅವರ ಸ್ಮಾರಕದ ಬಳಿ ತೆರಳಿದ್ದಾಗ ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ, 'ನನಗೆ ನಿರಾಸೆಯಾಗಿಲ್ಲ, ಸಿಟ್ಟೂ ಬಂದಿಲ್ಲ' ಎಂದರು.

'ಸಭೆಯಲ್ಲಿ ನಾಯಕನ ಆಯ್ಕೆ ವಿಷಯ ಪ್ರಸ್ತಾಪವಾಯಿತು. ನನಗೆ ಆಸಕ್ತಿ ಇಲ್ಲ ಎಂದು ನಾನು ಸ್ಪಷ್ಟಪಡಿಸಿದ್ದೆ. ಆಗ ಮತ್ತೊಂದು ಹೆಸರು ಪ್ರಸ್ತಾಪವಾಯಿತು. ನನಗೆ ಸಹಮತವಿರುವುದಾಗಿ ನಾನು ಹೇಳಿದೆ' ಎಂದು ಸಭೆಯಲ್ಲಿ ಕೇಜ್ರಿವಾಲ್ ಮತ್ತು ಮಮತಾ ಬ್ಯಾನರ್ಜಿ ಅವರು ಪ್ರಸ್ತಾಪಿಸಿದ ಖರ್ಗೆ ಅವರ ಹೆಸರು ಕುರಿತು ಹೇಳಿದರು.

ಪ್ರಧಾನಿಯಾಗಬೇಕೆಂಬ ನಿತೀಶ್ ಅವರ ಆಕಾಂಕ್ಷೆಯನ್ನು ಎಎಪಿಯ ಕೇಜ್ರಿವಾಲ್ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಅವರು ಹತ್ತಿಕ್ಕಿದ್ದಾರೆಂದು ಎನ್‌ಡಿಎಯಲ್ಲಿರುವ ಜೆಡಿ (ಯು) ಪಕ್ಷದ ಕೆಲ ನಾಯಕರು ಆರೋಪಿಸಿದ್ದರು.

'ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದೇವೆ. ನಮ್ಮ ಬಗ್ಗೆ ಅವರು (ಬಿಜೆಪಿ ನಾಯಕರು) ಏನು ಹೇಳುವರು ಎಂಬ ಬಗ್ಗೆ ನಾನು ಗಮನ ಹರಿಸುವುದಿಲ್ಲ. ಅವರು ಏನು ಬೇಕೋ ಅದನ್ನು ಹೇಳಿಕೊಳ್ಳಲಿ. ಅದಕ್ಕೆ ಬೆಲೆ ಇಲ್ಲ. ರಾಜ್ಯದ ಸಮಗ್ರ ಬೆಳವಣಿಗೆ ಮಾತ್ರ ನಮ್ಮ ಕಳಕಳಿ' ಎಂದು ಹೇಳಿದರು.

'ಪಕ್ಷದಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಪ್ರಗತಿ ಸಾಧಿಸುತ್ತಿರುವುದನ್ನು ನೋಡಿ. ನಾನು 10 ಲಕ್ಷ ಉದ್ಯೋಗದ ಭರವಸೆ ನೀಡಿದ್ದು, ಇದರಲ್ಲಿ ಅರ್ಧ ದಾರಿ ಸವೆಸಿದ್ದೇವೆ' ಎಂದರು.

'ನಾನು ಪತ್ರಕರ್ತರನ್ನು ಯಾವಾಗಲೂ ಗೌರವದಿಂದ ಕಂಡಿದ್ದೇನೆ. ಆದರೆ ಇಂದು ನೀವು ನಾವು ಮಾಡಿದ ಒಳ್ಳೆಯ ಕೆಲಸದ ಬಗ್ಗೆ ಹೇಳುವುದಿಲ್ಲ. ಏಕೆಂದರೆ ನಿಮಗೆ ಮೇಲಿನಿಂದ ಒತ್ತಡ ಇದೆ. ಪರವಾಗಿಲ್ಲ ಬಿಡಿ, ಆಡಳಿತ ಬದಲಾದ ಹಾಗೆ ಎಲ್ಲವೂ ಬದಲಾಗುತ್ತದೆ' ಎಂದು ನಿತೀಶ್ ಹೇಳಿದರು.

ದಿವಂಗತ ವಾಜಪೇಯಿ ಅವರ ಕುರಿತು ತಮಗಿದ್ದ ಗೌರವವನ್ನು ವಿವರಿಸಿದ ಅವರು, 'ಅವರು ಅಧಿಕಾರದಲ್ಲಿದ್ದಾಗ ಯಾವ ಧರ್ಮದವರೂ ಆತಂಕ ಹೊಂದಿರಲಿಲ್ಲ' ಎಂದರು.

ವಾಜಪೇಯಿ ಅವರ ಪಕ್ಷ ಬಿಜೆಪಿ ಈಗಲೂ ಎಲ್ಲರನ್ನೂ ಒಳಗೊಳ್ಳುವ ಹುಮ್ಮಸ್ಸು ಹೊಂದಿದೆಯೇ ಎಂದು ಕೇಳಿದಾಗ, 'ಅರೆ, ನೀವೇನು ಮಾತನಾಡುತ್ತಾ ಇದ್ದೀರಾ' ಎಂದರು.

ಸೀಟು ಹಂಚಿಕೆ ವಿಷಯ ಆದಷ್ಟು ಬೇಗ ಅಂತಿಮಗೊಳ್ಳಬೇಕು. ಎಲ್ಲಾ ರಾಜ್ಯಗಳಲ್ಲಿ ಸಕಾಲದಲ್ಲಿ ಇದು ಆಗುತ್ತದೆ ಎಂಬ ವಿಶ್ವಾಸವಿದೆ
ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

ಪ್ರಧಾನಿ ನರೇಂದ್ರ ಮೋದಿ ಅವರು ಕ್ರಿಸ್‌ಮಸ್ ಆಂಗವಾಗಿ ನವದೆಹಲಿಯ ತಮ್ಮ ನಿವಾಸದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಶುಭಾಶಯ ಕೋರಿದರು –ಪಿಟಿಐ ಚಿತ್ರ

'ಬಡವರ ಸೇವೆ– ಕ್ರೈಸ್ತರ ಪಾತ್ರ ಅಪಾರ'

ನವದೆಹಲಿ (ಪಿಟಿಐ): 'ಸಮಾಜಕ್ಕೆ ಮಾರ್ಗದರ್ಶನ ನೀಡುವ ಮತ್ತು ಸೇವಾ ಮನೋಭಾವದ ವಿಚಾರದಲ್ಲಿ ಕ್ರೈಸ್ತರು ವಹಿಸಿರುವ ಪಾತ್ರವನ್ನು ದೇಶವು ಹೆಮ್ಮೆಯಿಂದ ಸ್ಮರಿಸುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಕ್ರಿಸ್‌ಮಸ್ ಅಂಗವಾಗಿ ತಮ್ಮ ನಿವಾಸದಲ್ಲಿ ಸೋಮವಾರ ಕ್ರೈಸ್ತ ಸಮುದಾಯದವರೊಂದಿಗೆ ಹಬ್ಬದ ಸಂಭ್ರಮದಲ್ಲಿ ಭಾಗಿಯಾದ ಅವರು, ಕ್ರೈಸ್ತರು ನೀಡಿರುವ ಕೊಡುಗೆಗಳನ್ನು ಶ್ಲಾಘಿಸಿದರು. ಈ ಹಿಂದೆ ಕ್ರೈಸ್ತರೊಂದಿಗೆ ತಾವು ಹೊಂದಿದ್ದ ನಿಕಟ ಹಾಗೂ ಸೌಹಾರ್ದಯುತ ಸಂಬಂಧವನ್ನು ಮೆಲುಕು ಹಾಕಿದರು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕ್ರೈಸ್ತ ಸಮುದಾಯದವರು ನಡೆಸಿಕೊಂಡು ಬರುತ್ತಿರುವ ಸಂಸ್ಥೆಗಳು ದೇಶದಾದ್ಯಂತ ಸಮಾಜದ ಏಳಿಗೆಯಲ್ಲಿ ಮಹತ

ಸೆಂಚುರಿಯನ್: ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಟೆಸ್ಟ್ ಪಂದ್ಯ ಇಂದಿನಿಂದ

ಹರಿಣಗಳ ನಾಡಲ್ಲಿ ಗೆಲುವಿನ ಗುರಿ

ಸೆಂಚುರಿಯನ್ (ಪಿಟಿಐ): ಸರಿಯಾಗಿ 36 ದಿನಗಳ ಹಿಂದೆ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಅನುಭವಿಸಿದ ಸೋಲಿನ ಆಘಾತದಿಂದ ರೋಹಿತ್ ಶರ್ಮಾ ಹೊರಬಂದಿರಬಹುದು. ಆದರೆ ಈಗ ಅವರ ಗುರಿ ದಕ್ಷಿಣ ಆಫ್ರಿಕಾ ನೆಲದಲ್ಲಿ ಮೊದಲ ಸರಣಿ ಜಯಿಸುವತ್ತ ನೆಟ್ಟಿದೆ.

ಎರಡು ಟೆಸ್ಟ್‌ಗಳ ಸರಣಿಯ ಮೊದಲನೆಯ ಪಂದ್ಯ 'ಬಾಕ್ಸಿಂಗ್ ಡೇ ದಿನ'ವಾದ ಮಂಗಳವಾರ (ಡಿ. 26) ಆರಂಭವಾಗಲಿದೆ. ಇದು 1992ರ ನಂತರ ಭಾರತಕ್ಕೆ, ಸ್ಪ್ರಿಂಗ್‌ಬಾಕ್ ಹರಿಣಗಳ ನಾಡಿನಲ್ಲಿ ಒಂಬತ್ತನೇ ಸರಣಿ. ಭಾರತ ಈ ಹಿಂದೆ ಇಲ್ಲಿ ಯಾವುದೇ ಸರಣಿಯನ್ನು ಗೆದ್ದಿಲ್ಲ. ಭಾರತ, ದಕ್ಷಿಣ ಆಫ್ರಿಕಾ ಹೊರತುಪಡಿಸಿ ಇತರ ಎಲ್ಲ ಟೆಸ್ಟ್ ಆಡುವ ತಂಡಗಳನ್ನು ಅವರದೇ ನೆಲದಲ್ಲಿ ಸೋಲಿಸಿ ಸರಣಿ ಜಯಿಸಿದೆ.

ಸೂಪರ್‌ಸ್ಪೋರ್ಟ್ ಪಾರ್ಕ್‌ನಲ್ಲಿ ಆರಂಭವಾಗುವ ಟೆಸ್ಟ್‌ನ ಮೊದಲ ಎರಡು ದಿನ ಭಾರಿ ಮಳೆಯ ಮುನ್ಸೂಚನೆಯಿದೆ. ಇಲ್ಲಿನ ಪಿಚ್ ವೇಗದ ಬೌಲರ್‌ಗಳಿಗೆ ನೆರವಾಗುವುದು ಸಾಮಾನ್ಯ. ಬೌನ್ಸ್ ಕೂಡ ಅಸಮಾನ. ವರ್ಷದ ಈ ಅವಧಿಯಲ್ಲಿ ತಂಪಾದ ಗಾಳಿ ಇಲ್ಲಿ ಸಾಮಾನ್ಯ.

ಇಲ್ಲಿ ಸರಣಿ ಗೆದ್ದಲ್ಲಿ ರೋಹಿತ್ ಆ ಸಾಧನೆ ಮಾಡಿದ ಮೊದಲಿಗರೆನಿಸುತ್ತಾರೆ. ಮೊಹಮ್ಮದ್ ಅಜರುದ್ದೀನ್ (1992), ಸಚಿನ್ ತೆಂಡೂಲ್ಕರ್ (1996) ಮತ್ತು ಸೌರವ್ ಗಂಗೂಲಿ ನಾಯಕರಾಗಿ ಪ್ರವಾಸ ಕೈಗೊಂಡಾಗ ಟೆಸ್ಟ್ ಗೆಲ್ಲಲು ವಿಫಲರಾಗಿದ್ದರು. ರಾಹುಲ್ ದ್ರಾವಿಡ್ (2006-07), ಧೋನಿ (2010-11 ಮತ್ತು 2013-14), ವಿರಾಟ್ ಕೊಹ್ಲಿ (2018-19 ಮತ್ತು 2021-22) ನೇತೃತ್ವದ ತಂಡ ಇಲ್ಲಿ ಟೆಸ್ಟ್ ಪಂದ್ಯ ಜಯಿಸಿತು. ಆದರೆ ಯಾರಿಗೂ ಸರಣಿ ಕೈಗೆಟಕಿಲ್ಲ. ಹೀಗಾಗಿ ರೋಹಿತ್ ಪಡೆಯ ಮುಂದೆ ಸವಾಲಿನ ಹಾದಿಯಿದೆ.

ಅಭ್ಯಾಸದಲ್ಲಿ ನಿರತವಾಗಿರುವ (ಎಡದಿಂದ) ಭಾರತ ತಂಡದ ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ –ಪಿಟಿಐ ಚಿತ್ರ

ಟೆಸ್ಟ್ ಪಂದ್ಯಗಳಲ್ಲಿ ಬಲಾಬಲ

	ಪಂದ್ಯಗಳು	ದಕ್ಷಿಣ ಆಫ್ರಿಕಾ ಗೆಲುವು	ಭಾರತ ಗೆಲುವು	ಡ್ರಾ
ಒಟ್ಟು	42	17	15	10
ದಕ್ಷಿಣ ಆಫ್ರಿಕಾ ನೆಲದಲ್ಲಿ	23	12	4	7
ಸೆಂಚುರಿಯನ್‌ನಲ್ಲಿ	3	2	1	0

ಕೊನೆಯ 5 ಟೆಸ್ಟ್ ಸರಣಿಯಲ್ಲಿ ಭಾರತದ ಸಾಧನೆ (ದಕ್ಷಿಣ ಆಫ್ರಿಕಾ ವಿರುದ್ಧ)

ವರ್ಷ	ಪಂದ್ಯ	ಗೆಲುವು	ಸೋಲು	ಡ್ರಾ
2006-07	3	1	2	0
2010-11	3	1	1	1
2013-14	2	0	1	1
2017-18	3	1	2	0
2021-22	3	1	2	0

ತೆಂಬಾ ಬವುಮಾ

ನಾಯಕರ ಬಲಾಬಲ

ರೋಹಿತ್ ಶರ್ಮ

ಪಂದ್ಯ	9
ಗೆಲುವು	5
ಡ್ರಾ	2
ಸೋಲು	2
ಗೆಲುವಿನ ಸರಾಸರಿ	55.6%

ತೆಂಬಾ ಬವುಮಾ

ಪಂದ್ಯ	2
ಗೆಲುವು	2
ಗೆಲುವಿನ ಸರಾಸರಿ	100%

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್ (ಕೀಪರ್) ಶ್ರೇಯಸ್ ಅಯ್ಯರ್, ರವೀಂದ್ರ ಜಡೇಜ, ರವಿಚಂದ್ರನ್ ಅಶ್ವಿನ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಪ್ರಸಿದ್ಧಕೃಷ್ಣ, ಕೆ.ಎಸ್. ಭರತ್ (ವಿಕೆಟ್ ಕೀಪರ್).

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಏಡನ್ ಮಾರ್ಕರಂ, ಟೋನಿ ಡಿ ಜೋರ್ಜಿ, ಡೀನ್ ಎಲ್ಗಾರ್, ಕೀಗನ್ ಪೀಟರ್ಸನ್, ಕೈಲ್ ವೆರಿಯನ್ (ವಿಕೆಟ್ ಕೀಪರ್), ಟ್ರಿಸ್ಟನ್ ಸ್ಟಬ್ಸ್ (ವಿಕೆಟ್ ಕೀಪರ್), ನ್ಯಾಂಡ್ರೆ ಬರ್ಗರ್, ಮಾರ್ಕೊ ಯಾನ್ಸೆನ್, ವಿಯಾನ್ ಮುಲ್ಡರ್, ಜೆರಾಲ್ಡ್ ಕೋಯ್ಸಿ, ಕೇಶವ ಮಹಾರಾಜ್, ಕಗಿಸೊ ರಬಾಡ, ಲುಂಗಿ ಗಿಡಿ, ಡೇವಿಡ್ ಬೆಡಿಂಗಮ್.

ಅಂಪೈರ್ಸ್: ಪಾಲ್ ರೀಫೆಲ್ (ಆಸ್ಟ್ರೇಲಿಯಾ), ಲಾಂಗ್ವನ್ ರುಸೆರೆ (ಜಿಂಬಾಬ್ವೆ). ಟಿವಿ ಅಂಪೈರ್: ಅಹ್ಸಾನ್ ರಝಾ (ಪಾಕಿಸ್ತಾನ). ಮ್ಯಾಚ್ ರೆಫ್ರಿ: ಕ್ರಿಸ್ ಬ್ರಾಡ್ (ಇಂಗ್ಲೆಂಡ್)

ಪಂದ್ಯ ಆರಂಭ: ಮಧ್ಯಾಹ್ನ 1.30.

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

'ಹಿಂದಿನ ತಂಡಗಳಿಂದ ಆಗದ್ದನ್ನು ಸಾಧಿಸುವ ಬಯಕೆ'

ಜೋಹಾನೆಸ್‌ಬರ್ಗ್ (ಪಿಟಿಐ): 'ಕಳೆದ 31 ವರ್ಷಗಳ ಅವಧಿಯಲ್ಲಿ ಭಾರತದ ಹಿಂದಿನ ತಂಡಗಳು ಮಾಡಲಾಗದ್ದನ್ನು (ದಕ್ಷಿಣ ಆಫ್ರಿಕಾದಲ್ಲಿ ಸರಣಿ ಜಯ) ಸಾಧಿಸಲು ಬಯಸಿದ್ದೇನೆ. ಆದರೆ ಅದೂ ಸಹ ಏಕದಿನ ವಿಶ್ವಕಪ್ ಫೈನಲ್ ಪಂದ್ಯದ ಸೋಲಿನ ಗಾಯದ ಕಲೆಯನ್ನು ಅಳಿಸಿಹಾಕದು' ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

'ತಂಡವಾಗಿ ನಾವು ಎಲ್ಲಿ ನಿಂತಿದ್ದೇವೆ ಎಂಬುದನ್ನು ಸಾಧಿಸಿ ತೋರಿಸಲು ಇಂಥ ಸರಣಿಗಳು ಮಹತ್ವದ್ದು. ನಾವಿಲ್ಲಿ ಒಮ್ಮೆಯೂ ಸರಣಿ ಗೆದ್ದಿಲ್ಲ. ನಮಗೆ ಇಲ್ಲಿ ಉತ್ತಮ ಪ್ರದರ್ಶನ ನೀಡಲು ಇದೊಂದು ದೊಡ್ಡ ಅವಕಾಶ' ಎಂದು ಮೊದಲ ಟೆಸ್ಟ್‌ಗೆ ಮುನ್ನಾದಿನವಾದ ಸೋಮವಾರ ಹೇಳಿದರು.

'ಹಿಂದೆ ಎರಡು ಬಾರಿ ಇಲ್ಲಿಗೆ ಪ್ರವಾಸ ಕೈಗೊಂಡಾಗ ನಾವು ಸರಣಿ ಗೆಲುವಿನ ಸಮೀಪಕ್ಕೆ ಬಂದಿದ್ದೆವು. ಈ ಭಾಗದಲ್ಲಿ ಹಿಂದಿನ (ಭಾರತದ) ತಂಡಗಳು ಮಾಡದ್ದನ್ನು ಸಾಧಿಸುವ ವಿಶ್ವಾಸದೊಡನೆ ಇಲ್ಲಿಗೆ ಬಂದಿದ್ದೇವೆ' ಎಂದಿದ್ದಾರೆ ರೋಹಿತ್.

ಆದರೆ ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಸರಣಿ ಗೆಲುವು ವಿಶ್ವಕಪ್ ಸೋಲಿಗೆ ಮುಲಾಮು ಆಗುವುದಿಲ್ಲ. ವಿಶ್ವಕಪ್‌ಗೆ ಅದರದೇ ಆದ ಸ್ಥಾನವಿದೆ. ಈ ಸಲ ನಾವು ಸಾಕಷ್ಟು ಪ್ರಯತ್ನ ಹಾಕಿದ್ದೇವೆ ಎಂದು ಹೇಳಿದರು.

2021ರ ಪ್ರವಾಸದಲ್ಲಿ ಸೆಂಚುರಿಯನ್ ಟೆಸ್ಟ್ ಪಂದ್ಯದಲ್ಲಿ ಶಮಿ ಅವರು ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಬಾರಿ ಅವರು ಆಡುತ್ತಿಲ್ಲ. 'ಇತ್ತೀಚಿನ ವರ್ಷಗಳಲ್ಲಿ ಶಮಿ ನೀಡಿದ ನಿರ್ವಹಣೆ ನೋಡಿದರೆ ತಂಡಕ್ಕೆ ಅವರ ಅನುಪಸ್ಥಿತಿ ದೊಡ್ಡದಾಗಿ ಕಾಡಲಿದೆ. ಆದರೆ ಯಾರಾದರೊಬ್ಬರು ಆ ಸ್ಥಾನದಲ್ಲಿ ಆಡಲಿದ್ದಾರೆ. ಆದರೆ ಅದು ಸುಲಭವಲ್ಲ. ಆದರೆ ನಮಗೆ ವಿಶ್ವಾಸವಿದೆ' ಎಂದರು.

'ಪ್ರಸಿದ್ಧ (ಕೃಷ್ಣ) ತಮ್ಮ ಎತ್ತರದಿಂದ ಪಿಚ್‌ನಲ್ಲಿ ಬೌನ್ಸ್ ಪಡೆಯಬಲ್ಲರು. ಮುಕೇಶ್ ಚೆಂಡನ್ನು ಸ್ವಿಂಗ್ ಮಾಡಬಲ್ಲರು. ಪಿಚ್ ನೋಡಿ ಮಂಗಳವಾರ ಬೆಳಿಗ್ಗೆ ತಂಡದ ಸ್ವರೂಪ ನಿರ್ಧರಿಸುತ್ತೇವೆ' ಎಂದರು.

'ಕೆ.ಎಲ್. ರಾಹುಲ್ ವಿಕೆಟ್ ಕೀಪಿಂಗ್ ಮಾಡುವುದು ತಂಡದ ಚಿಂತಕರ ಚಾವಡಿಯ ದೀರ್ಘಾವಧಿ ಯೋಜನೆಯಲ್ಲ. ಆದರೆ ಈ ಸರಣಿಯಲ್ಲಿ ಹೆಚ್ಚುವರಿ ಬ್ಯಾಟರ್ ಆಡಿಸಲು ಇದರಿಂದ ಅವಕಾಶವಾಗಲಿದೆ' ಎಂದು ಹೇಳಿದರು.

'ವಿಶ್ವಕಪ್‌ನಲ್ಲಿ ಅವರ ವಿಕೆಟ್ ಕೀಪಿಂಗ್ ಅಮೋಘವಾಗಿತ್ತು. ಅವರೂ ಆ (ವಿಕೆಟ್ ಕೀಪರ್) ಪಾತ್ರವನ್ನೂ ನಿಭಾಯಿಸಲು ಉತ್ಸುಕರಾಗಿದ್ದಾರೆ. ಹೀಗಾಗಿ 5,6 ಅಥವಾ 7ನೇ ಕ್ರಮಾಂಕದಲ್ಲಿ ಪರಿಣತ ಬ್ಯಾಟರ್ ಆಡಲು ಅವಕಾಶವಾಗಲಿದೆ' ಎಂದರು.

ರೋಹಿತ್ ಶರ್ಮಾ

ಆಸ್ಟ್ರೇಲಿಯಾ ಸರಣಿಗೆ ಶ್ರೇಯಾಂಕಾ

ಮಹಿಳಾ ಕ್ರಿಕೆಟ್: ಏಕದಿನ, ಟಿ20 ಪಂದ್ಯಗಳಿಗೆ ತಂಡ ಪ್ರಕಟ

ನವದೆಹಲಿ (ಪಿಟಿಐ): ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧದ ಮೂರು ಏಕದಿನ ಮತ್ತು ಟಿ20 ಪಂದ್ಯಗಳಿಗೆ ಭಾರತ ಮಹಿಳಾ ತಂಡವನ್ನು ಪ್ರಕಟಿಸಲಾಗಿದೆ. ಕನ್ನಡತಿ ಶ್ರೇಯಾಂಕಾ ಪಾಟೀಲ ಜೊತೆಗೆ ಮನ್ನತ್ ಕಶ್ಯಪ್, ಸೈಕಾ ಇಶಾಕ್ ಮತ್ತು ಟಿಟಾಸ್ ಸಾಧು ಅವರಿಗೆ ಏಕದಿನ ತಂಡದಲ್ಲಿ ಮೊದಲ ಬಾರಿಗೆ ಅವಕಾಶ ಕಲ್ಪಿಸಲಾಗಿದೆ.

ಡಿಸೆಂಬರ್ 28 ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಮೊದಲ ಏಕದಿನ ಪಂದ್ಯ ನಡೆಯಲಿದೆ. ಪಟಿಯಾಲ ಮೂಲದ 20ರ ಹರೆಯದ ಎಡಗೈ ಸ್ಪಿನ್ನರ್ ಕಶ್ಯಪ್ ಅವರನ್ನು ಈ ಹಿಂದೆ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ ಆಯ್ಕೆ ಮಾಡಲಾಗಿತ್ತು. ಆದರೆ ಅವರಿಗೆ ಆಡುವ ಅವಕಾಶ ಸಿಕ್ಕಿರಲಿಲ್ಲ.

ಈ ತಿಂಗಳ ಆರಂಭದಲ್ಲಿ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಪದಾರ್ಪಣೆ ಮಾಡಿದ ನಂತರ ಶ್ರೇಯಾಂಕಾ ಮೊದಲ ಬಾರಿಗೆ ಏಕದಿನ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹೀದರ್ ನೈಟ್ ನೇತೃತ್ವದ ಮಹಿಳಾ ತಂಡದ ವಿರುದ್ಧ ಈ ತಿಂಗಳ ಆರಂಭದಲ್ಲಿ ನಡೆದ ಮೂರು ಟಿ20 ಪಂದ್ಯಗಳಲ್ಲಿ, ಶ್ರೇಯಾಂಕಾ ಐದು ವಿಕೆಟ್‌ಗಳನ್ನು ಪಡೆದಿದ್ದರು. ಮೂರನೇ ಮತ್ತು ಅಂತಿಮ ಪಂದ್ಯದಲ್ಲಿ ಪಂದ್ಯದ ಆಟಗಾರ್ತಿ ಪ್ರಶಸ್ತಿಯನ್ನೂ ಗಳಿಸಿದ್ದರು.

ಕಶ್ಯಪ್ ಅವರು ಫೆಬ್ರವರಿಯಲ್ಲಿ ನಡೆದ 19 ವರ್ಷದೊಳಗಿನ ಭಾರತ ಮಹಿಳಾ ವಿಶ್ವಕಪ್ ವಿಜೇತ ತಂಡದ ಭಾಗವಾಗಿದ್ದರು. ಟಿಟಾಸ್ ಸಾಧು ಕೂಡ ಇದ್ದರು.

ಉದ್ಘಾಟನಾ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಮುಂಬೈ ಫ್ರಾಂಚೈಸಿಯ ಅಗ್ರ ಬೌಲರ್‌ಗಳಲ್ಲಿ ಸೈಕಾ ಇಶಾಕ್ ಸಹ ಒಬ್ಬರಾಗಿದ್ದರು. ಮೂರು ಪಂದ್ಯಗಳ ಏಕದಿನ ಸರಣಿ ಡಿಸೆಂಬರ್ 28 ರಿಂದ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ. ಮುಂದಿನ ಎರಡು ಪಂದ್ಯಗಳು ಡಿಸೆಂಬರ್ 30 ಮತ್ತು ಜನವರಿ 2 ರಂದು ನಡೆಯಲಿವೆ.

ಜನವರಿ 5, 7 ಮತ್ತು 9 ರಂದು ಟಿ20 ಪಂದ್ಯಗಳಿಗೆ ನವೀ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

ಏಕದಿನ ಮತ್ತು ಟಿ20 ತಂಡಗಳಿಗೆ ಹರ್ಮನ್ ಪ್ರೀತ್ ಕೌರ್ ನಾಯಕಿಯಾಗಿ ಉಳಿದಿದ್ದು, ಸ್ಮೃತಿ ಮಂದಾನ ಉಪನಾಯಕಿಯಾಗಿದ್ದಾರೆ.

ಏಕದಿನ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ಅಮನ್‌ಜೋತ್ ಕೌರ್, ಶ್ರೇಯಾಂಕಾ ಪಾಟೀಲ, ಮನ್ನತ್ ಕಶ್ಯಪ್, ಸೈಕಾ ಇಶಾಕ್, ರೇಣುಕಾ ಸಿಂಗ್ ಠಾಕೂರ್, ಟಿಟಾಸ್ ಸಾಧು, ಪೂಜಾ ವಸ್ತ್ರಕರ್, ಸ್ನೇಹಾ ರಾಣಾ, ಹರ್ಲಿನ್ ಡಿಯೋಲ್.

ಟಿ20 ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ಅಮನ್‌ಜೋತ್ ಕೌರ್, ಶ್ರೇಯಾಂಕಾ ಪಾಟೀಲ, ಮನ್ನತ್ ಕಶ್ಯಪ್, ಸೈಕಾ ಇಶಾಕ್, ರೇಣುಕಾ ಸಿಂಗ್ ಠಾಕೂರ್, ಟಿಟಾಸ್ ಸಾಧು, ಪೂಜಾ ವಸ್ತ್ರಕರ್, ಕನಿಕಾ ಅಹುಜಾ, ಮಿನ್ನು ಮಣಿ.

ಕನ್ನಡತಿ ಶ್ರೇಯಾಂಕಾ ಪಾಟೀಲ

ಪಾಕ್ ತಂಡಕ್ಕೆ ಹೈ ಪರ್ಫಾರ್ಮೆನ್ಸ್ ಕೋಚ್ ನೇಮಕ

ಕರಾಚಿ (ಪಿಟಿಐ): ಮಾಜಿ ಆಲ್‌ರೌಂಡರ್ ಯಾಸಿರ್ ಅರಾಫತ್ ಅವರನ್ನು ಮುಂದಿನ ತಿಂಗಳು ನಡೆಯುವ ನ್ಯೂಜಿಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಗೆ ಪಾಕಿಸ್ತಾನ ಕ್ರಿಕೆಟ್ ತಂಡಕ್ಕೆ 'ಹೈ ಪರ್ಫಾರ್ಮೆನ್ಸ್' ಕೋಚ್ ಆಗಿ ಪಾಕ್ ಕ್ರಿಕೆಟ್ ಮಂಡಳಿ ನೇಮಿಸಿದೆ.

ಯಾಸಿರ್ ಅರಾಫತ್

ನ್ಯೂಜಿಲೆಂಡ್‌ನಲ್ಲಿ ನಡೆಯುವ ಟಿ20 ಸರಣಿಗೆ 17 ಸದಸ್ಯರ ಪಾಕ್ ತಂಡವನ್ನು ಈಗಾಗಲೇ ಪ್ರಕಟಿಸಲಾಗಿದೆ. ಈ ಸರಣಿಯು ಮುಂದಿನ ವರ್ಷ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೆ ಪಾಕ್ ಪಾಲಿಗೆ ಪೂರ್ವಸಿದ್ಧತೆಯಾಗಿದೆ. ಯಾಸಿರ್ ಅವರು 2009ರ ಐಸಿಸಿ ಟಿ20 ವಿಶ್ವಕಪ್ ಗೆದ್ದ ಪಾಕ್ ತಂಡದ ಭಾಗವಾಗಿದ್ದರು.

ಬ್ರೆಜಿಲ್ ಅಮಾನತು: ಫಿಫಾ ಎಚ್ಚರಿಕೆ

ರಿಯೊ ಡಿ ಜನೈರೊ (ಎಪಿ): ಜನವರಿಯಲ್ಲಿ ಹೊಸ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಬ್ರೆಜಿಲ್ ಫುಟ್‌ಬಾಲ್ ಸಂಸ್ಥೆ ಹಸ್ತಕ್ಷೇಪ ನಡೆಸಿದರೆ ತನ್ನ ರಾಷ್ಟ್ರೀಯ ತಂಡ ಮತ್ತು ಕ್ಲಬ್‌ಗಳನ್ನು ಅಂತರರಾಷ್ಟ್ರೀಯ ಸ್ಪರ್ಧೆಗಳಿಂದ ಅಮಾನತುಗೊಳಿಸಬಹುದು ಎಂದು ವಿಶ್ವ ಫುಟ್‌ಬಾಲ್ ಫೆಡರೇಷನ್ (ಫಿಫಾ) ಎಚ್ಚರಿಸಿದೆ.

ಬ್ರೆಜಿಲ್ ಫುಟ್‌ಬಾಲ್ ಕಾರ್ಯನಿರ್ವಾಹಕರಿಗೆ ಪತ್ರ ಬರೆದಿರುವ ಫಿಫಾ, 'ದೇಶದ ಫುಟ್‌ಬಾಲ್ ಸಂಸ್ಥೆ ಸಿಬಿಎಫ್ ತನ್ನ ಮಾತಿಗೆ ಕಿವಿಗೊಡದಿದ್ದರೆ ಅಮಾನತು ಎದುರಿಸಬೇಕಾಗುತ್ತದೆ. ಬದಲಿಗೆ ಎಡ್ನಾಲ್ಡೊ ರಾಡ್ರಿಗಸ್ ಅವರನ್ನು ಬದಲಿಸಲು ಶೀಘ್ರವೇ ಚುನಾವಣೆ ನಡೆಸಬಹುದು' ಎಂದು ಹೇಳಿದೆ. ಈ ಕುರಿತ ದಾಖಲೆ ಅಸೋಸಿಯೇಟ್ ಪ್ರೆಸ್‌ಗೆ ದೊರೆತಿದೆ.

ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಅಕ್ರಮ ಎಸಗಿದ ಕಾರಣ ರಾಡ್ರಿಗಸ್ ಮತ್ತು ಸಿಬಿಎಫ್‌ನಲ್ಲಿ ನೇಮಕಗೊಂಡ ಎಲ್ಲರನ್ನು ಡಿಸೆಂಬರ್ 7 ರಂದು ರಿಯೊ ಡಿ ಜನೈರೊ ನ್ಯಾಯಾಲಯವು ಅಧಿಕಾರದಿಂದ ತೆಗೆದುಹಾಕಿತು. ಬ್ರೆಜಿಲ್‌ನ ಎರಡು ಉನ್ನತ ನ್ಯಾಯಾಲಯಗಳು ಕಳೆದ ವಾರ ಆ ತೀರ್ಪನ್ನು ಎತ್ತಿಹಿಡಿದಿವೆ.

ರಿಯೊ ನ್ಯಾಯಾಲಯದ ತೀರ್ಪಿನಲ್ಲಿ ಬ್ರೆಜಿಲ್‌ನ ಉನ್ನತ ಕ್ರೀಡಾ ನ್ಯಾಯಾಲಯದ ಮುಖ್ಯಸ್ಥ ಜೋಸ್ ಪೆಡ್ರಿಜಿ ಅವರನ್ನು 30 ಕೆಲಸದ ದಿನಗಳಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹೊಸ ಚುನಾವಣೆ ಆಯೋಜಿಸಲು ಮಧ್ಯಸ್ಥಿಕೆದಾರರಾಗಿ ಹೆಸರಿಸಲಾಗಿದೆ. ಅಧ್ಯಕ್ಷರ ಆಯ್ಕೆಯಲ್ಲಿ ಹಸ್ತಕ್ಷೇಪವನ್ನು ಅನಗತ್ಯವೆಂದು ಪರಿಗಣಿಸುತ್ತದೆ ಎಂದು ಫಿಫಾ ಹಿಂದಿನ ಪತ್ರಗಳಲ್ಲೂ ಸಿಬಿಎಫ್‌ಗೆ ಹೇಳಿತ್ತು.

ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದ ಕನ್ನಡಿಗರಿಗೂ ಗೌರವ

ಇಂದು ಕೆಒಎ ವಾರ್ಷಿಕ ಪ್ರಶಸ್ತಿ ಪ್ರದಾನ

ಬೆಂಗಳೂರು: ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) 20ನೇ ವರ್ಷದ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ರಾಜಭವನದಲ್ಲಿ ಮಂಗಳವಾರ (ಡಿ. 26ರಂದು) ಸಂಜೆ 4.30ಕ್ಕೆ ನಡೆಯಲಿದೆ. ಒಟ್ಟು 22 ಮಂದಿಗೆ 2023ನೇ ಸಾಲಿನ ವಾರ್ಷಿಕ ಪ್ರಶಸ್ತಿ ನೀಡಲಾಗುವುದು.

ಇದೇ ಸಂದರ್ಭದಲ್ಲಿ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಪದಕ ವಿಜೇತರಾದ ಎಂಟು ಮಂದಿಯನ್ನು ಗೌರವಿಸಲಾಗುವುದು. ಕ್ರೀಡಾಪಟುಗಳು ಮತ್ತು ಪ್ರಶಸ್ತಿ ಪುರಸ್ಕೃತರು, ಏಷ್ಯನ್ ಗೇಮ್ಸ್ ಪದಕ ವಿಜೇತರಿಗೆ ತಲಾ ₹1ಲಕ್ಷ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಲಾಗುವುದು. ಹಿರಿಯ (ವೆಟರನ್) ಕ್ರೀಡಾಪಟುಗಳು ಮತ್ತು ಕ್ರೀಡಾ ಆಡಳಿತಗಾರ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹50 ಸಾವಿರ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ಪಡೆಯಲಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಸಚಿವ ನಾಗೇಂದ್ರ ಅವರು ಅತಿಥಿಗಳಾಗಿದ್ದು, ಏಷ್ಯನ್ ಗೇಮ್ಸ್ ಪದಕ ಗೆದ್ದವರಿಗೆ ನಗದು ಬಹುಮಾನ ನೀಡಲಿದ್ದಾರೆ ಕೆಒಎ ಮಹಾಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿ ಪುರಸ್ಕೃತರಲ್ಲಿ **'ಪ್ರಜಾವಾಣಿ'**ಯ ಕ್ರೀಡಾ ವಿಭಾಗದ ಮುಖ್ಯ ವರದಿಗಾರ ಗಿರೀಶ ದೊಡ್